# ಸಮಗ್ರ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ 2011

**ಕರ್ನಾಟಕ ಸರ್ಕಾರ**

**ಬೆಂಗಳೂರು**

# ಸಮಗ್ರ ಕರ್ನಾಟಕ ಕೃಷಿ-ವಾಣಿಜ್ಯ ನೀತಿ 2011

**ಪ್ರಕಟಣೆ :**
**ಕೃಷಿ ಇಲಾಖೆ,**
**ಕರ್ನಾಟಕ ಸರ್ಕಾರ, ಬೆಂಗಳೂರು**

# ಸಮಗ್ರ ಕರ್ನಾಟಕ ಕೃಷಿ-ವಾಣಿಜ್ಯ ನೀತಿ 2011


| ಕ್ರಮ ಸಂಖ್ಯೆ | ಪರಿವಿಡಿ | ಪುಟ ಸಂಖ್ಯೆ |
|---|---|---|
| | ಪ್ರಸ್ತಾವನೆ | 1 - 2 |
| 1 | ಪೀಠಿಕೆ | 3 - 5 |
| 2 | ಅವಕಾಶ ಮತ್ತು ವ್ಯಾಪ್ತಿ | 5 - 6 |
| 3 | ದೃಷ್ಟಿಕೋನ | 6 |
| 4 | ಉದ್ದೇಶ ಮತ್ತು ಕಾರ್ಯತಂತ್ರ | 6 - 11 |
| 5 | ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮ (KABDC) | 11 - 12 |
| 6 | ಕೃಷಿ ಪರಿಕರ ವಲಯದ ಅಭಿವೃದ್ಧಿ | 12 |
| 7 | ಅತಿಮುಖ್ಯವಾದ ಉತ್ಪನ್ನಗಳ ಅಭಿವೃದ್ಧಿಯೆಡೆ ಗಮನ | 13 |
| 8 | ಸರಕಿನ ಗುರುತು ಅಭಿವೃದ್ಧಿ | 13 |
| 9 | ಒಪ್ಪಂದ ಕೃಷಿ | 13 |
| 10 | ಕೃಷಿ, ಬೇಸಾಯ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ, ಜೇನು ಕೃಷಿ ಮತ್ತು ಪಶುಸಂಗೋಪನೆ | 13 - 15 |
| 11 | ಸಾವಯವ ಕೃಷಿ ಸಮುಚ್ಚಯ | 15 |
| 12 | ಕೃಷಿ - ತೋಟ - ಪಶು ಸಂಗೋಪನೆ – ಮೀನುಗಾರಿಕೆ – ಆಹಾರ ಸಂಸ್ಕರಣೆ ಸಮುಚ್ಚಯ | 15 - 16 |
| 13 | ಕೃಷಿ ಮೂಲ ಸೌಕರ್ಯ | 16 - 18 |
| 14 | ಕೃಷಿ ಆಧಾರಿತ ಕೈಗಾರಿಕೆಗಳು | 18 - 27 |
| 15 | ತಂತ್ರಜ್ಞಾನವನ್ನು ನೀಡುವ ಕೇಂದ್ರ | 27 - 28 |
| 16 | ಮಾರುಕಟ್ಟೆ ತಿಳಿವು / ಜ್ಞಾನ ಕೋಶ | 28 |
| 17 | ವಿಶೇಷ ಕೃಷಿ ಪ್ರವಾಸೋದ್ಯಮ ಬಂಡವಾಳ ವಲಯಗಳು | 28 - 29 |
| 18 | ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವುದು | 29 |
| 19 | ಆರ್ಥಿಕ ಪ್ರೋತ್ಸಾಹಗಳು ಮತ್ತು ಸೌಲಭ್ಯಗಳು | 29 - 30 |
| 20 | ಕೃಷಿ ಆಧಾರಿತ ಕಾರ್ಖಾನೆಗಳಿಗೆ ಕೃಷಿಯ ಮೂಲಭೂತ ಸೌಕರ್ಯಗಳಿಗಾಗಿ ಭೂಮಿ | 30 - 31 |
| 21 | ಕೃಷಿ ಆಧಾರಿತ ಕೃಗಾರಿಕೆಗಳಿಗೆ ಮತ್ತು ಕೃಷಿ ಸಂಬಂಧಿತ ಮೂಲಭೂತ ಸೌಕರ್ಯಗಳಿಗೆ ಹಣ ಹೂಡಿಕೆ | 31 - 38 |
| 22 | ಜಾರಿತರುವ ದಿನಾಂಕ ಮತ್ತು ವಾಯಿದೆ (ಎಫೆಕ್ಟೀವ್ ಡೇಟ್ ಎಂಡ್ ವ್ಯಾಲಿಡಿಟಿ) | 38 |
| 23 | ಉಪ-ವಲಯಗಳ ನೀತಿಗಳು | 38 |
| 24 | ಇತರ ಸಂಬಂಧಿತ ನೀತಿಗಳು | 38 |

# ಸಮಗ್ರ ಕರ್ನಾಟಕ ಕೃಷಿ-ವಾಣಿಜ್ಯ ನೀತಿ 2011

## ಪ್ರಸ್ತಾವನೆ

ಕರ್ನಾಟಕ ರಾಜ್ಯವು, ಸಮಗ್ರ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿಯನ್ನು ಜಾರಿಗೊಳಿಸುವುದರ ಮೂಲಕ ಸುಸ್ಥಿರ ಕೃಷಿ ವಾಣಿಜ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ಆರಂಭಿಕ ಮುಂದಾಳತ್ವ ವಹಿಸಿದೆ. ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳಾದ ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ, ರೇಷ್ಮೆ ಕೃಷಿ ಮತ್ತು ಆಹಾರ ಸಂಸ್ಕರಣೆ ಮೂಲಭೂತ ಸೌಕರ್ಯಗಳು ಮತ್ತು ಕೈಗಾರಿಕಾ ವಲಯಗಳಲ್ಲಿ ಈ ಎರಡೂ ಅಂಶಗಳ ಬಗ್ಗೆ ಪ್ರಾರಂಭದಿಂದ ತಳ ಮಟ್ಟದವರೆಗಿನ ಪರಿಕಲ್ಪನೆಯನ್ನು ಹೊಂದಿದೆ.

ಭಾರತದಲ್ಲಿ ಕೃಷಿ, ಕ್ರಾಂತಿಕಾರಕ ಬದಲಾವಣೆಯ ಉತ್ತುಂಗದಲ್ಲಿದೆ. ಕಳೆದ ದಶಕಕ್ಕಿಂತಲೂ ಇತ್ತೀಚಿನ ದಿನಗಳಲ್ಲಿ ಸೇವಾ ವಲಯಗಳಲ್ಲಿ ಅಸಾಮಾನ್ಯ ಪ್ರಗತಿ ಸಾಧಿಸಿದೆ. ಇದು ಭಾರತದ ಆರ್ಥಿಕ ಪರಿಸ್ಥಿತಿಯ ತೀವ್ರ ಮುನ್ನೆಡೆ ಸಾಧಿಸುವಲ್ಲಿ ಸಹಕಾರಿಯಾಗಿದೆ. ವಿಶೇಷವಾಗಿ ತಂತ್ರಜ್ಞಾನ ಕ್ರಾಂತಿಯಲ್ಲಿ ಕರ್ನಾಟಕವು ಮಂಚೂಣಿಯಲ್ಲಿದೆ.

ಭವಿಷ್ಯದಲ್ಲಿ ಕೃಷಿ ಮತ್ತು ಸಂಬಂಧಿತ ವಲಯಗಳ ಪ್ರಗತಿ ಹೊಸದಾದ ಮತ್ತು ವಿಶ್ವದಾದ್ಯಂತ ಆಗುತ್ತಿರುವ ಸ್ಪರ್ಧಾತ್ಮಕ ತಂತ್ರಜ್ಞಾನದ ಅಭಿವೃದ್ಧಿಯನ್ನು ಆಧರಿಸಿದೆ. ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದ ರೈತರ ಬದುಕಿಗೆ ಹೊಸ ತಂತ್ರಜ್ಞಾನವು ಮಹತ್ತರವಾದ ಸುಧಾರಣೆ ತಂದಿದೆ. ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ರಾಷ್ಟ್ರಗಳು ಇಂಥಹ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕೃಷಿ ವಲಯದಲ್ಲಿ ಹಂತ ಹಂತವಾಗಿ ಮೇಲೇರುತ್ತಾ ಉತ್ತಮ ಫಲಿತಾಂಶ ಪಡೆದಿವೆ.

ಕೃಷಿ-ಹವಾಮಾನ ಹತ್ತು ಹಲವು ವಲಯಗಳಲ್ಲಿ ಹಾಗೂ ನಿಸರ್ಗದ ಉದಾರತೆಯ ಲಾಭಪಡೆದುಕೊಂಡಿರುವ ಕರ್ನಾಟಕ, ಕೃಷಿ ಮತ್ತು ಸಂಬಂಧಿತ ವಲಯಗಳ ಬೆಳವಣಿಗೆಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿದೆ. ಕರ್ನಾಟಕ ಹೊಸ ಆವಿಷ್ಕಾರಗಳ, ಆಧುನಿಕ ಪ್ರಾತ್ಯಕ್ಷಿಕೆ ಹಾಗೂ ಇತರೆ ಎಲ್ಲಾ ಅವಕಾಶಗಳನ್ನು ಪಡೆದುಕೊಂಡು ಹೊಸ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿ ಬೆಳೆಯುತ್ತಿರುವ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಯ ಬೇಡಿಕೆಯ ಅಗತ್ಯವನ್ನು ಪೂರೈಸುತ್ತಿದೆ. ಮುಖ್ಯವಾಗಿ ಎಚ್ಚರ ವಹಿಸಲೇಬೇಕಾದ ಸಂಗತಿಗಳೆಂದರೆ, ಸುಧಾರಿತ ಉತ್ಪಾದನೆ ಮತ್ತು ಉತ್ಪಾದಕತೆ, ಉತ್ಪಾದನೆ ವೆಚ್ಚ ಕಡಿಮೆ ಮಾಡುವುದು, ಉತ್ಪಾದನಾ ತ್ಯಾಜ್ಯ ಕಡಿಮೆ ಮಾಡುವುದು, ಮೌಲ್ಯವರ್ಧನೆ ಹೆಚ್ಚಳ, ದರ ಸ್ಥಿರತೆ, ಹೈ ಟೆಕ್ ಕೃಷಿ ತಂತ್ರಜ್ಞಾನದ ಅಳವಡಿಕೆ, ವಂಶವಾಹಿ ಮಾರ್ಪಡಿಸಿದ ತಳಿಗಳು, ಸೂಕ್ಷ್ಮ ಸಸ್ಯಾಭಿವೃದ್ಧಿ, ಸೂಕ್ಷ್ಮ ನೀರಾವರಿ/ರಸನೀರಾವರಿ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ಸಾವಯವ ಕೃಷಿ, ಸಮಗ್ರ ಪೀಡೆ ನಿರ್ವಹಣೆ, ನಿಯಂತ್ರಿತ ಬೇಸಾಯ / ಹಸಿರುಮನೆ ತಂತ್ರಜ್ಞಾನ, ಕೊಯಿಲೋತ್ತರ ನಿರ್ವಹಣೆ, ದೇಶೀಯ ಪಶು ಸಂರಕ್ಷಣೆ ಮತ್ತು ಅಭಿವೃದ್ಧಿ, ಆರೋಗ್ಯಕರ ಮತ್ತು ಆಧುನಿಕ ಮೀನು ನಿರ್ವಹಣಾ ಸೌಲಭ್ಯಗಳು, ಕಸಾಯಿಖಾನೆ ಆಧುನೀಕರಣ, ಆಹಾರ ಸಂಸ್ಕರಣಾ ಘಟಕಗಳಲ್ಲಿ ಆಧುನಿಕ ತಂತ್ರಜ್ಞಾನ ಮತ್ತು ಹೊಸ ಯಂತ್ರಗಳ ಅಳವಡಿಕೆ, ರಫ್ತು ಮಾರುಕಟ್ಟೆಯಲ್ಲಿ ಪ್ರತಿ ಘಟಕದಲ್ಲಿ ಹೆಚ್ಚಿನ ಲಾಭವನ್ನು ಗಳಿಸುವುದು ಇತ್ಯಾದಿ.

ಈ ಕೃಷಿ ವಾಣಿಜ್ಯ ನೀತಿಯು ಈ ಮೇಲೆ ತಿಳಿಸಿರುವ ಆದ್ಯತೆಯ ಕ್ಷೇತ್ರಗಳಾದ ಬಂಡವಾಳ ಹೂಡಿಕೆ, ತಂತ್ರಜ್ಞಾನಗಳ ಕೌಶಲ್ಯತೆ ಹಾಗೂ ಆಧುನಿಕ ನಿರ್ವಹಣಾ ವಿಭಾಗಗಳ ಅಳವಡಿಕೆ ಒಂದು ಸಾಂಸ್ಥಿಕ ರಚನೆಯನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ. ಈ ನೀತಿ ಸ್ಪಷ್ಟವಾಗಿ ತಿಳಿಸುವುದೇನೆಂದರೆ: ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಸರಬರಾಜನ್ನು ಪೂರಕಗೊಳಿಸಲು ಮಾರುಕಟ್ಟೆ ಅರಿವಿನ ಮೂಲಕ ಮಾರುಕಟ್ಟೆಯ ಪ್ರವೇಶವನ್ನು ಇನ್ನಷ್ಟು ಸುಧಾರಿಸುವುದು. ಅಲ್ಲದೆ, ಕೃಷಿ ವಲಯದ ಅಭಿವೃದ್ಧಿಗೆ ಅಡಚಣೆಯಾಗಿರುವ ನಿಯಂತ್ರಿತ ತೊಡಕುಗಳನ್ನು ಪರಿಷ್ಕರಿಸಲಾಗಿದೆ. ಹೆಚ್ಚಿನ ಇಳುವರಿ

ಪಡೆಯಲು, ಗ್ರಾಹಕರಿಗೆ ರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆಯಲ್ಲಿ ಕಡಿಮೆ ದರ ನಿರ್ಧರಿಸುವುದು, ವರ್ಗೀಕರಣ ಮತ್ತು ಆಹಾರ ಭದ್ರತೆಯ ಪ್ರಾತಕ್ಷಿಕೆ ಬಗ್ಗೆ ಮಾಹಿತಿ, ರಫ್ತು ಹೆಚ್ಚಿಸುವುದು, ಕೊಯಿಲೋತ್ತರ ನಷ್ಟ ಕಡಿತಗೊಳಿಸುವುದು, ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ತಂತ್ರಜ್ಞಾನದ ಅವ್ಯಾಹತ ಬಳಕೆ ಮಾಡುವುದಕ್ಕಾಗಿ ಕೃಷಿ-ವಾಣಿಜ್ಯ ನೀತಿಯು ಒಂದು ಚೌಕಟ್ಟನ್ನು ದೊರಕಿಸಿಕೊಡಲು ಆಶಿಸುತ್ತದೆ. ಪ್ರಸಕ್ತ ತಂತ್ರಜ್ಞಾನದ ಅಳವಡಿಕೆ, ಉತ್ತಮ ಕಾರ್ಯ ನಿರ್ವಹಣೆ ಮತ್ತು ಉತ್ಪನ್ನಗಳನ್ನು ಅಂತರ ರಾಷ್ಟ್ರೀಯ ಮಾರುಕಟ್ಟೆಗೆ ಒಯ್ಯುವುದಷ್ಟೆ ಅಲ್ಲದೆ ಸರ್ಕಾರೇತರ ಸಂಸ್ಥೆಗಳಿಂದ ಹಣ ತೊಡಗಿಸಿ ಕೃಷಿ ಮಾರುಕಟ್ಟೆಗಳ ಮೂಲಭೂತ ಸೌಕರ್ಯ ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳನ್ನು ಉತ್ತಮವಾಗಿ ಮತ್ತು ಪಾರದರ್ಶಕತೆಯಿಂದ ಅಭಿವೃದ್ಧಿಪಡಿಸಿ ಧೃಡವಾದ ಕೃಷಿ-ವಾಣಿಜ್ಯವನ್ನು ಕರ್ನಾಟಕದಲ್ಲಿ ವೃದ್ಧಿಸುವುದೇ ಈ ನೀತಿಯ ಮತ್ತೊಂದು ಉದ್ದೇಶ.

ಸಮಗ್ರ ಕೃಷಿ-ವಾಣಿಜ್ಯ ನೀತಿ - 2011 ಅನ್ನು ಕರ್ನಾಟಕ ರಾಜ್ಯ ಸರ್ಕಾರ ಮತ್ತು ಭಾರತ ಸರ್ಕಾರ ಸಿದ್ಧಪಡಿಸಿರುವ ಇತರೆ ಸುಸಂಬದ್ಧವಾದ ನೀತಿಗಳ ಜೊತೆಯಲ್ಲಿ ಓದಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರಕ್ಕೆ ಈ ನೀತಿ ಅತ್ಯಂತ ಅಗತ್ಯ ಮತ್ತು ಸಮಯೋಚಿತ. ಕಾರಣವೇನೆಂದರೆ, ಇದು ರೈತರ ಆದಾಯ ಹೆಚ್ಚಿಸುವುದಕ್ಕಷ್ಟೇ ಅಲ್ಲದೆ ರಾಜ್ಯದ ತಲಾವಾರು ಸಮಗ್ರ ಆಂತರಿಕ ಉತ್ಪನ್ನ (ಜಿ.ಡಿ.ಪಿ) ಮತ್ತು ಮುಖ್ಯವಾಗಿ ಆಹಾರ ಭದ್ರತೆಯನ್ನು ಉತ್ತಮಪಡಿಸುವುದಕ್ಕೆ ಆದ್ಯತೆ ನೀಡುತ್ತದೆ.

# ಸಮಗ್ರ ಕರ್ನಾಟಕ ಕೃಷಿ-ವಾಣಿಜ್ಯ ನೀತಿ 2011

## 1. ಪೀಠಿಕೆ

1.1 ಕರ್ನಾಟಕ ಸರ್ಕಾರವು, ರಾಜ್ಯದ ಸಮಗ್ರ ಆಂತರಿಕ ಉತ್ಪನ್ನದ ಬೆಳವಣಿಗೆ ಹೆಚ್ಚಿಸಲು, ರೈತರು ಹೆಚ್ಚಿನ ಆದಾಯ ಪಡೆಯಲು ಹಾಗೂ ಆಹಾರ ಭದ್ರತೆಯನ್ನು ನಿಶ್ಚಿತಗೊಳಿಸಲು ಕೃಷಿ ಹಾಗೂ ಕೃಷಿ ಸಂಬಂಧಿತ ವಲಯಗಳ ಹೆಚ್ಚಿನ ಅಭಿವೃದ್ಧಿ ಅತ್ಯಗತ್ಯವೆಂದು ಪರಿಗಣಿಸುತ್ತದೆ. ಕರ್ನಾಟಕವು ಹತ್ತು ಕೃಷಿ ಹವಾಮಾನ ವಲಯಗಳು ಹೊಂದಿದ್ದು, ಹೆಚ್ಚಿನ ಜೈವಿಕ ವೈವಿಧ್ಯತೆಯಿಂದ ಕೂಡಿದ್ದು, ಪ್ರಮುಖವಾಗಿ ಕೃಷಿ ಮತ್ತು ತೋಟಗಾರಿಕೆ ಬೆಳೆ ಬೆಳೆಸಲು ಅನುಕೂಲಕರವಾಗಿರುವುದಲ್ಲದೇ ಮೀನುಗಾರಿಕೆಗೆ ಪೂರಕವಾದ ಉದ್ದನೆಯ ಕರಾವಳಿ ಪ್ರದೇಶ ಹೊಂದಿರುತ್ತದೆ. ರಾಜ್ಯವು ರಾಷ್ಟ್ರಕ್ಕೆ ಕೃಷಿ ಉತ್ಪಾದನೆಯಲ್ಲಿ ಶೇಖಡ 7 ರಷ್ಟು ಹಾಗೂ ತೋಟಗಾರಿಕೆಯ ಉತ್ಪಾದನೆಯಲ್ಲಿ ಶೇಖಡ 15 ರಷ್ಟು ಕೊಡುಗೆ ನೀಡುತ್ತದೆ. ಅಲ್ಲದೇ ರಾಜ್ಯವು ರಾಷ್ಟ್ರಕ್ಕೆ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ಶೇಖಡ 10 ರಷ್ಟು ಕೊಡುಗೆ ನೀಡುತ್ತದೆ. ವಾಣಿಜ್ಯ ಬೆಳೆಗಳಾದ ಕಾಫಿ, ತೆಂಗು, ಸಾಂಬಾರು ಪದಾರ್ಥಗಳು, ಪುಷ್ಪಗಳು, ಸುಗಂಧ ಬೆಳೆಗಳು, ಹತ್ತಿ, ಕಬ್ಬು, ಎಣ್ಣೆ ಕಾಳು, ದ್ರಾಕ್ಷಿ, ದಾಳಿಂಬೆ ಹಾಗೂ ಸಪೋಟ ಮುಂತಾದವುಗಳನ್ನು ಬೆಳೆಯಲು ಸರಿಹೊಂದುವಂತಹ ಉತ್ತಮ ಹವಾಮಾನವನ್ನು ಹೊಂದಿರುತ್ತದೆ.

1.2 ರಾಜ್ಯದಲ್ಲಿ ಉತ್ತಮ ನೈಸರ್ಗಿಕ ಸಂಪನ್ಮೂಲಗಳಿದ್ದರೂ ಕೃಷಿ ಮತ್ತು ಸಂಬಂಧಿತ ವಲಯಗಳ ಬೆಳವಣಿಗೆ ಮಂದಗತಿಯಲ್ಲಿದ್ದು ಏರುಪೇರಾಗಿರುತ್ತದೆ. ಆದಾಗ್ಯೂ ಕೃಷಿಯು ಶೇಖಡ 65 ರಷ್ಟು ಜನ ಸಂಖ್ಯೆಗೆ ಆಧಾರವಾಗಿರುತ್ತದೆ ಹಾಗೂ ಕೃಷಿ ಮತ್ತು ಸಂಬಂಧಿತ ವಲಯಗಳ ಕೊಡುಗೆ ರಾಜ್ಯದ ಸಮಗ್ರ ಆಂತರಿಕ ಉತ್ಪನ್ನದಲ್ಲಿ ತೀವ್ರ ಕಡಿಮೆಯಾಗುತ್ತಿದೆ. ಈ ವಲಯ ಎದುರಿಸುತ್ತಿರುವ ಕೆಲವು ಸಮಸ್ಯೆಗಳೆಂದರೆ:-

1.2.1 ಸರಪಳಿ ನಿರ್ವಹಣೆಯಲ್ಲಿರುವ ತೊಂದರೆಗಳು : ಲಾಭದಾಯಕವಲ್ಲದ ಕಾರ್ಯಚಟುವಟಿಕೆ, ಸರಬರಾಜು ಮತ್ತು ಗುಣಮಟ್ಟದಲ್ಲಿ ಸ್ಥಿರತೆಯ ಕೊರತೆ, ಧಾರಣೆ ಸ್ಪರ್ಧಾತ್ಮಕತೆ ಕೊರತೆ, ಸಾಕಷ್ಟು ಇಲ್ಲದೇ ಇರುವ ಮತ್ತು ಅಸಮರ್ಪಕ ಶೇಕರಣೆ ಮತ್ತು ವಿತರಣಾ ಮೂಲಭೂತ ಸೌಕರ್ಯಗಳು, ವಲಯಕ್ಕೆ ತಾಂತ್ರಿಕ ಬೆಂಬಲದ ಕೊರತೆ, ಇತ್ಯಾದಿ.

1.2.2 ತಂತ್ರಜ್ಞಾನದ ಅಡಚಣೆಗಳು : ಸಣ್ಣ ಮತ್ತು ನೀರಾವರಿ ಸೌಲಭ್ಯವಿಲ್ಲದ ಭೂಮಿ, ಉತ್ಪಾದಕತೆ ಕಡಿಮೆಯಾಗಿರುವ ತೋಟಗಳ ಬದಲೀಕರಣ / ಪುನಶ್ಚೇತನ, ಗುಣ ಮಟ್ಟದ ಕೊರತೆ ಇರುವ ವಂಶವಾಹಿಗಳ ಬಳಕೆಯಿಂದ ಕಡಿಮೆ ಉತ್ಪಾದನೆ, ಉತ್ತಮ ಗುಣಮಟ್ಟದ ಸುಧಾರಿತ ತಳಿಗಳ ಸಸಿಗಳ ಕಡಿಮೆ ಸರಬರಾಜು, ಹೆಚ್ಚು ಕೀಟ ರೋಗ ಭಾದೆ, ಕೊಯಿಲೋತ್ತರದ ಹೆಚ್ಚಿನ ಪ್ರಮಾಣದ ನಷ್ಟ, ಸವಕಳಿನ ತೀವ್ರತೆ ಅಲ್ಲದೆ ಎಷ್ಟೋ ವಿಧವಾದ ಪಶುಸಂಗೋಪನೆ ತಳಿಗಳ ಕ್ಷೀಣಿಸುವಿಕೆ, ಪಶುಸಂಗೋಪನೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳದಿರುವಿಕೆ, ಹಾಲು ಮತ್ತು ಹಾಲಿನ ಪದಾರ್ಥಗಳ ಅಸಮರ್ಪಕ ನಿರ್ವಹಣೆಯಿಂದ ಗುಣಮಟ್ಟದಲ್ಲಿ ಕಡಿಮೆಯಾಗುತ್ತಿರುವುದು, ಕಸಾಯಿಖಾನೆಗಳಲ್ಲಿನ ಅನಾರೋಗ್ಯಕರ ವಾತಾವರಣ ಮತ್ತು ಪದ್ಧತಿಗಳು, ಮೀನುಗಾರಿಕೆ ನಿರ್ವಹಣೆಯಲ್ಲಿನ ಸೌಲಭ್ಯಗಳ ಕೊರತೆ, ಇತ್ಯಾದಿ.

1.2.3 ರಫ್ತುಗಾರಿಕೆಯಲ್ಲಿನ ಅಡಚಣೆಗಳು : ರಫ್ತಿಗೆ ಅರ್ಹವಿರುವ ತಳಿಗಳ ಕೊರತೆ,ಕೊಯಿಲೋತ್ತರದ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ರಫ್ತು ಪ್ರಮಾಣೀಕರಣ ಪಡೆಯಲು ಇರುವ ದುಬಾರಿ ವೆಚ್ಚ ಇತ್ಯಾದಿ.

1.3 ಈ ಸಮಸ್ಯೆಗಳನ್ನು ಸರಿಪಡಿಸಲು ಕೃಷಿ ವಲಯಕ್ಕೆ ತಂತ್ರಜ್ಞಾನ, ಮಾರುಕಟ್ಟೆ, ಸಾಂಸ್ಥೀಕರಣ ಮತ್ತು ನೀತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಆಗಬೇಕಿದೆ. ಹೊಸ ಮತ್ತು ಸಮರ್ಪಕ ತಂತ್ರಜ್ಞಾನವನ್ನು ಬೇಸಾಯದಲ್ಲಿ ಮತ್ತು ಕೊಯಿಲಿನೋತ್ತರ ಹಂತದಲ್ಲಿ ಅಳವಡಿಸಿದರೆ ನೇರವಾಗಿ ಉತ್ಪಾದನೆ ಹೆಚ್ಚಿಸುವುದಲ್ಲದೇ ಉತ್ತಮ ಮೌಲ್ಯವರ್ಧನೆಗೆ ಅನುಕೂಲವಾಗುತ್ತದೆ. ಸ್ಪರ್ಧಾತ್ಮಕ ಮತ್ತು ಉತ್ತಮ ವ್ಯವಸ್ಥೆಗಳಿಂದ ಅತಿಹೆಚ್ಚು ಮೌಲ್ಯವನ್ನು ಸಾಧಿಸಬಹುದು. ಸಮಂಜಸವಾದ ನಿಯಮಾವಳಿಗಳು ಪ್ರಗತಿಪರ ಉತ್ಪಾದನೆ, ಉತ್ತಮವಾದ ಬೆಲೆಯ ಸಾಧನೆ ಅಲ್ಲದೆ ಉತ್ತಮ ಮೌಲ್ಯವರ್ಧನೆಗೆ ಎಡೆ ಮಾಡಿಕೊಡುತ್ತದೆ.

1.4 ಸಂಶೋಧನೆ ವಿಷಯ ಹಾಗೂ ಮಾರ್ಗಗಳೆರಡಲ್ಲೂ ಬದಲಾವಣೆ ಅಗತ್ಯವಾಗಿದ್ದು ಇದನ್ನು ಖಾಸಗಿ ವಲಯಗಳ ಸಹಭಾಗಿತ್ವದಲ್ಲಿ ವಿವಿಧ ಕೃಷಿ ಪರಿಸರ ಹಾಗೂ ಸೂಕ್ಷ್ಮ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತಹ ಸುಧಾರಿತ ಹಾಗೂ ಸಂಕರಣ ತಳಿಗಳ ಅಭಿವೃದ್ಧಿ, ಸಂಕರ ತಳಿಗಳ ಉತ್ಪಾದನೆ, ಸುಸ್ಥಿರವಾದ ಬೆಳೆಗಳ ಉತ್ಪಾದನೆ ಮತ್ತು ಸಂರಕ್ಷತೆ ತಂತ್ರಜ್ಞಾನ, ಸಸ್ಯಗಳು, ಕೀಟ ಹಾಗೂ ಇತರೆ ಅಕಶೇರುಕವಂಸವಾಹಿ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆ, ಕೃಷಿಗೆ ಪ್ರಾಮುಖ್ಯವಾದ ಸೂಕ್ಷ್ಮಾಣುಜೀವಿಗಳು, ವಂಶವಾಹಿಗಳ ಪ್ರತೀಕ್ಷೆ, ಹಣ್ಣು ಮತ್ತು ತರಕಾರಿಗಳನ್ನು ಹಸಿರು ಮನೆಯಲ್ಲಿ ಉತ್ಪಾದನೆ, ಜಾನುವಾರು ಮತ್ತು ಕುಕ್ಕಟ ಉತ್ಪನ್ನಗಳ ಸಂಗ್ರಹಣಾ ಸಾಮರ್ಥ ಹೆಚ್ಚಿಸುವಿಕೆ ಹಾಗೂ ಗುಣಮಟ್ಟ ಕಾಪಾಡುವಿಕೆ ವಿವಿಧ ಆಹಾರ ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ರಫ್ತಿನ ತಂತ್ರಜ್ಞಾನ ಮುಂತಾದವುಗಳನ್ನು ಕೈಗೊಳ್ಳಬಹುದು. ಆದಾಗ್ಯೂ ಖಾಸಗಿ ವಲಯ, ರೈತರು ಹಾಗೂ ಸ್ಥಳೀಯ ಉದ್ಯಮಶೀಲುದಾರರ ಸಾಮೂಹಿಕ ಭಾಗವಹಿಸಿಕೆಗೆ ಪೂರಕವಾದ ಪರಿಸರವನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದೆ.

1.5 ಈ ಹಿನ್ನಲೆಯಲ್ಲಿ ಕೃಷಿಯ ಮೌಲ್ಯದ ಸರಪಳಿಯ ಬದಲಾವಣೆಯ ಉದ್ದೇಶವಿರುವ ಅತ್ಯಾಧುನಿಕ ತಾಂತ್ರಿಕತೆಯನ್ನು ತರುವ ಕೃಷಿ ವಾಣಿಜ್ಯದ ಪ್ರತಿಯೊಂದು ವಿಷಯದಲ್ಲಿ ಉತ್ತಮ ಪದ್ಧತಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಸಾಕಷ್ಟು ಪ್ರಮಾಣದ ಹೂಡಿಕೆಯನ್ನು ಹೆಚ್ಚಿಸುವ ಅವಶ್ಯಕತೆ ಇರುತ್ತದೆ. ಇದರಿಂದ ಒಟ್ಟಾರೆ ವಹಿವಾಟಿನ ಖರ್ಚು ಕಡಿಮೆಯಾಗುವುದೇ ಅಲ್ಲದೇ ರೈತರ ಆದಾಯದಲ್ಲಿ ಸುಧಾರಣೆಯಾಗುತ್ತದೆ.

1.6 ಜಾಗತಿಕ ಒಲವು ಹಾಗೂ ಸ್ಥಳೀಯ ಉಪಯೋಗಗಳನ್ನು, ಅವಕಾಶಗಳನ್ನು ಬಳಸಿಕೊಂಡು ಬೆಳವಣಿಗೆಯ ವೃದ್ಧಿಸುವ ಪೂರಕವಾದ ವ್ಯವಸ್ಥೆ ಬೇಕಾಗಿರುತ್ತದೆ. ಈ ದಿಸೆಯಲ್ಲಿ ಸಮಗ್ರ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ 2011 ಯನ್ನು ತರಲಾಗಿದ್ದು ಇದರಿಂದ ಕೃಷಿ ಹಾಗೂ ಸಂಬಂಧಿತ ವಲಯಗಳ ಬೆಳವಣಿಗೆ ಸಂಬಂಧ ಇರುವ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಗಮನ ನೀಡಲಾಗಿದೆ. ಇದರಲ್ಲಿ ಮುಖ್ಯವಾಗಿ ಉತ್ಪಾದಕತೆ ಸುಧಾರಣೆ, ಕೊಯ್ಲು ನಂತರ ಹಾನಿ ಕಡಿಮೆ ಮಾಡುವುದು, ಕೊಯ್ಲು ನಂತರ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಹೆಚ್ಚಿಸುವುದು, ಉತ್ಪಾದನೆ, ಸಂಸ್ಕರಣೆ, ಬ್ರಾಂಡಿಂಗ್ ಮಾಡುವುದು ಮತ್ತು ಮಾರುಕಟ್ಟೆಯಲ್ಲಿ ಸುಸ್ಥಿರ ಪದ್ಧತಿಗಳು ಒಳಗೊಂಡಿರುತ್ತವೆ. ಈ ನೀತಿಯು ಪಶುಸಂಗೋಪನೆ ಹಾಗೂ ಹೈನುಗಾರಿಕೆಗಳಲ್ಲಿ ಆದಾಯ, ಉದ್ಯೋಗ ಹೆಚ್ಚಿಸಲು, ಆಹಾರದಲ್ಲಿ ಪ್ರಾಣಿಜನ್ಯ ಸನಾರಜನಕ ಲಭ್ಯತೆ ಹೆಚ್ಚಿಸುವುದು ಹಾಗೂ ನಿಗದಿತ ಮಾರುಕಟ್ಟೆಗಳಿಗೆ ರಫ್ತು ಹೆಚ್ಚಿಸುವುದು ಇವುಗಳಿಗೆ ಒತ್ತು ನೀಡಲಾಗಿದೆ. ಕರ್ನಾಟಕದ ಹೇರಳ ಮೀನುಗಾರಿಕೆ ಸಂಪನ್ಮೂಲಗಳು ಸುಸ್ಥಿರವಾದ ಅಭಿವೃದ್ಧಿಗೆ ಪೂರಕವಾದ ಸಾಮರ್ಥ್ಯ ಹೊಂದಿರುತ್ತದೆ. ಕರಾವಳಿ ಪ್ರದೇಶದ ಸಂಪನ್ಮೂಲ ಬಳಸಿಕೊಂಡು ಮೀನಿನ ಉತ್ಪಾದನೆ ಹೆಚ್ಚಿಸುವುದು ಮತ್ತು ಮೀನುಗಾರರ ಜೀವನಮಟ್ಟ ಸುಧಾರಣೆ ಮಾಡುವುದು ಮುಖ್ಯ ಉದ್ದೇಶವಾಗಿರುತ್ತದೆ.

1.7 ಆದ್ದರಿಂದ ನೀತಿಯು ಕೃಷಿ, ತೋಟಗಾರಿಕೆ, ಕೃಷಿ ಅರಣ್ಯ, ಹೈನುಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ, ಜೇನು ಕೃಷಿ, ಆಹಾರ ಸಂಸ್ಕರಣೆ ಹಾಗೂ ಸಂಬಂಧಪಟ್ಟ ಉದ್ದಿಮೆಗಳ ವಲಯಗಳ

ಸಮಗ್ರ ಹಾಗೂ ಸುಸ್ಥಿರ ಬೆಳವಣಿಗೆಗೆ ಪೂರಕವಾಗಿರುತ್ತದೆ. ಖಾಸಗಿ ವಲಯದ ಪರಿಣಿತಿಯ ಅವಕಾಶವನ್ನು ಉಪಯೋಗಿಸಿಕೊಳ್ಳಲು ನೀತಿಯು ವ್ಯವಸ್ಥಿತ ಹಾಗೂ ವಿಭಿನ್ನವಾದ ಪದ್ಧತಿಗಳಿಗೆ ಅವಕಾಶವಿದ್ದು ಅದು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮೂಲಕ ಕೃಷಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಿ ಕೃಷಿ ವಾಣಿಜ್ಯದಲ್ಲಿ ಹೆಚ್ಚಿನ ಅವಕಾಶಗಳಾಗಲಿವೆ.

1.8 ರಾಜ್ಯ ಸರ್ಕಾರ 'ಸಮಗ್ರ ಕೃಷಿ-ವಾಣಿಜ್ಯದ ಬೆಳವಣಿಗೆ ನೀತಿ 2011 ಅನ್ನು ಸರಿಯಾದ ಸಮಯದಲ್ಲಿ ಪ್ರವೇಶಪಡಿಸಿ ಸಾಮರ್ಥ್ಯಗಳನ್ನು ಹೆಚ್ಚಿಸಲು ಮತ್ತು ರೈತರ ಹಾಗೂ ಸಂಘಪರಿವಾರಗಳ ಆದಾಯ ಹೆಚ್ಚಿಸಿ ತನ್ಮೂಲಕ ಉತ್ತಮ ಕೊಡುಗೆಯನ್ನು ನೀಡುತ್ತಿದೆ. ಅಲ್ಲದೆ ದೇಶದ ಪತಾಕೆಯನ್ನು ವಿಶ್ವಮಟ್ಟದಲ್ಲಿ ಉನ್ನತಿಯತ್ತ ನಡೆಸುತ್ತಿದೆ. ಭೂ ಒಡೆಯರಿಗೆ, ರೈತರಿಕೆ ಸ್ವಸಹಾಯ ಪರಿವಾರಗಳಿಗೆ ಮತ್ತು ಇತರೆ ಉತ್ಪಾಧಕರಿಗೆ ಅಲ್ಲದೇ ಸ್ಪರ್ಧಾತ್ಮಕತೆಯಿಂದ ಮನ್ನಡೆಯುತ್ತಿರುವ ಸಣ್ಣ ಮತ್ತು ಮಾಧ್ಯಮ ಗಾತ್ರದ ಸಂಸ್ಥೆಗಳಿಗೆ ಈ ನೀತಿ ಪ್ರಯೋಜನಕಾರಿಯಾಗಿದೆ. ಅಷ್ಟೇ ಅಲ್ಲದೇ ಹೆಚ್ಚಿನ ಬಂಡವಾಳ ಹೂಡಿಕೆದಾರಿಕೆಯನ್ನು ಪ್ರೋತ್ಸಾಹಿಸಿ ರಫ್ತು ಮಾರುಕಟ್ಟೆಯಲ್ಲಿ ಹೆಚ್ಚಿನ ಆದಾಯವನ್ನು ಗಳಿಸುವುದಕ್ಕೆ ಮಾರ್ಗದರ್ಶಿಯಾಗಿದೆ.

## 2 ಅವಕಾಶ ಮತ್ತು ವ್ಯಾಪ್ತಿ

2.1 ಈ ನೀತಿಯಲ್ಲಿ ಕೃಷಿ ಮತ್ತು ಸಂಬಂಧಿತ ವಲಯಗಳು ಎನ್ನುವ ಪದದಲ್ಲಿ **ಕೃಷಿ, ತೋಟಗಾರಿಕೆ, ಕೃಷಿ ಆರಣ್ಯ, ಪಶು ಸಂಗೋಪನೆ, ಮೀನುಗಾರಿಕೆ, ರೇಷ್ಮೆ ಕೃಷಿ, ಜೇನು ಕೃಷಿ ಮತ್ತು ಆಹಾರ ಸಂಸ್ಕರಣಾ ವಲಯಗಳಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಕೈಗಾರಿಕಾ ಎಂಬ ಎರಡು ಆಂಶಗಳನ್ನು ಒಳಗೊಂಡಿರುತ್ತದೆ.**

**2.2 ಕೃಷಿ ಮೂಲಭೂತ ಸೌಕರ್ಯ** ಎಂದರೆ ಹೊಸ ಕೈಗಾರಿಕೆಯ ಸ್ಥಾಪನೆ /ಪ್ರಸ್ಥುತ ಇರುವ ಸೌಲಭ್ಯಗಳ ಆಧುನೀಕರಣ, ಕೊಯಿಲೋತ್ತರ ಮೂಲಭೂತ ಸೌಕರ್ಯ, ಸಂಗ್ರಹಣಾ ಕೇಂದ್ರ, ಸಂಚಾರಿ ಸಂಸ್ಕರಣಾ ಘಟಕಗಳು, ಶೀತಲ ಸರಪಳಿ, ನಿಯಂತ್ರಿತ ವಾತಾವರಣ ಶೇಖರಣೆ, ಬದಲಿಸಿದ ವಾತಾವರಣದ ಶೇಖರಣೆ, ಆಧುನಿಕ ಉತ್ಪನ್ನ ಶೇಖರಣಾ ಸಮುಚ್ಚಯಗಳು ಹಾಗೂ ಸೈಲೋಸ್, ವರ್ಗೀಕರಣ ಮತ್ತು ಪ್ಯಾಕಿಂಗ್ ಘಟಕಗಳು, ಶೀತಲ ಸಾಗಣೆ, ಉಗ್ರಾಣ, ಸಾಮಾನ್ಯ ಸೇವಾ ಕೇಂದ್ರಗಳು, ಪ್ರಾಥಮಿಕ ಸಂಸ್ಕರಣಾ ಕೇಂದ್ರಗಳು, ಸಾಮಾನ್ಯ ಸಂಸ್ಕರಣಾ ಸಮುಚ್ಚಯಗಳು, ಸಾಮಾನ್ಯ ಮೌಲ್ಯವರ್ಧನಾ ಕೇಂದ್ರಗಳು, ಕೃಷಿ ಚಿಕಿತ್ಸಾಲಯಗಳು, ಉತ್ಪನ್ನ ಪ್ರಮಾಣೀಕರಿಸುವ ಕೇಂದ್ರಗಳು, ಬೇಗ ಹಾಳಾಗಬಲ್ಲ ಸರಕುಗಳಿಗಾಗಿ ವಾಯು ಸಂಕೀರ್ಣಾ, ಆಧುನಿಕ ಟರ್ಮಿನಲ್ ಮಾರುಕಟ್ಟೆಗಳು, ಕೃಷಿ ಶಿಕ್ಷಣ ಸಮುಚ್ಚಯ, ಸಂಶೋಧನೆ ಮತ್ತು ಅಭಿವೃದ್ಧಿಗೆ ಪೂರಕವಾದ ಅತ್ಯುನ್ನತ ಮಟ್ಟದ ಕೇಂದ್ರಗಳು, ಕೃಷಿ-ತೋಟಗಾರಿಕೆ-ಪಶುಸಂಗೋಪನೆ-ಮೀನುಗಾರಿಕೆ, ಆಹಾರ ಸಂಸ್ಕರಣಾ ಕಾರಿಡಾರ್, ಕೃಷಿ ವಾಣಿಜ್ಯ ಹೂಡಿಕೆ ಪ್ರದೇಶಗಳು, ಕೃಷಿ ವಾಣಿಜ್ಯ ಹೂಡಿಕೆ ವಲಯಗಳು, ಕೃಷಿ ವಾಣಿಜ್ಯ ಹೂಡಿಕೆ ಪ್ರದೇಶಗಳು, ಫುಡ್ ಪಾರ್ಕ್, ವಿಶೇಷ ಆರ್ಥಿಕ ವಲಯಗಳು, ಕೃಷಿ ಜೆಟ್ಟಿ / ಕೃಷಿ ಬಂದರು, ಮೀನು ಸ್ವೀಕರಣಾ ಕೇಂದ್ರಗಳು, ಮೀನುಗಾರಿಕೆಗೆ ಬಂದರು, ಕಸಾಯಿಖಾನೆ, ಸಮಗ್ರ ಕೃಷಿ ಉತ್ಪನ್ನಗಳ ಸಾಗಣೆ ಸಮುಚ್ಛಯಗಳು ಹಾಗೂ ಸಂಬಂಧಿತ ಮೂಲಭೂತಸೌಕರ್ಯಗಳು, ಕೈಗಾರಿಕಾ ಗುಚ್ಛದಲ್ಲಿ ಸಾಮಾನ್ಯ ಸೌಕರ್ಯದ ಸೌಲಭ್ಯಗಳು ಮತ್ತು ಪರಿಸರ ನಿಯಂತ್ರಣ ಪದ್ಧತಿ, ಶೀಘ್ರವಾಗಿ ಹಾಳಾಗುವ ಹಾಗೂ ಶೀಘ್ರವಾಗಿ ಹಾಳಾಗದ ಉತ್ಪನ್ನಗಳಿಗಾಗಿ ಮೂಲಭೂತ ಸೌಕರ್ಯ ಮತ್ತು ಚಿಲ್ಲರ ವ್ಯಾಪಾರ ಸೌಲಭ್ಯಗಳು, ಕೃಷಿ ವಲಯಕ್ಕೆ ಸಂಬಂಧಪಟ್ಟಂತೆ ಹೊಸ ಕೈಗಾರಿಕಾ ಸ್ಥಾಪನೆ, ಪ್ರಸ್ತುತ ಇರುವ ಸೌಲಭ್ಯಗಳ ಆಧುನೀಕರಣ, ಈ ಎಲ್ಲವನ್ನೂ ಒಳಗೊಂಡಿರುತ್ತದೆ, ಆದರೆ ಇಷ್ಟಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ.

2.3 **ಕೃಷಿ ಆಧಾರಿತ ಕೈಗಾರಿಕೆ** ಎಂಬ ಪದವು ಕೃಷಿ ಉತ್ಪನ್ನಗಳಿಗೆ ಮೌಲ್ಯವರ್ಧನೆ / ಅಂತರ್ಮಧ್ಯಮಗಳು /ಶೇಷಗಳು, ಆಹಾರ ಮತ್ತು ಆಹಾರವಲ್ಲದವು, ಉತ್ಪನ್ನಗಳಾಗಿ ಪರಿವರ್ತಿತವಾಗುವ, ಮಾರುಕಟ್ಟೆಯಲ್ಲಿ ಲಭ್ಯವಿರುವ ಅಥವಾ ಉಪಯೋಗಿಸಬಹುದಾದಂಥ ಅಥವಾ ತಿನ್ನುವುದಕ್ಕೆ ಬಳಸಬಹುದಾದಂಥ ಅಥವಾ ಶೇಖರಿಸಲು ಸುಧಾರಣೆ ಅಥವಾ ಉತ್ಪನ್ನ ಸ್ಥಳದಿಂದ ಮಾರುಕಟ್ಟೆಗೆ ಅಥವಾ ಅಂತಹದ್ದೇ ಮತ್ತೊಂದೆಡೆಗೆ ರವಾನಿಸುವ ಕೊಂಡಿಯಾಗಿ ಅವಕಾಶಕೊಡುವ ಇಂಥಹ ಘಟಕಗಳೆಲ್ಲವೂ ಸೇರಿಕೊಳ್ಳುತ್ತವೆ. ಆದರೆ ಇಷ್ಟಕ್ಕೇ ಸೀಮಿತವಾಗಿರುವುದಿಲ್ಲ. ಕೃಷಿ ಆಧಾರಿತ ಕೈಗಾರಿಕೆಯು, ಖುಷ್ಕಿ ಬೇಸಾಯ, ನಿಖರ ಬೇಸಾಯ, ಹವಾ ನಿಯಂತ್ರಿತ ಬೇಸಾಯ, ಕೃಷಿ ಮತ್ತು ಬೇಸಾಯ ಪರಿಹಾರಗಳು, ವ್ಯಾಪಕ ಮಾಹಿತಿ ತಂತ್ರಜ್ಞಾನ ಮತ್ತು ಸಾಮಾನ್ಯ ಮಾಹಿತಿ ವ್ಯವಸ್ಥೆಯನ್ನು ಕೃಷಿ ಮತ್ತು ಬೇಸಾಯ ಸಂಬಂಧಿತ ಪರಿಹಾರಕ್ಕಾಗಿ ಅಳವಡಿಸುವುದು, ಹೈಟೆಕ್ ಬೇಸಾಯ, ಕೃಷಿ ಪರಿಕರ ವಲಯಗಳು, ಕೃಷಿ ಇಂಜಿನಿಯರಿಂಗ್ ವಲಯ,ಕೃಷಿ ಸೇವಾ ವಲಯ ಹಾಗೂ ಕೃಷಿ ವಾಣಿಜ್ಯ ವಲಯಗಳಿಗೆ ಸಂಬಂಧಪಟ್ಟಂತೆ ಇತರೆ ಕೃಗಾರಿಕಾ ಉತ್ಪಾದನಾ/ಸಂಸ್ಕರಣಾ/ಸೇವಾ ಘಟಕಗಳನ್ನೂ ಸಹ ಒಳಗೊಂಡಿರುತ್ತದೆ.

2.4 ಕೃಷಿ ಉತ್ಪನ್ನ ಎಂದರೆ ಕೃಷಿ ಉತ್ಪನ್ನ ಎಂಬ ಪದದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶು ಸಂಗೋಪನೆ, ಹೈನುಗಾರಿಕೆ, ಪುಷ್ಪ ಕೃಷಿ, ಮೀನುಗಾರಿಕೆ, ಜೇನುಕೃಷಿ, ಸಣ್ಣ ಅರಣ್ಯ ಉತ್ಪನ್ನ ಮತ್ತು ಜಾನುವಾರು ಉತ್ಪನ್ನಗಳನ್ನು ಒಳಗೊಂಡಿರುತ್ತದೆ. ಆದರೆ ಇವುಗಳಿಗೆ ಸೀಮಿತವಾಗಿರುವುದಿಲ್ಲ.

2.5 **ಹೈ ಟೆಕ್ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಕೃಷಿ ಮತ್ತು ಸಂಶೋಧನೆ** ಎಂಬ ಪದವು ಒಂದಕ್ಕೇ ಸೀಮಿತವಾಗಿರದೆ, ಸಮಾವೇಶಗೊಳ್ಳುವ ವಿಷಯಗಳೆಂದರೆ ಅವು, ಅಂಗಾಂಶ ಕೃಷಿ, ಟ್ರಾನ್ಸ್‌ಜೆನೆಟಿಕ್ ಸಸ್ಯದ ಉತ್ಪಾದನೆ, ಜೈವಿಕ ಗೊಬ್ಬರಗಳಿಗಾಗಿ ಹುದುಗು ಘಟಕ, ವಂಶವಾಹಿ ನಕ್ಷೀಕರಣ, ತದ್ರೂಪು ಸೃಷ್ಟಿ ಜೆನೆಟಿಕ್ ಇಂಜಿನಿಯರಿಂಗ್, ಹಸಿರು ಮನೆ, ನಿಯಂತ್ರಿತ ವಾತಾವರಣದಲ್ಲಿ ಬೇಸಾಯ, ಜಲಕೃಷಿ ಅಥವಾ ಕೃಷಿ ಕೈಗಾರಿಕೆಗೆ ಅಳವಡಿಸಬಲ್ಲ ಯಾವುದೇ ಮುಂಚೂಣಿ ತಂತ್ರಜ್ಞಾನ ಸಂಶೋಧನೆಯನ್ನು ಒಳಗೊಂಡಿರುತ್ತದೆ ಆದರೆ ಅಷ್ಟಕ್ಕೇ ಸೀಮಿತವಾಗಿರುವುದಿಲ್ಲ.

2.6 ಕರ್ನಾಟಕ ಸರ್ಕಾರವು ಆಗಿಂದಾಗ್ಗೆ ಪ್ರಕಟಿಸುವ ಕೃಷಿ ಮೂಲಭೂತಸೌಕರ್ಯಗಳ ಇತರೆ ವರ್ಗಗಳು, ಕೈಗಾರಿಕಾ ಘಟಕಗಳು, ಸಂಶೋಧನೆ, ಸೇವಾ ವಲಯಗಳು, ಉತ್ಪನ್ನಗಳು ಮತ್ತು ಪದ್ಧತಿಗಳನ್ನು ಸಹ ಈ ನೀತಿ ಒಳಗೊಂಡಿರುತ್ತದೆ.

## 3 ದೃಷ್ಟಿಕೋನ

ಕರ್ನಾಟಕದ ಕೃಷಿ ಮತ್ತು ಸಂಭಂದಿತ ವಲಯಗಳನ್ನು ಸ್ಥಿರವಾದ ಅಭಿವೃದ್ಧಿ ಹಾದಿಯಲ್ಲಿ ನಡೆಸಲು ಜಾಗತಿಕ ತಾಂತ್ರಿಕತೆಗಳು ಮತ್ತು ಸೃಜನಾತ್ಮಕ ಸಾಧನಗಳು, ಉತ್ತಮ ದರ್ಜೆಯ ಸೌಕರ್ಯಗಳಿಂದ ಸಾಧಿಸಲಾಗುತ್ತಿದೆ ಇದರಿಂದಾಗಿ ರೈತ ಸಮುದಾಯದ ಜನರಿಗೆ ಹೆಚ್ಚಿನ ಆದಾಯ ದೊರೆಯುವಂತಾಗಿದೆ.

## 4 ಉದ್ದೇಶ ಮತ್ತು ಕಾರ್ಯತಂತ್ರ

### 4.1 ಸುಸ್ಥಿರ ಕೃಷಿ ಚಟುವಟಿಕೆ, ಉತ್ಪಾದಕತೆಯ ಹೆಚ್ಚಳ ಮತ್ತು ಅದರಿಂದ ರೈತ ಸಮುದಾಯಕ್ಕೆ ಉತ್ತಮ ಗ್ರಹಿಕೆ

ಅ. ಆಹಾರ, ಪೌಷ್ಟಿಕತೆ, ಪರಿಸರದ ಮತ್ತು ಜೀವನೋಪಾಯದ ಭದ್ರತೆಗೆ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ

ಆ. ವಿವಿಧ ಪರಿಸರಗಳಿಗೆ ಮತ್ತು ಸೂಕ್ಷ್ಮ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬಹುದಾದಂತಹ ಸುಧಾರಿತ ಬೆಳೆ ತಳಿಗಳು / ಸಂಕರಣಗಳ ಅಭಿವೃದ್ಧಿ

ಇ. ಸುಧಾರಿತ ಸಸ್ಯ ತಳಿಗಳನ್ನು ಉತ್ತಮ ದರ್ಜೆಯ ಗುಣಗಳುಳ್ಳ, ಉತ್ಪಾದಕತೆಯ, ಕೀಟ ಹಾಗೂ ರೋಗ ನಿರೋಧಕ ಶಕ್ತಿಯುಳ್ಳ, ಅಜೈವಿಕ ಒತ್ತಡಗಳಿಗೆ ತಡೆದುಕೊಳ್ಳುವ ಶಕ್ತಿ ಇರುವಂಥಹ ಸುಧಾರಿತ ಸಸ್ಯ ತಳಿಗಳ ಉತ್ಪಾದನೆ ಮತ್ತು ವಂಶವಾಹಿ (ಜೆನೆಟಿಕ್) ಸಂಪನ್ಮೂಲಗಳ ಬಳಕೆ

ಈ. ಸಮರ್ಪಕ, ಕಡಿಮೆ ವ್ಯಯದ, ಪರಿಸರ ಸ್ನೇಹಿ ಮತ್ತು ಸುಸ್ಥಿರ ಬೆಳೆ ಉತ್ಪಾದನೆ ಮತ್ತು ಸಂರಕ್ಷಣಾ ತಾಂತ್ರಿಕತೆಗಳು

ಉ. ಉತ್ತಮ ಗುಣಮಟ್ಟದ ಬೀಜೋತ್ಪಾದನಾ ತಾಂತ್ರಿಕತೆಗಳ ಸುಧಾರಣೆ ಮತ್ತು ತಳಿ ಸಂವರ್ಧಕ ಬೀಜಗಳ ಉತ್ಪಾದನೆಯ ಜೊತೆಯಲ್ಲಿ ಸಂಕರಣ ಸಸ್ಯ ತಳಿಗಳ ಅಭಿವೃದ್ದಿಗೆ ಆದ್ಯತೆ

ಊ. ಕೃಷಿ ಸಂಬಂಧಿತ ಸೂಕ್ಷ್ಮಾಣು ಜೀವಿಗಳ ಮತ್ತು ಸಸ್ಯ ವಂಶವಾಹಿ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸುಸ್ಥಿರವಾದಂತಹ ಬಳಕೆ

ಋ. ಉತ್ಪಾದನೆಯನ್ನು ಹೆಚ್ಚಿಸಲು ಜ್ಞಾನ ಮತ್ತು ತಂತಜ್ಞಾನ ಪ್ರಸರಣ. ವಾಣಿಜ್ಯ ಬೆಳೆಗಳ ಬೇಸಾಯಕ್ಕಾಗಿ, ರಫ್ತಿಗೆ ಸೂಕ್ತವಾದ ಬೆಳೆಗಳನ್ನು ಉತ್ಪಾದಿಸಲು ಮತ್ತು ಹೆಚ್ಚಿನ ಘಟಕ ಮೌಲ್ಯವರ್ಧನೆ ಪಡೆದುಕೊಳ್ಳಲು ಬೇಕಾದ ಕಾರ್ಯತಂತ್ರಗಳನ್ನು ಒಳಗೊಂಡಿದೆ.

ಎ. ಹೆಚ್ಚಿನ ಸಾಂದ್ರತೆಯುಳ್ಳ ತೋಟಗಳು, ನೆರಳು ಬಲೆ ಬೇಸಾಯ, ಪಾಲಿ ಹೌಸ್ ಬೇಸಾಯ, ಹಸಿರುಮನೆ ಬೇಸಾಯ, ನಿಖರ ಬೇಸಾಯ ಇತ್ಯಾದಿಗಳನ್ನು ಪ್ರೋತ್ಸಾಹಿಸುವುದು

ಏ. ಸಾಂಪ್ರದಾಯಿಕ ಬೆಳೆಗಳ ಬೇಸಾಯದಿಂದ ತೋಟಗಳಿಗೆ, ಹಣ್ಣಿನ ತೋಟಗಳು, ದ್ರಾಕ್ಷಿ ತೋಟಗಳು, ಪುಷ್ಪ ಕೃಷಿ ಮತ್ತು ತರಕಾರಿ ತೋಟಗಳಿಗೆ ವೈವಿಧ್ಯೀಕರಣ

ಐ. ದೇಶಿಯ ಬೆಳೆಗಳು ಮತ್ತು ಇತರೆ ಪ್ರಾಂತೀಯ ಸಸ್ಯ ಸಂಕುಲಗಳನ್ನು ಗುರುತಿಸಿ / ಸಂಗ್ರಹಿಸಿ, ಶೀಘ್ರವಾಗಿ ಹೆಚ್ಚಿಸಿ ದೇಶೀಯ ಮತ್ತು ಹೆಚ್ಚಿನ ರಫ್ತಿಗೆ ಆದ್ಯತೆ ನೀಡುವುದು

ಒ. ಕನಿಷ್ಠ ಜೀವನಾಧಾರದ ಜಾನುವಾರು ಬೇಸಾಯದಿಂದ ಸುಸ್ಥಿರ ಹಾಗೂ ಸುಗಮ ಪಶುಸಂಗೋಪನೆ ಮತ್ತು ಕೋಳಿ ಸಾಕಣೆಕೆಗೆ ಬದಲಾಗುವುದು

ಓ. ದೇಶೀಯ ಪ್ರಾಣಿ ಸಂಕುಲದ ವಂಶವಾಹಿ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಅಭಿವೃದ್ಧಿಯತ್ತ ಗಮನ ಹರಿಸಿ ಪ್ರಾಣಿ ತಳಿ ವೈವಿಧ್ಯತೆಯನ್ನು ಕಾಪಾಡಿಕೊಳ್ಳುವುದು

ಔ. ದೇಶೀಯ ಜಾನುವಾರು ಮತ್ತು ಎಮ್ಮೆಗಳ ವಂಶವಾಹಿ ಉನ್ನತೀಕರಣ

ಕ. ಉತ್ತಮವಾಗಿ ರೂಪಿಸಿದಂತಹ ಕಾರ್ಯತಂತ್ರಗಳ ಮೂಲಕ ಮೇವು ಮತ್ತು ಮೇವಿನ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದು

ಕಿ. ಗುಣಮಟ್ಟದ ಉತ್ಪನ್ನಗಳು, ಪ್ರತಿ ಪ್ರಾಣಿ ಉತ್ಪಾದಕತೆ ಹೆಚ್ಚಿಸುವುದು, ವ್ಯವಸ್ಥಿತ ಮಾರುಕಟ್ಟೆ ಹಾಗೂ ಹೊಸ ರೋಗಗಳನ್ನು ತಡೆಯುವುದರಿಂದ ಪಶುಸಂಗೋಪನಾ ವಲಯದಲ್ಲಿ ಉತ್ಪಾದಕತೆಯನ್ನು ಸುಧಾರಿಸಬಹುದು

ಖ. ಜಾನುವಾರು ಮತ್ತು ಕುಕ್ಕುಟ ವಲಯದಲ್ಲಿ ಉತ್ಪಾದನಾ ಹೆಚ್ಚಳಕ್ಕೆ ಬೆಂಬಲ, ಲಾಭದಾಯತೆ, ಸ್ಪರ್ಧಾತ್ಮಕತೆ ಮತ್ತು ಸುಸ್ಥಿರತೆಗಾಗಿ ತಾಂತ್ರಿಕತೆಗಳನ್ನು ಅಭಿವೃದ್ಧಿಪಡಿಸುವುದು

ಖ. ಜಾನುವಾರು ಉತ್ಪನ್ನ ಸಂಸ್ಕರಣೆದಾರರು ಮತ್ತು ಪರಿಕರ ಸರಬರಾಜುದಾರರೊಂದಿಗೆ ಸಣ್ಣ ರೈತರ ಸಹಭಾಗಿತ್ವದ ಪರಸ್ಪರ ವಿಚಾರ ವಿನಿಮಯ

ಖಿ. ಹಾಲು ಉತ್ಪಾದನೆ ಮತ್ತು ಹಾಲು ಸಂಸ್ಕರಣಾ ಸಾಮರ್ಥ್ಯ ಮತ್ತು ಹೈನುಗಾರಿಕಾ ಉತ್ಪನ್ನಗಳ ಉತ್ಪಾದನೆಗೆ ಒತ್ತು ನೀಡುವುದು

ಗ. ಕನಿಷ್ಠ ಗುಣ ಮಟ್ಟದ ಕಚ್ಚಾ ಆಹಾರದಲ್ಲಿ ಜೀವಿಸಬಲ್ಲ ಹಾಗೂ ಹೆಚ್ಚಿನ ರೋಗ ನಿರೋಧಕ ಶಕ್ತಿಯುಳ್ಳ ದೇಶೀ ಕುಕ್ಕುಟ ತಳಿಗಳನ್ನು ಉತ್ತಮಗೊಳಿಸಿ ಜೊತೆಯಲ್ಲಿ ಸುಧಾರಿತ ತಳಿಗಳನ್ನು ಉತ್ತೇಜಿಸುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಸೃಷ್ಟಿಸುವುದು

ಗಿ. ರಾಜ್ಯದ ವಿವಿಧ ಜಲಸಂಪನ್ಮೂಲಗಳಲ್ಲಿ ಇರುವ ಸಂಪತ್ತನ್ನು ಅಂದಾಜಿಸಲು, ಮಾಹಿತಿ ಮತ್ತು ವಿವರ ಸಂಗ್ರಹಣಾ ವಿಸ್ತರಣೆ ಹಾಗೂ ಸಬಲೀಕರಣದ ಜೊತೆಯಲ್ಲಿ ಪದ್ಧತಿಗಳನ್ನು ಪ್ರಮಾಣಬದ್ಧಗೊಳಿಸುವುದು.

ಫ. ಆಳ ಸಮುದ್ರ ಮೀನುಗಾರಿಕೆಯನ್ನು ಪ್ರೋತ್ಸಾಹಿಸುವುದು

ಫಿ. ಹೆಚ್ಚಿನ ಬೆಲೆ ಪಡೆಯಲು ಬೆಳೆಯುತ್ತಿರುವ ದೇಶೀಯ ಮತ್ತು ಅಂತರ್‍ರಾಷ್ಟ್ರೀಯ ಮಾರುಕಟ್ಟೆಗಳ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು.

ಜ. ಉತ್ಪನ್ನಗಳ ರಫ್ತಿಗಾಗಿ, ಅಂತರ್‍ರಾಷ್ಟ್ರೀಯ ಮಟ್ಟದ ನೈರ್ಮಲ್ಯ ರಕ್ಷಣೆ ಮತ್ತು ಆರೋಗ್ಯದ ಗುಣಮಟ್ಟಗಳು, ಸಲಕರಣಗಳಿಗೆ ಹಾಗೂ ಸೌಲಭ್ಯಗಳಿಗೆ ಇರುವ ನಿಯಮಗಳಗೆ ಅನುಸರಿಸುವುದು.

ಚ. ಉತ್ಪಾದನೆ ಮತ್ತು ಕೊಯಿಲಿನೋತ್ತರದ ಚಟುವಟಿಕೆಗಳಲ್ಲಿ ಮೌಲ್ಯವರ್ಧನೆ ಮತ್ತು ಶಕ್ತಿಸಾಮರ್ಥ್ಯದ ನಿರ್ವಹಣೆಗಾಗಿ ತಂತ್ರಜ್ಞಾನದ ಬಳಕೆಯಿಂದ ಮತ್ತು ಕೃಷಿಯಾಂತ್ರೀಕರಣದಿಂದಾಗಿ ಸುಸ್ಥಿರ, ಲಾಭದಾಯಕ ಮತ್ತು ಸ್ಪರ್ಧಾತ್ಮಕ ಉದ್ದಿಮೆಯನ್ನು ಹೊಂದುವುದು

ಂಂ. ನೀರಾವರಿ, ಮಳೆ ಆಧಾರಿತ ಮತ್ತು ಬೆಟ್ಟ ಪ್ರದೇಶಗಳಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆಯ ಉತ್ಪಾದನೆಗಾಗಿ ಕಾಲಾನುಕಾಲಕ್ಕೆ ನಿರ್ವಹಿಸಬೇಕಾದ ಮತ್ತು ಸೂಕ್ತವಾದ ಕೃಷಿ ಕಾರ್ಯವಿಧಾನಗಳಲ್ಲಿ ನಿಖರ ಯಂತ್ರೋಪಕರಣಗಳನ್ನು ಮತ್ತು ಕಾರ್ಯಯೋಜನೆಗಳನ್ನು ಅಳವಡಿಸಬೇಕಾಗುತ್ತದೆ.

ಃಃ. ವಾಣಿಜ್ಯೀಕರಣ / ಅಳವಡಿಕೆಗಾಗಿ ಹೊಸ ತಂತ್ರಜ್ಞಾನ / ಪರಿಕರ / ಕೌಶಲ್ಯಗಳನ್ನು ಜನಪ್ರಿಯಗೊಳಿಸುವುದು.

ಅಅ. ಕೃಷಿ ಉತ್ಪಾದನೆ ಮತ್ತು ಸಂಸ್ಕರಣಾ ಚಟುವಟಿಕೆಗಳಲ್ಲಿ ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಶಕ್ತಿ ನಿರ್ವಹಣೆ ಮತ್ತು ಬಳಕೆ.

ಆಆ. ಕಾಲಾನುಕಾಲಕ್ಕೆ ಅಗತ್ಯವಿರುವಂತಹ ಉತ್ತಮ ಗುಣಮಟ್ಟದ ಮತ್ತು ಸರಿ ಪ್ರಮಾಣದ ಕೃಷಿ ಪರಿಕರಗಳ ಪೂರೈಕೆಯನ್ನು ಖಾತ್ರಿ ಪಡಿಸಿಕೊಳ್ಳುವುದು.

ಇಇ. ಬಂಡವಾಳ. ತಂತ್ರಜ್ಞಾನ, ಸಮರ್ಪಕ ಕಾರ್ಯನಿರ್ವಹಣೆ ಮತ್ತು ಸಹಾಯ ಸೇವೆಗಳಾದ ಸಾಲ, ಮಾರ್ಕೆಟಿಂಗ್, ಸಂಶೋಧನೆ ಮತ್ತು ವಿಸ್ತರಣೆಗಳ ಲಭ್ಯತೆಯನ್ನು ಹೆಚ್ಚಿಸುವಿಕೆ

ಈಈ. ರೈತರು, ಕೈಗಾರಿಕೆ, ಸಂಶೋಧನೆ ಮತ್ತು ವಿಸ್ತರಣೆ ಕ್ಷೇತ್ರಗಳಿಗೆ ಪಾಲುದಾರರ ನಡುವೆ ಸಂಪರ್ಕ ಏರ್ಪಡಿಸುವುದು

ಉಉ. ಕಟಾವು ನಂತರದ ನಷ್ಟವನ್ನು ಹಾಗೂ ತ್ಯಾಜ್ಯವನ್ನು ಕಡಿಮೆಗೊಳಿಸುವುದರ ಮೂಲಕ ರೈತರಿಗೆ ಹೆಚ್ಚಿನ ಮೌಲ್ಯ ದೊರೆಯುವಂತೆ ಮಾಡುವುದು

## 4.2 ಕೃಷಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ

**ಅ.** ಕೈಗಾರಿಕಾ ಘಟಕಗಳಿಗೆ ಎಟುಕುವಂತೆ ಕಟಾವಿನ ನಂತರದ ನಷ್ಟವನ್ನು ಕಡಿಮೆ ಮಾಡುವುದು, ಸಾರ್ವಜನಿಕ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸುವುದು, ಆರ್ಥಿಕ ಮಾಪನದಿಂದ ಕೃಷಿ ಉತ್ಪತ್ತಿಗೆ ತಗಲುವ ಖರ್ಚನ್ನು ಕಡಿಮೆಗೊಳಿಸುವುದನ್ನು ಖಾತ್ರಿಪಡಿಸಬೇಕು

**ಆ.** ಕೃಷಿ ಹಾಗೂ ಕೃಷಿ ಸಂಬಂಧಿತ ವಲಯಗಳ ಅಭಿವೃದ್ಧಿಗೆ ಉತ್ತೇಜನ ಕೊಟ್ಟು ಕಟಾವಿನ ನಂತರದ ಸೌಲಭ್ಯಗಳು, ಕೃಷಿ ಕಾರಿಡಾರ್, ಕೃಷಿ-ವಿಶೇಷ ಆರ್ಥಿಕ ವಲಯಗಳು, ಕೃಷಿ ಉದ್ಯಾನಗಳು, ಸಾರ್ವಜನಿಕ ಸಂಸ್ಕರಣ ಕೇಂದ್ರಗಳು, ಹರಾಜು ಮನೆಗಳು ಮತ್ತು ಗ್ರಾಮೀಣ ಮೂಲ ಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವಿಶ್ವ ದರ್ಜೆಯ ಸರಬರಾಜು ಸರಪಳಿ ಸೌಕರ್ಯವನ್ನು ಸೃಷ್ಟಿಸಬೇಕು.

**ಇ.** ರಾಷ್ಟ್ರೀಯ ಮತ್ತು ಅಂತರ್‍ರಾಷ್ಟ್ರೀಯ ಮಾರುಕಟ್ಟೆಗೆ ಸರಬರಾಜನ್ನು ಹೊಸದಾದ ಒಂದು ಮೀನುಗಾರಿಕೆ ಬಂದರಿನ ಜಾಲದ ರಚನೆ ಮತ್ತು ಹೆಚ್ಚಿನ ಹಿಂದು ಮುಂದಿನ ಸಂಪರ್ಕ ಹಾಗೂ ವಿಫುಲ ಮೂಲಭೂತ

ಸೌಕರ್ಯಹೊಂದಿರುವ ಆರೋಗ್ಯಕರ, ದರ್ಜೆಗನುಗುಣವಾಗಿ ಮೀನು ಇಳಿಸುವ ಸೌಲಭ್ಯಗಳನ್ನು ನಿರ್ಮಿಸುವುದು.

**ಈ.** ಕೃಷಿ ಉತ್ಪನ್ನಗಳ ನಿರ್ವಹಣೆ, ಸಂಸ್ಕರಣೆ, ಶೇಖರಣೆ ಮತ್ತು ಮಾರುಕಟ್ಟೆಗಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.

**ಉ.** ಬಿದ್ದ ಪ್ರಾಣಿಗಳಿಗಾಗಿ ಹಾಗೂ ಮೃತ ಪ್ರಾಣಿ ಬಳಕೆಗಾಗಿ ಕಸಾಯಿಖಾನೆಗಳ ಸುಧಾರಣೆ ಮತ್ತು ಆಧುನೀಕರಣ

**ಊ.** ಸುಧಾರಿಸಿದ, ಆಧುನಿಕ ಮತ್ತು ಹೆಚ್ಚಾಗಿರುವ ಕೈಗಾರಿಕಾ ಮೂಲಭೂತ ಸೌಕರ್ಯ, ಪರಿಸರದಲ್ಲಿನ ಮೂಲಭೂತ ಸೌಕರ್ಯ ಮತ್ತು ವಿಶಿಷ್ಟವಾದ ಮೂಲಭೂತ ಸೌಕರ್ಯಗಳು

## 4.3 ಕೃಷಿ ಆಧಾರಿತ ಉದ್ಯಮದ ಜೊತೆಯಲ್ಲಿ ಆಹಾರ ಸಂಸ್ಕರಣ ಘಟಕಗಳ ಅಭಿವೃದ್ಧಿ

ಅ. ಕೃಷಿ ಕಾರ್ಯವಿಧಾನಗಳನ್ನು ನೀರಾವರಿ ಜಮೀನಿಗೆ, ಮಳೆ ಆಧಾರಿತ ಮತ್ತು ಬೆಟ್ಟ ಪ್ರದೇಶಗಳಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆಯ ಉತ್ಪನ್ನಗಳಿಗಾಗಿ ನಿಖರ ಯಂತ್ರೋಪಕರಣಗಳನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ

ಆ. ರೈತರ ಆದಾಯ ಹೆಚ್ಚಿಸುವುದಕ್ಕಾಗಿ ಕೃಷಿ ಉತ್ಪನ್ನಗಳ ಸದ್ಬಳಕೆ ಹಾಗೂ ಮೌಲ್ಯ ವರ್ಧನೆ

ಇ. ಕೃಷಿ ಉತ್ಪನ್ನಗಳಿಗೆ ಮೌಲ್ಯ ವರ್ಧನೆ, ಸಂಸ್ಕರಣೆ ಮತ್ತು ಉಪ-ಉತ್ಪನ್ನಗಳ ಬಳಕೆ

ಈ. ಕೃಷಿ ತ್ಯಾಜ್ಯದ ಮತ್ತು ಪ್ರಧಾನ ಕೃಷಿ ಉತ್ಪನ್ನಗಳಿಂದಾಗಿ ಲಭ್ಯವಾಗುವ ಉಪ-ಉತ್ಪನ್ನಗಳಲ್ಲದೆ ಸಂಸ್ಕರಣ ಕೈಗಾರಿಕೆಗಳ ಗರಿಷ್ಠ ಪ್ರಮಾಣದ ಬಳಕೆ.

ಉ. ಹಾಳಾಗಬಹುದಾದ ಹಣ್ಣು, ತರಕಾರಿ, ಹೂವು, ಪ್ರಾಣಿ, ಹೈನು ಉತ್ಪಾದನೆ ಹಾಗೂ ಉತ್ಪನ್ನ ವೈವಿಧ್ಯೀಕರಣ ಮಳಿಗೆಯಲ್ಲಿ ಶೇಖರಣಾಗುಣವನ್ನು ಹೆಚ್ಚಿಸುವುದು ಮತ್ತು ಲಾಭಕ್ಕಾಗಿ ಮೌಲ್ಯ ವರ್ಧನೆ

ಊ. ಆಹಾರ ಸಂಸ್ಕರಣ ಸರಪಳಿಯ ಎಲ್ಲಾ ಹಂತಗಳಲ್ಲಿ ತ್ಯಾಜ್ಯವನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಲು ಕೃಷಿ-ಆಹಾರ ಉತ್ಪನ್ನಗಳ ಶೇಖರಣೆ, ಸಾಗಣೆ ಮತ್ತು ಸಂಸ್ಕರಣೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಪಡಿಸುವುದು.

ಋ. ಹಣ್ಣು ಮತ್ತು ತರಕಾರಿ,ಆಹಾರ ಧಾನ್ಯವನ್ನು ಹಿಟ್ಟು ಮಾಡುವ, ಹೈನುಗಾರಿಕೆಯ ಉತ್ಪನ್ನಗಳು, ಕೋಳಿ ಸಾಕಣೆ ಹಾಗೂ ಮೊಟ್ಟೆ, ಮಾಂಸ ಮತ್ತು ಮಾಂಸದ ಉತ್ಪನ್ನಗಳು, ಮೀನು, ಬ್ರೆಡ್, ಎಣ್ಣೆ ಕಾಳುಗಳು, ಬಿಸ್ಕತ್ತುಗಳು ಹಾಗೂ ಇತರೆ ತಿಂಡಿ ತಿನಿಸುಗಳು, (ಕೋಕ್ ಸಂಸ್ಕರಣೆ ಮತ್ತು ಚಾಕೊಲೇಟ್‌ಗಳು ಸೇರಿರುತ್ತವೆ), ನೆನೆ ಹಾಕಿರುವ ಜವೆ ಗೋಧಿಯ ಸಾರ, ಬೇರ್ಪಡಿಸಿರುವ ಸಸಾರಜನಕ, ಹೆಚ್ಚಿನ ಪೌಷ್ಠಿಕ ಆಹಾರ, ಮೊಲೆಹಾಲು ಬಿಡಿಸಿದ ನಂತರದ ಆಹಾರ (weaning food) ಮತ್ತು ಇತರೆ ತಿನ್ನಲು ಸಿದ್ಧವಿರುವ ಆಹಾರ ಉತ್ಪನ್ನಗಳು, ಬಿಯರ್‌ನಲ್ಲಿ ಮದ್ಯಸಾರವಿಲ್ಲದ ಬಿಯರ್, ಕಾಕಂಬಿ ಇಲ್ಲದ ಮದ್ಯಸಾರ ಪಾನೀಯಗಳು, ಎರೇಟೆಡ್ ಪಾನೀಯಗಳು / ತಂಪು ಪಾನೀಯಗಳು ಮತ್ತು ಇತರೆ ಸಂಸ್ಕರಿತ ಆಹಾರಗಳು, ಆಹಾರ ಸಂಸ್ಕರಿಸುವ ಕೈಗಾರಿಕೆಗಳಿಗೆ ವಿಶೇಷ ಪ್ಯಾಕೇಜಿಂಗ್ - ಹೀಗೆ ಸಂಸ್ಕರಿಸುವ ಕೈಗಾರಿಕೆಗಳಿಗೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವುದು.

## 4.4 ಸಂಶೋಧನೆ, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಠಿ

ಅ. ಬೆಳೆವಿಜ್ಞಾನ, ತೋಟಗಾರಿಕೆ, ಪಶುವೈದ್ಯಕೀಯ, ಪ್ರಾಣಿವಿಜ್ಞಾನ, ಹೈನುವಿಜ್ಞಾನ, ಮೀನುಗಾರಿಕೆ, ಪ್ರಾತ್ಯಕ್ಷಿಕ ಸಂಪನ್ಮೂಲಗಳ ನಿರ್ವಹಣೆ, ಕೃಷಿ ಇಂಜಿನಿಯರಿಂಗ್, ಆಹಾರ ಸಂಸ್ಕರಣೆ, ಜೈವಿಕ ರಸಾಯನ ಶಾಸ್ತ್ರ ಮತ್ತು ಪೋಷಣೆ, ಹುಳಿತಂತ್ರಜ್ಞಾನ, ಜೈವಿಕ ಇಂಜಿನಿಯರಿಂಗ್, ಹಿಟ್ಟು ಮಾಡುವಿಕೆ, ಬೇಕರಿ ಮತ್ತು ತಿಂಡಿ ತಿನಿಸುಗಳ ವಿಜ್ಞಾನ, ಆಹಾರ ಇಂಜಿನಿಯರಿಂಗ್, ಆಹಾರ ಸೂಕ್ಷ್ಮ ಜೀವಿ ಶಾಸ್ತ್ರ, ಆಹಾರ ಪ್ಯಾಕಿಂಗ್ ತಂತ್ರಜ್ಞಾನ, ಆಹಾರ ಸಂರಕ್ಷಗಳು ಮತ್ತು ಪೀಡೆ

ನಿಯಂತ್ರಣ, ಆಹಾರ ಸುರಕ್ಷತೆ ಮತ್ತು ವಿಶ್ಲೇಷಣಾ ಗುಣಮಟ್ಟ ನಿಯಂತ್ರಗಳಲ್ಲಿನ ಮೂಲಭೂತ ಕಾರ್ಯತಂತ್ರಾತ್ಮಕ ಹಾಗೂ ನಿರೀಕ್ಷಣಾ ಸಂಶೋಧನೆಗಳಲ್ಲಿ ಉತ್ಕೃಷ್ಟತೆಯನ್ನು ಉತ್ತೇಜಿಸುವುದು.

ಆ. ಉದ್ಯಮಶೀಲತೆ ರೀತಿಯಲ್ಲಿ ಕೃಷಿ ಸಹಾಯ ವಲಯದ ಪ್ರಾಧಾನ ಉತ್ಪನ್ನಗಳ ಉತ್ಪತ್ತಿಯಲ್ಲಿ ತೊಡಗಿರುವ ಕೃಷಿ ಸಿಬ್ಬಂದಿಗೆ ಕೃಷಿ ಯಂತ್ರ ಸಂಯೋಜನೆಯ ಮರುಹಂಚಿಕೆಯನ್ನು ಅಭಿವೃದ್ಧಿಪಡಿಸುವುದು.

ಇ. ಕೃಷಿ, ತೋಟಗಾರಿಕೆ, ಕೃಷಿ ಅರಣ್ಯ, ಪಶುಸಂಗೋಪನೆ ಮತು ಹೈನುಗಾರಿಕೆಯ ತಂತ್ರಜ್ಞಾನ, ಮೀನುಗಾರಿಕೆ, ಕಟಾವು ಮತ್ತು ಕಟಾವಿನ ನಂತರ, ಸಂಸ್ಕರಣ, ಕೃಷಿ ತಂತ್ರಜ್ಞಾನ, ಪರಿಸರ ಸಂಪನ್ಮೂಲ ನಿರ್ವಹಣೆ, ಆಹಾರ ಸಂಸ್ಕರಣೆ ಮತ್ತು ಕೃಷಿವಾಣಿಜ್ಯ ನಿರ್ವಹಣೆಯ ವಲಯಗಳಲ್ಲಿ ಉದ್ಭವಿಸುತ್ತಿರುವ ಮಾನವ ಸಂಪನ್ಮೂಲದ ಅಭಿವೃದ್ಧಿ.

ಈ. ಯವಜನತೆಯ, ರೈತರ ಮತ್ತು ಮಹಿಳೆಯರಲ್ಲಿ ಆಧುನಿಕ ಕೃಷಿ ಪದ್ದತಿಗಳ ಮತ್ತು ಉತ್ಪನ್ನಗಳ ಆರೋಗ್ಯಕರ ನಿರ್ವಹಣೆಯಲ್ಲಿನ ಕೌಶಲ್ಯತೆಯನ್ನು ಹೆಚ್ಚಿಸುವುದರ ಮೂಲಕ ಪ್ರತಿಯೊಬ್ಬರ ಆದಾಯವನ್ನು ಹೆಚ್ಚಿಸುವುದು.

ಉ. ಕೃಷಿ ಚಟುವಟಿಕೆಯಲ್ಲಿನ ಕೆಲಸದ ಸಾಮರ್ಥ್ಯ ಹೆಚ್ಚಿಸುವುದು ಹಾಗೂ ವೃತ್ತಿಯಲ್ಲಿನ ಅಪಾಯ ಕಡಿಮೆ ಮಾಡುವುದು.

ಊ. ಸಹಭಾಗಿತ್ವ ವಿಧಾನಗಳನ್ನು ಅನುಸರಿಸಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

ಋ. ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳು, ತರಬೇತಿ ಕೇಂದ್ರಗಳು, ಕೌಶಲ್ಯ ಅಭಿವೃದ್ಧಿ ಕೇಂದ್ರಗಳು, ಪರೀಕ್ಷಾ ಕೇಂದ್ರಗಳು ಹಾಗೂ ಇತರೆ ಸಂಸ್ಥೆಗಳ ಸಾಮರ್ಥ್ಯ ನಿರ್ಮಾಣ ಮತ್ತು ಸುಸ್ಥಿರ ಕೃಷಿ ಬೆಳವಣಿಗೆಯ ಸಂಶೋಧನಾ ಸಾಮರ್ಥ್ಯಕ್ಕಾಗಿ ಅಭಿವೃದ್ಧಿಗೊಳಿಸಬೇಕು.

ಎ. ನಿರ್ದಿಷ್ಟ ತೊಂದರೆಗಳಿಗೆ ಸಂಶೋಧನಾ ಪ್ರಯತ್ನಗಳನ್ನು ಒಟ್ಟುಗೂಡಿಸುವುದು

ಏ. ಹೊಸ ವೈಜ್ಞಾನಿಕ ಮನೋಭಾವ (concept) ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ, ಅನ್ವೇಷಿಸಿಲ್ಲದ ಮತ್ತು ಕೃಷಿಯಲ್ಲಿ ಸಾಂಪ್ರದಾಯಿಕ ಸ್ಥಿತಿ ಮತ್ತು ಆಧುನಿಕ ರೀತಿಯಲ್ಲಿ ಕೊಯಿಲಿನ್ನೋತ್ತರ ತಂತ್ರಜ್ಞಾನ ನಿರ್ವಹಣೆಗಳ ಬಗ್ಗೆ ಹೆಚ್ಚಿನ ಪರಿಚಯಕ್ಕೆ ಮತ್ತು (exposure) ಗಮನ ಸಿಗಬೇಕು.

ಐ. ರೈತ ಸಮುದಾಯಕ್ಕೆ, ಸ್ವಸಹಾಯ ಸಂಘಗಳಿಗೆ, ಮಹಿಳಾ ಅಭಿವೃದ್ಧಿ ಸಂಘಗಳಿಗೆ, ರಾಜ್ಯ ಕೃಷಿ ಅಧಿಕಾರಿಗಳಿಗೆ, ಹೆಸರಾಂತ ವಿಶ್ವವಿದ್ಯಾಲಯಗಳ ಸಹಭಾಗಿತ್ವಗಳಿಗೆ ನಿಯಮಿತವಾಗಿ ತಂತ್ರಜ್ಞಾನ ಬದಲು ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಬೇಕು, ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

ಒ. ಕೌಶಲ್ಯ ಬೆಳವಣಿಗೆಯ ಕಾರ್ಯಕ್ರಮಗಳು ಮತ್ತು ನಿರ್ಧಿಷ್ಟ ತರಬೇತಿ ಕಾರ್ಯಕ್ರಮಗಳನ್ನು ನೀಡಲು ಪ್ರೋತ್ಸಾಹ ನೀಡುವುದು.

## 4.5 ರಾಜ್ಯದ ಕೃಷಿ ರಫ್ತನ್ನು ಹೆಚ್ಚಿಸುವುದು

ಅ. ಕರ್ನಾಟಕದ ವಿಶಿಷ್ಟ ಕೃಷಿ ಆಹಾರ ಉತ್ಪನ್ನಗಳಿಗೆ ಬ್ರಾಂಡ್ ಇಮೇಜ್ ಸೃಷ್ಟಿಸುವುದು ಮತ್ತು ಮಾರುಕಟ್ಟೆಯಲ್ಲಿ ಪ್ರಬಲತೆ ಪಡೆಯಲು ಪ್ರಮುಖ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದು.

ಆ. ಹೊಸ ಮಾರುಕಟ್ಟೆಗಳನ್ನು ಮತ್ತು ಹೊಸ ಉತ್ಪನ್ನಗಳ ಸರಣಿ ಹಾಗೂ ಪರ್ಯಾಯ ಮಾರುಕಟ್ಟೆ ವಾಹಿನಿಗಳನ್ನು ಸೃಷ್ಟಿಸುವುದು

ಇ. ಯೂರೋಪಿಯನ್ ಯೂನಿಯನ್ (EU), ಹಘಾರ್ಡ್ ಎನಾಲಿಸಿಸ್ ಕ್ರಿಟಿಕಲ್ ಕಂಟ್ರೋಲ್ ಪಾಯಿಂಟ್ (HACCP), ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ (FDA) ಮತ್ತು ಇನ್ನಿತರ

ಅಂತರಾಷ್ಟ್ರೀಯ ಮಾನಕಗಳನ್ನು ಅನುಸರಿಸಿ ಮೌಲ್ಯವರ್ಧಿತ ರಫ್ತಿನ ಮೂಲಕ ಹೆಚ್ಚು ಲಾಭ ಗಳಿಕೆ.

ಈ. ರಾಜ್ಯದಲ್ಲಿ ಸಣ್ಣ ದರ್ಜೆಯ ಕೃಷಿ ಆಧಾರಿತ ಘಟಕಗಳು ವಿಶ್ವ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆ ಕಾಯ್ದುಕೊಳ್ಳಲು ವಿಶೇಷ ಒತ್ತು ನೀಡುವುದು.

## 4.6 ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಬಂಡವಾಳ ಹೂಡಿಕೆ

ಅ. ಮೂಲಭೂತ ಸೌಕರ್ಯಗಳಿಗೆ ಮತ್ತು ಕೈಗಾರಿಕೆಗಳಿಗೆ, ತಂತ್ರಜ್ಞಾನಕ್ಕೆ, ಸಂಶೋಧನೆ, ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿನ ಕೌಶಲ್ಯ ಅಭಿವೃದ್ಧಿಗೆ ವ್ಯವಸ್ಥಿತ ಮತ್ತು ಪಾರದರ್ಶಕ ಕಾರ್ಯಕ್ರಮಗಳಿಂದ ಬಂಡವಾಳವನ್ನು ಆಕರ್ಷಿಸುವುದು.

ಆ. ರಾಜ್ಯದಾದ್ಯಂತ ಸಮತೋಲನ ಕೃಷಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿ ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳಿಗೆ ಅಭಿವೃದ್ಧಿಪಡಿಸುವುದು.

ಇ. ಪಾರದರ್ಶಕತೆಯಿಂದ ಖಾಸಗಿ ವಲಯಗಳು ಅಭಿವೃದ್ಧಿ ಮತ್ತು ಕಾರ್ಯನಿರ್ವಹಣೆ ಹಾಗೂ ಕೃಷಿ ಮೂಲಭೂತ ಸೌಕರ್ಯಗಳ ನಿರ್ವಹಣೆಯಲ್ಲಿ ಭಾಗವಹಿಸುವುದನ್ನು ಪ್ರೋತ್ಸಾಹಿಸುವುದು.

## 4.7 ಹೂಡಿಕೆದಾರ ಸ್ನೇಹಿ ಕಾರ್ಯ ನೀತಿಗಳು ಮತ್ತು ನಿಯಂತ್ರಣ ಚೌಕಟ್ಟು

ಅ. ಕೃಷಿ ವಾಣಿಜ್ಯ ಅಭಿವೃದ್ಧಿಗಾಗಿ ಇತರೆ ಸಂಸ್ಥೆಗಳ ಸಹಯೋಜನೆಯೊಂದಿಗೆ ವಿಶೇಷ ಉದ್ದೇಶದ ವಾಹಿನಿ ರೂಪಿಸುವುದು.

ಆ. ಉತ್ತಮ ಸಾಂಸ್ಥಿಕ ಮಾದರಿಗಳನ್ನು ಕೃಷಿ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿಗೆ, ಕೃಷಿ ಸಂಸ್ಕರಣಕ್ಕೆ ಹಾಗೂ ಸಂಬಂಧಿತ ವಲಯಗಳ ಬೆಂಬಲಕ್ಕಾಗಿ ಸಂಪೂರ್ಣ ಮೌಲ್ಯ ಸರಪಳಿಯನ್ನುದ್ದೇಶಿಸಲು ಸೂಕ್ತ ಮತ್ತು ವೇಗದ ನಿರ್ಣಯ ಪರಿಸರಗಳನ್ನು ಅಭಿವೃದ್ಧಿಪಡಿಸಬೇಕು.

ಇ. ಮೌಲ್ಯ ವರ್ಧಿತ ಕೃಷಿ ಹಾಗೂ ಆಹಾರ ಉತ್ಪನ್ನಗಳ ರಫ್ತನ್ನು ಉತ್ತೇಜಿಸಲು ಕಾರ್ಯನೀತಿ ಬೆಂಬಲ, ಪ್ರೋತ್ಸಾಹ ಮತ್ತು ಸೌಲಭ್ಯಗಳನ್ನು ಒದಗಿಸುವಿಕೆ.

ಈ. ಬಂಡವಾಳ ಹೂಡಿಕೆಗಾಗಿ ಏಕ ಗವಾಕ್ಷಿ ರಹದಾರಿ

ಉ. ಹೂಡಿಕೆದಾರರ ನಿಯತ ಸಭೆಗಳು ಮತ್ತು ರೋಡ್ ಶೋಗಳು, ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಕೃಷಿ ಮೇಳಗಳಲ್ಲಿ ಭಾಗವಹಿಸುವಿಕೆಯನ್ನು ನಡೆಸುತ್ತಿರಬೇಕು.

# 5 ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮ (KABDC)

5.1 ನೀತಿಯಲ್ಲಿ ಉಲ್ಲೇಖಿಸಿರುವ ಮುನ್ನೋಟವನ್ನು ಸಾಕಾರಗೊಳಿಸಲು, ವಿಶೇಷ ಉದ್ದೇಶದ ವಾಹಿನಿ, ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮ ವನ್ನು ಸೃಷ್ಟಿಸಲಾಗುವುದು. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣ ಮತ್ತು ರಫ್ತು ನಿಗಮ ನಿಯಮಿತಕ್ಕೆ (KAPPEC) ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮದ (KABDC) ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಹಾಗೂ ಅದನ್ನು ಪ್ರತ್ಯೇಕ ಘಟಕದಂತೆ ನಿರ್ವಹಿಸುವ ಜವಾಬ್ದಾರಿಯನ್ನು ಕೊಡಲಾಗುತ್ತದೆ. ವಿಶೇಷ ಉದ್ದೇಶಿತ ವಾಹಿನಿ ಕೆಳಗೆ ನಮೂದಿಸಿರುವ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ:

ಅ. ಯೋಜನೆಗಳಿಗೆ ಅವಕಾಶವನ್ನು ಗುರುತಿಸುವುದು ಮತ್ತು ಗುರುತಿಸಲಾದ ಯೋಜನೆಗಳಿಗೆ ಬಂಡವಾಳ ಸೌಲಭ್ಯ ಒದಗಿಸುವುದು

ಆ. ಹೂಡಿಕೆದಾರರ ಸಮಾವೇಶ ಹಾಗೂ ರೋಡ್ ಶೋಗಳನ್ನು ಆಯೋಜಿಸುವುದು

ಇ. ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ಸಂಘ ಸಂಸ್ಥೆಗಳ ಮತ್ತು ತಜ್ಞರ ನೇಮಕಾತಿ ಮಾಡುವುದು

ಈ. ಹೂಡಿಕೆಗೆ ಸಂಬಂಧಿಸಿದ ಪ್ರಶ್ನೆಗಳನ್ನು, (MoU) ಮೆಮೊರ್‍ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಗ್‌ಗಳು, ಕರಾರುವಾಕ್ಕಾದ ಒಡಂಬಡಿಕೆಗಳು ಇತ್ಯಾದಿಗಳನ್ನು ಸಮಯಾನುಸಾರವಾಗಿ ಅನುಸರಿಸುವುದು.

ಉ. ತೀರುವಳಿಗೆ (clearance) ಏಕ ಗವಾಕ್ಷಿಯಾಗಿ ವರ್ತಿಸುವುದು

ಊ. ಹೂಡಿಕೆಗಳ ಅಭಿವೃದ್ಧಿ ಮತ್ತು ವರದಿಗಳನ್ನು ದಾಖಲಿಸುವುದು

ಋ. ಕಾರ್ಯ ನೀತಿಯ ಮುನ್ನೋಟವನ್ನು ಸಾಧಿಸಲು ಸೂಕ್ತವಾದ ಚಟುವಟಿಕೆಗಳನ್ನು ಆಯೋಜಿಸುವುದು

## 6 ಕೃಷಿ ಪರಿಕರ ವಲಯದ ಅಭಿವೃದ್ಧಿ

6.1 ಸುಸ್ಥಿರ ಕೃಷಿ ಬೆಳವಣಿಗೆಗೆ ಬಹುಮುಖ್ಯವಾಗಿ ಸದೃಢ ಕೃಷಿ ಪರಿಕರ ವಲಯದಲ್ಲಿ ಈ ಕೆಳಗೆ ನಮೂದಿಸಲಾಗಿರುವುದನ್ನು ಅಭಿವೃದ್ಧಿಗೊಳಿಸುವುದು (ಅಷ್ಟನ್ನೇ ಸೀಮಿತಗೊಳಿಸಿಲ್ಲ);

ಅ. ಉನ್ನತ ಮಟ್ಟದ ಬೀಜ, ಸಂಕರಣ / ಉತ್ತಮ ವೈವಿಧ್ಯದ ಸಸಿಗಳ ಅಭಿವೃದ್ಧಿ ಮತ್ತು ಲಭ್ಯತೆ

ಆ. ಅಂಗಾಂಶ ಕೃಷಿ ಸಂಶೋಧನಾಲಯಗಳು ಮತ್ತು ಪ್ರಾತ್ಯಕ್ಷಿಕೆ ಕೃಷಿಭೂಮಿ

ಇ. ಬೃಹತ್ ಬೀಜೋತ್ಪಾದನೆ, ಸಂಸ್ಕರಣೆ ಹಾಗೂ ಶೇಖರಣ ಕೇಂದ್ರಗಳ ಸ್ಥಾಪನೆ

ಈ. ಬೀಜ ಪ್ರಮಾಣನ ಕೇಂದ್ರಗಳು

ಉ. ಪಶುಸಂಗೋಪನೆಯಲ್ಲಿ ಕೃತಕ ಗರ್ಭಧಾರಣೆ

ಊ. ಪಶುಸಂಗೋಪನೆಯಲ್ಲಿ ಕೀಟಬಾಧೆ ನಿರ್ವಹಣೆ

ಋ. ಪ್ರಾಣಿ ಆರೋಗ್ಯ ರಕ್ಷಣೆ ಮತ್ತು ತಳಿ ಸಂವರ್ಧನೆ ಸೇವೆಗಳು ಹಾಗೂ ಪಶುಸಂಗೋಪನೆಯಲ್ಲಿ ರೋಗ ನಿರ್ವಹಣೆ

ಎ. ಕೃಷಿ, ಬೆಳೆ, ಮೀನುಗಾರಿಕೆ ಮತ್ತು ಪಶುಸಂಗೋಪನೆಗೆ ವಿಮೆ

ಏ. ಸಮಗ್ರ ನೀರಾವರಿ ಪದ್ಧತಿಗಳ ಅಭಿವೃದ್ಧಿ

ಐ. ಸಸ್ಯ ಸಂರಕ್ಷಣಾ ರಾಸಾಯನಿಕ ಮತ್ತು ಜೈವಿಕ ಪೀಡೆ ನಾಶಕಗಳು

ಒ. ಜಾನುವಾರು, ಕೋಳಿ, ಪ್ರಾಣಿಗಳಿಗೆ ಮೇವು ಮತ್ತು ಆಹಾರದ ಅಭಿವೃದ್ಧಿ

ಓ. ಜಾನುವಾರು ಮತ್ತು ಪಶು ಔಷಧಗಳು

ಔ. ಹಸಿರು ಮನೆ ರಚನೆ ಮತ್ತು ಉಪ-ಪದ್ದತಿಗಳು, ಸಸ್ಯಗಳ ಬೆಳೆ ಮಾಧ್ಯಮಗಳ ಅಭಿವೃದ್ಧಿ.

ಕ. ಆಹಾರ ಸಂಸ್ಕರಣೆಯ ಉಪಕರಣಗಳ ತಯಾರಿಕೆ

ಕಿ. ಗ್ರಾಮೀಣ ತಂತ್ರಜ್ಞಾನ ಮತ್ತು ನವೀಕರಿಸಬಹುದಾದ ಶಕ್ತಿ ಉತ್ಪಾದನಾ ವ್ಯವಸ್ಥೆ

ಖ. ನಗರ / ಪಟ್ಟಣಗಳ ತ್ಯಾಜ್ಯವನ್ನು ಬಳಸಿ ಸಾವಯವ ಗೊಬ್ಬರ ತಯಾರಿಸುವ ಪ್ಲಾಂಟ್‌ಗಳ ಅಭಿವೃದ್ಧಿ

ಖ. ಕೃಷಿ ಮತ್ತು ಗ್ರಾಮೀಣ ಕ್ಷೇತ್ರಗಳಿಗೆ ಆರ್ಥಿಕ ನೆರವು

ಖಿ. ಕೃಷಿ ಹಾಗೂ ಸಂಬಂಧಿತ ವಲಯಗಳಿಗೆ MIS ಮತ್ತು ಮಾಹಿತಿ ಸಂಗ್ರಹ ವ್ಯವಸ್ಥೆ ಕಲ್ಪಿಸುವುದು.

## 7. ಅತಿಮುಖ್ಯವಾದ ಉತ್ಪನ್ನಗಳ ಅಭಿವೃದ್ಧಿಯೆಡೆ ಗಮನ

7.1 ಕರ್ನಾಟಕ ರಾಜ್ಯ ಕೃಷಿ ವಲಯದ ಉತ್ಪನ್ನಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಪ್ರಮುಖ ಸ್ಥಾನದಲ್ಲಿರಿಸಲು ಅವಶ್ಯಕವಾದ ತಂತ್ರಗಳನ್ನು ರೂಪಿಸಿ ಸ್ಪರ್ಧಾತ್ಮಕತೆ ಮತ್ತು ವೈಶಿಷ್ಟ್ಯಗಳನ್ನುಳ್ಳ ಆಯ್ದ ಉತ್ಪನ್ನಗಳಿಗೆ ಉತ್ತೇಜನ ನೀಡಲಾಗುವುದು. ಬೀಜೋತ್ಪಾದನೆ, ಬೆಳೆ ನಿರ್ವಹಣೆ, ಬೆಳೆ ಉತ್ಪನ್ನ ಮತ್ತು ಪ್ಯಾಕೇಜಿಂಗ್ ಒಳಗೊಂಡಂತೆ ಕಂಟಕಗಳು ಮತ್ತು ವಿವಾಧಗಳನ್ನು ಉದ್ದೇಶಿಸಲು ಮಾರ್ಗೋಪಾಯಗಳನ್ನು ರೂಪಿಸಲಾಗುವುದು. ರಫ್ತುಗಾರಿಕೆಯಲ್ಲಿ ಬರಬಹುದಾದ ಅಡಚಣೆಗಳನ್ನು ನಿವಾರಿಸಿ ಈ ಉತ್ಪನ್ನಗಳಿಗೆ ವಿಶ್ವ ಮಾರುಕಟ್ಟೆಯಲ್ಲಿ ಉತ್ತಮ ಸ್ಥಾನಮಾನ ದೊರೆಯುವಂತೆ ಮತ್ತು ಉತ್ತಮ ಬೆಲೆ ಸಿಗುವಂತೆ ಮಾಡಲಾಗುವುದು. ಅಲ್ಲದೆ ಆಯ್ದ ಸ್ಥಳಗಳಲ್ಲಿ ಮೌಲ್ಯವರ್ಧತೆ ಉದ್ಯಾನಗಳನ್ನು ನಿರ್ಮಿಸಬೇಕಾಗುತ್ತದೆ.

## 8. ಸರಕಿನ ಗುರುತು ಅಭಿವೃದ್ಧಿ

8.1 ಉತ್ಪಾದನಾ ಸರಕಿಗೆ ಸೂಕ್ತವಾದ ಗುರುತನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಕೈಗೊಳ್ಳುವ ಮೂಲಕ ವಿವಿಧ ಭೌಗೋಳಿಕ ಹಿನ್ನೆಲೆಯುಳ್ಳ ಬ್ಯಾಡಗಿ ಮೆಣಸಿನಕಾಯಿ, ಕೊಡಗಿನ ಜೇನು, ಗುಲಾಬಿ ಈರುಳ್ಳಿ, ನಂಜನಗೂಡಿನ ರಸಬಾಳೆ ಇತ್ಯಾದಿಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಿ ಉತ್ತಮ ಬೆಲೆ ತಂದುಕೊಡಬಹುದಾಗಿದೆ. ಈ ಬೆಳೆಗಳ ನಿರ್ದಿಷ್ಟ ಪ್ರದೇಶಗಳನ್ನು ಗುರುತಿಸಿ ಕಾಯ್ದಿರಿಸುವುದು. ಗುಣಮಟ್ಟವನ್ನು ದೃಢೀಕರಿಸುವುದು ಉತ್ಪಾದನಾ ಸಂಸ್ಥೆಗಳ ಸಹಕಾರ ಸಂಘಗಳ ಹಾಗೂ ಖಾಸಗಿ ಸಂಸ್ಥೆಗಳಿಗೆ ಮೌಲ್ಯವರ್ಧನೆ ಹಾಗೂ ಘಟಕಗಳನ್ನು ಹಾಗೂ ಗುರುತು ಅಭಿವೃದ್ಧಿಪಡಿಸಲು ಪ್ರೋತ್ಸಾಹ ನೀಡಬೇಕು ಹಾಗೂ ಈ ಸಂಬಂಧ ಸಂಶೋಧನಾ ಕೇಂದ್ರಗಳನ್ನು ಸ್ಥಾಪನೆ ಹಾಗೂ ಲಭ್ಯವಿರುವ ಸಂಶೋಧನಾ ಫಲಿತಾಂಶಗಳ ಬಳಕೆಗೆ ಒತ್ತುಕೊಡಲಾಗುವುದು.

## 9. ಒಪ್ಪಂದ ಕೃಷಿ

9.1 ರಾಜ್ಯದ ಒಟ್ಟಾರೆ ಬೆಳವಣಿಗೆಯನ್ನು ಹೆಚ್ಚಿಸಲು ಒಪ್ಪಂದದ ಮೇರೆಗೆ ಕೃಷಿ ಮಾಡುವುದನ್ನು ಅನುಮತಿಸಲಾಗುವುದು. ಖಾಸಗಿ ವಲಯ ಅಥವಾ ಇತರೆ ಸಂಸ್ಥೆಗಳಿಗೆ ಅವುಗಳಿಗೆ ಹಂಚಿಕೆಮಾಡಲಾದ ಭೂಮಿಯಲ್ಲಿ ರಾಜ್ಯದ ಕೃಷಿ ಉತ್ಪಾದನೆ ಮಾರುಕಟ್ಟೆ ಸಂಸ್ಥೆಯ ಕಾಯ್ದೆಯಲ್ಲಿ ನಮೂದಿಸಿರುವಂತೆ ಸಹ ಒಪ್ಪಂದದ ಕೃಷಿ ಮಾಡಲು ಅನುಮತಿಕೊಡಲಾಗುತ್ತದೆ.

## 10. ಕೃಷಿ, ಬೇಸಾಯ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ರೇಷ್ಮೆ, ಜೇನು ಕೃಷಿ ಮತ್ತು ಪಶುಸಂಗೋಪನೆ

10.1 ಅನುತ್ಪಾದಕ ತೋಟಗಳು, ಕಡಿಮೆ ಗುಣಮಟ್ಟ ಇರುವ ವಂಶವಾಹಿಯ ಬೀಜಗಳನ್ನು ಬಳಸುವುದರಿಂದಾಗುವ ಕುಂಠಿತ ಉತ್ಪಾದನೆ, ಹೆಚ್ಚಿನ ಕೀಟ ಹಾಗೂ ರೋಗಬಾಧೆ ಇತ್ಯಾದಿಯಲ್ಲಿನ ತೊಂದರೆಗಳನ್ನು ಹತ್ತಿಕ್ಕಲು ಆಧುನಿಕ ಪದ್ಧತಿ ತಂತ್ರಜ್ಞಾನಗಳು ಮತ್ತು ವೈಜ್ಞಾನಿಕ ನಿರ್ವಹಣಾ ತಾಂತ್ರಿಕತೆಗಳನ್ನು ಅಳವಡಿಸುವುದು ಅವಶ್ಯಕ.

10.2 ಈ ಕೆಳಕಂಡ ವಿಷಯಗಳಿಗೆ ಈ ನೀತಿಯಲ್ಲಿ ಒತ್ತು ಕೊಡಲಾಗುವುದು :-

ಅ. ಪ್ರಾಕೃತಿಕ ಸಂಪನ್ಮೂಲ ನಿರ್ವಹಣೆ

ಆ. ಹೆಚ್ಚು ಮತ್ತು ಅತಿ ಹೆಚ್ಚು ಸಾಂದ್ರತೆಯ ತೋಟಗಾರಿಕೆ

ಇ. ನೆರಳು ಬಲೆ ಕೃಷಿ, ಮೇಲ್ಪದರ ಮುಚ್ಚುವ ಹಾಗೂ ಪ್ಲಾಸ್ಟಿಕ್ ಕೊಳವೆಗಳ ಬಳಕೆ

ಈ. ಸಾವಯವ ಕೃಷಿ

ಉ. ಜಲಾನಯನ ನಿರ್ವಹಣೆ

ಊ. ಜಲಾನಯನ ಅಭಿವೃದ್ಧಿ

ಋ. ನೀರಿನ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು

ಎ. ಒಣ ಭೂಮಿ ಕೃಷಿ

ಏ. ಅಂಗಾಂಶ ಕೃಷಿ ಮತ್ತು ಸಸ್ಯ ಕಸಿ ಪದ್ಧತಿಗಳು

ಐ. ತರಕಾರಿಗಳ, ಹೂವುಗಳು, ಅಲಂಕಾರಿಕ ಸಸ್ಯಗಳು, ಹಣ್ಣುಗಳು ಇತ್ಯಾದಿಗಳಿಂದ ಗುಣ ಮಟ್ಟದ ಬೀಜ / ಸಸ್ಯ ಉತ್ಪಾದನೆಗಾಗಿ ಸಸ್ಯವಾಟಿಕೆ ಅಭಿವೃದ್ಧಿ ಮತ್ತು ನಿರ್ವಹಣೆ

ಒ. ಏಕದಳ ಧಾನ್ಯ, ತೃಣ ಧಾನ್ಯ, ದ್ವಿದಳ ಧಾನ್ಯ, ಎಣ್ಣೆ ಕಾಳು, ನಾರಿನ ಬೆಳೆಗಳು, ಸಕ್ಕರೆ ಬೆಳೆಗಳು ಮತ್ತು ಮೇವಿನ ಬೆಳೆಗಳನ್ನು ಬೆಳೆಯುವುದು

ಓ. ಬಹುವಾರ್ಷಿಕ ಹಾಗೂ ಬಹುವಾರ್ಷಿಕವಲ್ಲದ ಹಣ್ಣುಗಳು, ತರಕಾರಿಗಳು, ಸಂಬಾರು ಪದಾರ್ಥಗಳು, ತೋಟದ ಬೆಳೆಗಳು, ಕತ್ತರಿಸಿದ ಪುಷ್ಪಗಳು, ಕತ್ತರಿಸಿದ ಎಲೆಗಳು, ಕಂದಿನಾಕಾರದ ಪುಷ್ಪಗಳು, ಬಿಡಿ ಹೂಗಳು, ತೋಟದ ಹೂಗಳು, ನೈಸರ್ಗಿಕ ಬಣ್ಣಗಳು, ಔಷಧೀಯ ಸಸ್ಯಗಳು ಮತ್ತು ಪರಿಮಳ ದ್ರವ್ಯದ ಸಸ್ಯಗಳನ್ನು ಬೆಳೆಸುವುದು

ಔ. ವೃಕ್ಷ ಕೃಷಿ

ಕ. ನಿಯಂತ್ರಿತ ವಾತಾವರಣದಲ್ಲಿ ಹೈ ಟೆಕ್ ಬೇಸಾಯ

ಕಿ. ಉತ್ಪಾದಕತೆ ಕುಂದಿರುವ ಮುಪ್ಪಾದ ತೋಟಗಳ ಪುನಶ್ಚೇತನ / ಬದಲೀಕರಣ

ಖ. ಬೆಳೆ ಪೌಷ್ಠಿಕತೆ

ಖ. ರೇಷ್ಮೆ ಕೃಷಿ

ಖಿ. ರೇಷ್ಮೆ ಹುಳು ಸಾಕಣೆ

ಗ. ಗೂಡು ನಂತರದ ತಾಂತ್ರಿಕತೆ

ಗಿ. ಪ್ರಾಣಿ ವಂಶವಾಹಿ ಸಂಪನ್ಮೂಲ ನಿರ್ವಹಣೆ

ಘ. ಕಡಲು ಮೀನುಗಾರಿಕೆ ಮತ್ತು ಒಳನಾಡು ಮೀನುಗಾರಿಕೆ

ಘಿ. ಶುದ್ಧ ಜಲ ಮೀನುಗಾರಿಕೆ

ಙ. ಚೌಳು ನೀರು ಮೀನುಗಾರಿಕೆ, ಕಡಲು ಮೀನುಗಾರಿಕೆ

ಙಿ. ಅಲಂಕಾರಿಕ ಮೀನುಗಾರಿಕೆ

ಂಂ. ಸಮಗ್ರ ಮೀನು ಕೃಷಿ

ಃಃ. ಮಂದೆ ಸುಧಾರಣೆ, ಆರೋಗ್ಯ ಮತ್ತು ಫಲವತ್ತತೆ

ಅಅ. ಹೈನುಗಾರಿಕೆ

ಆಆ. ಕೃತಕ ಗರ್ಭಧಾರಣೆ

ಇಇ. ಹಸು, ಮೇಕೆ, ಎಮ್ಮೆ, ಕುರಿ, ಹಂದಿ ಮತ್ತು ಮೊಲ ಸಾಕಾಣಿಕೆ

ಈಈ. ಕೋಳಿ ಸಾಕಣಿಕೆ ಮತ್ತು ಮರಿಗಳ ಅಭಿವೃದ್ಧಿ

ಉಉ. ಜಾನುವಾರು, ಹೈನುಗಾರಿಕೆ ಮತ್ತು ಕುಕ್ಕುಟ ನಿರ್ವಹಣೆ

ಊಊ. ವಾಣಿಜ್ಯ ಉದ್ದೇಶಕ್ಕಾಗಿ ಮೊಟ್ಟೆ ಮತ್ತು ಮಾಂಸದ ಕೋಳಿ ಘಟಕಗಳು

ಖಖ. ಮೆಲುಕು ಹಾಕುವ ಸಣ್ಣ ಪ್ರಾಣಿಗಳ ಮತ್ತು ಮೊಲಗಳ ಸಮಗ್ರ ಅಭಿವೃದ್ಧಿ
ಎಎ. ಮರಿ ಕೋಣದ ರಕ್ಷಣೆ ಮತ್ತು ಸಾಕಣೆ
ಏಏ. ಜೇನು ಸಾಕಣೆಯಿಂದ ಪರಾಗ ಸ್ಪರ್ಷ ಬೆಂಬಲ
ಐಐ. ಜೇನು ಕೃಷಿ
ಒಒ. ಮೇವಿನ ಬೆಳೆಗಳ ಬೇಸಾಯ, ಮೇವಿನ ಮರಗಳು, ಹುಲ್ಲುಗಾವಲುಗಳ ಪುನಶ್ಚೇತನದ ಮೂಲಕ ಮೇವಿನ ಅಭಿವೃದ್ಧಿ
ಓಓ. ಪ್ರಾಣಿ ಆಹಾರ
ಔಔ. ದೂರ ಸಂವೇದನೆ, ದತ್ತಾಂಶ ಆಧಾರಿತ ನಿರ್ವಹಣೆ ಮತ್ತು ನಿಖರ ಬೇಸಾಯ
ಕಕ. ಸಾಮರ್ಥ್ಯ ರೂಪುಗೊಳಿಸುವುದು, ಕೌಶಲ್ಯ ಅಭಿವೃದ್ಧಿ, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ತರಬೇತಿ
ಕಿಕಿ. ಕೃಷಿಯಲ್ಲಿ ಹಣಕಾಸಿನ ಸಹಾಯ ಮತ್ತು ವಿಮೆ

## 11. ಸಾವಯವ ಕೃಷಿ ಸಮುಚ್ಚಯ

11.1 ಹೆಚ್ಚುತ್ತಿರುವ ಸಾವಯವ ಕೃಷಿ ಉತ್ಪನ್ನಗಳ ಬೇಡಿಕೆ ಮತ್ತು ಆರೋಗ್ಯದ ಅರಿವು ಹಾಗೂ ಕರ್ನಾಟಕ ರಾಜ್ಯದ ನೈಸರ್ಗಿಕ ಸಂಪನ್ಮೂಲಗಳ ಸ್ವಾಭಾವಿಕ ಪ್ರಯೋಜನದ ಪ್ರಭಾವವು ಸಾವಯವ ಕೃಷಿ ಸಮುಚ್ಚಯಗಳನ್ನು ನಿರ್ಮಿಸಲು ಪ್ರೇರೇಪಿಸುತ್ತದೆ. ಸೂಚಿಸಿರುವ ಸರಕುಗಳಲ್ಲಿ ಅಕ್ಕಿ, ಜೋಳ, ಮೆಕ್ಕೆ ಜೋಳ, ರಾಗಿ, ನವಣೆ, ಬೆಲ್ಲ, ಹತ್ತಿ, ಮೆಣಸಿನಕಾಯಿ, ತೊಗರಿಬೇಳೆ, ಅಡಿಕೆ, ಕಾಫಿ, ಕಡಲೆಬೀಜ, ಸೂರ್ಯಕಾಂತಿ, ಆಲೂಗೆಡ್ಡೆ, ಟೊಮೆಟೋ, ಬಾಳೆಹಣ್ಣು, ಸೀಗೆ, ತೋಟಗಾರಿಕೆ ಬೆಳೆಗಳು, ಮೀನುಗಾರಿಕೆ, ಸಾವಯವ ಆಹಾರದಿಂದ ಪಶು ಆಹಾರ ಇತ್ಯಾದಿ ಸೇರುತ್ತದೆ. ದೊಡ್ಡ ಪ್ರಮಾಣದ ಸಾವಯವ ಕೃಷಿ, ಶೇಖರಣೆ, ಸಂಸ್ಕರಣೆ ಮತ್ತು ಪ್ಯಾಕೇಂಜಿಂಗ್‌ಗಳ ಅಗತ್ಯಗಳನ್ನು ಈ ಸಮುಚ್ಚಯಗಳು ಉದ್ದೇಶಿಸಬೇಕು.

## 12. ಕೃಷಿ - ತೋಟ - ಪಶು ಸಂಗೋಪನೆ – ಮೀನುಗಾರಿಕೆ – ಆಹಾರ ಸಂಸ್ಕರಣೆ ಸಮುಚ್ಚಯ

12.1 ಕರ್ನಾಟದಲ್ಲಿ ಸ್ಥಿರ ಕೃಷಿಯನ್ನು ಅಭಿವೃದ್ಧಿಗೊಳಿಸುವ ಪ್ರಯತ್ನದಲ್ಲಿ, ನಿಶ್ಚಿತ ಸಮತೋಲನ ಕೃಷಿ ಮತ್ತು ರಾಜ್ಯಾದ್ಯಂತ ಆಹಾರ ಕೈಗಾರೀಕರಣ, ರೈತರಿಗೆ ಹೆಚ್ಚುವರಿ ಆದಾಯ ಮತ್ತು ಸ್ಥಳೀಯರಿಗೆ ಸಂಭವನೀಯ ಉದ್ಯೋಗಾವಕಾಶಗಳನ್ನು ಕಲ್ಪಿಸಲು,ಕೃಷಿ-ತೋಟ-ಪಶು ಸಂಗೋಪನೆ-ಮೀನುಗಾರಿಕೆ-ಆಹಾರ ಸಂಸ್ಕರಣಗಳಿಗೆ ಉನ್ನತ ಮಟ್ಟದಲ್ಲಿ ಸಮುಚ್ಚಯ ನಿರ್ಮಿಸಬೇಕಾಗುತ್ತದೆ.

12.2 ಈ ಸಮುಚ್ಚಯವನ್ನು ಪ್ರಮುಖ ಸಾರಿಗೆ ಧಮನಿಗಳಾದ ರಸ್ತೆ ಮತ್ತು ಪ್ರಮುಖ ರೈಲು ಮಾರ್ಗಗಳಿಗೆ ಅಚ್ಚುಕಟ್ಟಾಗಿ ಜೋಡಿಸಬೇಕಾಗುತ್ತದೆ. ಆ ಸ್ಥಳಗಳಲ್ಲಿ ಈಗಾಗಲೇ ಇರುವ ಸಾಗಣಿಕೆ ಜಾಲಗಳ ಸೌಲಭ್ಯವನ್ನು ಪ್ರಮುಖವಾಗಿ ಪಡೆದುಕೊಳ್ಳುವುದು ಮತ್ತು ಕಾರಿಡಾರ್‌ಗಳ ಯೋಜನೆ ಪ್ರಕ್ರಿಯೆಯನ್ನು (planning process) ಏಕೀಭವಿಸಿದ ಹಸಿರು ಮತ್ತು ಕಂದು ಹೊಲಗಳನ್ನು ಸೇರಿಸಿ ಅಭಿವೃದ್ಧಿಪಡಿಸಬೇಕು. ಯೋಜಿತ ಕಾರಿಡಾರ್‌ಗಳ ಸ್ಥಿರ ಕಾರ್ಯ ನಿರ್ವಹಣೆಗೆ ಫೀಡರ್ ರಸ್ತೆ / ರೈಲು ಮಾರ್ಗಗಳನ್ನು ನದೀ ತೀರದ ಹಿಂದಿನ ಪ್ರದೇಶ, ಬೆಳೆಯುತ್ತಿರುವ ಪ್ರದೇಶ, ಆಗಲೇ ಇರುವ ಮತ್ತು ಯೋಜಿತ ಕೈಗಾರಿಕ ಪ್ರದೇಶ ಮತ್ತು ಮಾರುಕಟ್ಟೆಗಳಿಗೆ ಅವಶ್ಯವಾಗಿ ಹೆಚ್ಚಿಸಬೇಕು. ಪ್ರಭಾವ ವಲಯದ ಎರಡೂ ಬದಿಗಳ 25ಕಿಲೋಮೀಟರ್‌ಗಳಷ್ಟು ವ್ಯಾಪ್ತಿಯನ್ನು ಸೇರಿಸಿ, ಹೆಚ್ಚು ಪ್ರಭಾವದ ಆರ್ಥಿಕ ವಲಯಗಳ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಯನ್ನು ಪರಿಗಣಿಸಬೇಕಾಗುತ್ತದೆ. ಈ ಕಾರಿಡಾರ್‌ನಲ್ಲಿ ಅಗತ್ಯವಾದ ಅಂಶಗಳಾದ ಅಭಿವೃದ್ಧಿ ಘಟಕಗಳು, ಕೃಷಿ ವಾಣಿಜ್ಯ ಬಂಡವಾಳ ವಲಯಗಳು,

ಕೃಷಿವಾಣಿಜ್ಯ ಹೂಡಿಕೆ ಪ್ರದೇಶಗಳು, ಶಿಕ್ಷಣ ಸಮೂಹಗಳು, ವಿಶೇಷ ತೋಟಗಾರಿಕೆ ಪ್ರವಾಸೋದ್ಯಮ ವಲಯಗಳು, ದೊಡ್ಡ ಪ್ರಮಾಣದ ಹತೋಟಿಯುತ ಪರಿಸರ ಬೆಳವಣಿಗೆ, ಆಹಾರ ಸಂಸ್ಕರಣ ಕೈಗಾರಿಕೆಗಳು, ಆಹಾರ ಉದ್ಯಾನಗಳು ಮತ್ತು ವಿಶೇಷ ಆರ್ಥಿಕ ಆಹಾರ ವಲಯಗಳನ್ನು ಒಳಗೊಂಡಿರಬೇಕು.

12.3 ಈ ಸಮುಚ್ಚಯ ಮತ್ತು ಸಮೂಹ ನಿರ್ಮಾಣದಲ್ಲಿ ಅಗತ್ಯವಾದ ರಕ್ಷಣೆ ಮತ್ತು ಸ್ವಚ್ಛತೆಯನ್ನು ಕಾಪಾಡಲು ಕಾನೂನಿನಿಂದ ಸ್ಥಾಪಿಸಲ್ಪಟ್ಟ ಶಾಸನಬದ್ಧ ಮತ್ತು ಅಧಿನಿಯಮದ ಜೊತೆಗೆ ಕರ್ನಾಟಕ ರಾಜ್ಯ ಸರ್ಕಾರವು ಕಟ್ಟುನಿಟ್ಟಾದ ಅಭ್ಯಾಸ ಮತ್ತು ಕ್ರಮಗಳನ್ನು ಜಾರಿಗೊಳಿಸಬೇಕು

## 13 ಕೃಷಿ ಮೂಲ ಸೌಕರ್ಯ

ಕೃಷಿ ಮೂಲ ಸೌಕರ್ಯದ ಅಭಿವೃದ್ಧಿಯು ಸಾರ್ವಜನಿಕ ಖಾಸಗಿ ಸಹಭಾಗಿತ್ವಗಳ ಮುಖಾಂತರ ರಚನಾತ್ಮಕ ಮತ್ತು ವ್ಯವಹಾರಿಕ ದೃಷ್ಟಿಕೋನದಿಂದ ಮಾಡಿದಾಗ ಕೃಷಿ ವಾಣಿಜ್ಯ ಕೈಗಾರಿಕೋದ್ಯಮದಲ್ಲಿ ಅವಕಾಶಗಳು ತೆರೆದುಕೊಳ್ಳುತ್ತವೆ. ಈ ಕಾರ್ಯನೀತಿಯನ್ನು ದೃಷ್ಟಿಕೋನದಲ್ಲಿಟ್ಟುಕೊಂಡು ಮೂಲ ಸೌಕರ್ಯಗಳ ಸಮೂಹವನ್ನು ಯೋಜಿಸಬೇಕು.

13.1 ಕಟಾವು ನಂತರದ ಮೂಲ ಸೌಕರ್ಯಗಳು

ಅ. ಸಂಗ್ರಹ ಕೇಂದ್ರಗಳ ಸಂಪರ್ಕ ಜಾಲ, ಶೇಖರಣಾ ಕೊಠಡಿಗಳು, ಪೂರ್ವ ಶೀತಲೀಕರಣ, ಶೀತಲ ಶೇಖರಣೆ, ಪ್ರಮುಖ ಸಂಸ್ಕರಣ ಕೇಂದ್ರಗಳು, ಚಲಿಸುವ ಸಂಸ್ಕರಣ ಘಟಕಗಳು, ಹೆಚ್ಚು ತಂಪಿರುವ ಶೀತಲ ಶೇಖರಣೆ, ಆಳ ಘನೀಕರಣ, ಹತೋಟಿಭರಿತ ಪರಿಸರ ಶೇಖರಣೆ, ರೂಪಾಂತರ ಪರಿಸರ ಶೇಖರಣೆ, ಗ್ರೇಡಿಂಗ್ ಮತ್ತು ಪ್ಯಾಕಿಂಗ್ ಹಾಲ್‌ಗಳು, ಪ್ಯಾಕ್ ಮನೆಗಳು, ಶೀತಲೀಕರಣ ಸಾರಿಗೆ, ಉಗ್ರಾಣಗಳು ಮುಂತಾದವು

ಆ. ಯಾಂತ್ರೀಕೃತ ಕಟಾವು ವಿಧಾನ

ಇ. ಅಂತರ ಉತ್ಪನ್ನ ವರ್ಗೀಕರಣ ಮತ್ತು ಶೇಕರಣಾ ಶೆಡ್ಡುಗಳು/ಶೇಖರಣೆ/ಉತ್ಪನ್ನದ ಸ್ವಚ್ಚತೆ ಕಾರ್ಯ

ಈ. ಯಾಂತ್ರೀಕೃತ ನಿರ್ವಹಣಾ ಸೌಕರ್ಯಗಳಾದ ಬೇರ್ಪಡಿಸುವಿಕೆ, ವರ್ಗೀಕರಣ, ತೊಳೆಯುವುದು, ವ್ಯಾಕ್ಸಿಂಗ್, ಹಣ್ಣು ಮಾಡುವುದು, ಪ್ಯಾಕೇಜಿಂಗ್ ಮತ್ತು ಪ್ಯಾಲೇಟೈಸೇಷನ್

ಉ. ಆಧುನಿಕ ಸಿಲೊ ಶೇಖರಣಾ ವ್ಯವಸ್ಥೆ

ಊ. ಪೂರ್ವ ರವಾನೆ ಸರಕು ಉಪಚಾರ ಸೌಲಭ್ಯಗಳಾದ ಹೊಗೆಯಾಡುವಿಕೆ, ಕ್ಷ-ಕಿರಣಗಳ ಸ್ಕ್ರೀನಿಂಗ್, ಬಿಸಿ ನೀರಿನ ಉಪಚಾರ, ನೀರಿನ ಗಡಸುತನ ನಿವಾರಣಾ ಘಟಕ, ಉಷ್ಣ ಭಾಷ್ಪ ಉಪಚಾರ, ವಿದ್ಯುನ್ಮಾನ ಕಿರಣದಿಂದ ಸಂಸ್ಕರಣ, ಪ್ರದೀಪನ ಸೌಲಭ್ಯಗಳು ಇತ್ಯಾದಿ

ಋ. ಮೀನುಗಾರಿಕೆಯಲ್ಲಿ ಕಟಾವು ಮತ್ತು ಕಟಾವಿನ ನಂತರದ ತಂತ್ರಜ್ಞಾನಗಳಾದ ಹೊಸಮಾದರಿಯ ಮೀನಿನ ದೋಣಿ ಮತ್ತು ಬಲೆಗಳು, ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಪ್ಯಾಕ್ ಮಾಡುವುದು

ಎ. ತೋಟಗಾರಿಕೆ, ಪುಷ್ಪ ಕೃಷಿ, ಮೀನುಗಾರಿಕೆ ಮತ್ತು ಪಶು ಉತ್ಪನ್ನಗಳಿಗೆ ವಿಶೇಷ ಸಾಗಣೆ ಘಟಕಗಳು

ಏ. ಹಾಳಾಗುವ ಉತ್ಪನ್ನಗಳ ವಾಯು ರವಾನೆ ಸಂಕೀರ್ಣ

ಐ. ಮುಕ್ತಾಯ ಘಟ್ಟದ ಮಾರುಕಟ್ಟೆ

ಒ. ಸಮಗ್ರ ಕೃಷಿ ಸಾಗಣಿಕೆಗೆ ಮೂಲಭೂತ ಸೌಕರ್ಯಗಳು ಮತ್ತು ಸಮೂಹಗಳು

ಓ. ಕೆಡುವ ಮತ್ತು ಕೆಡದಿರುವ ಸರಕುಗಳ ಚಿಲ್ಲರೆ ವ್ಯಾಪಾರಿ ಮಳಿಗೆಗಳು

13.2 ಕೃಷಿ-ತೋಟಗಾರಿಕೆ-ಪಶುಸಂಗೋಪನೆ ಮೀನುಗಾರಿಕೆ ಉತ್ಪತ್ತತೆಯ ಮಟ್ಟದ ಆಹಾರ ಸಂಸ್ಕರಣ ಮೊಗಸಾಲೆ/ಸಮುಚ್ಚಯ ಕೈಗಾರಿಕಾ ಮೂಲಭೂತ ಸೌಲಭ್ಯಗಳು

ಅ. ಕೃಷಿ ವಾಣಿಜ್ಯದ ಬಂಡವಾಳ ಹೂಡಿಕೆ ವಲಯಗಳ ದೊಡ್ಡ ಮೊತ್ತ ಅಂದರೆ ಸುಮಾರು 5000 ಹೆಕ್ಟೇರು ಭೂಮಿಯನ್ನು ಒಳಗೊಂಡಿರುವ ಆಹಾರ ಉದ್ಯಾನಗಳು, ಕೃಷಿ ವಿಶೇಷ ಆರ್ಥಿಕ ವಲಯಗಳು, ಸಾರ್ವಜನಿಕ ಸಂಸ್ಕರಣ ಸಮುಚ್ಚಯಗಳು ಇತ್ಯಾದಿಯನ್ನು ಯೋಜಿಸಲಾಗುತ್ತದೆ. ಇವುಗಳು ಆಧುನಿಕ ಮೂಲಭೂತ ಸೌಕರ್ಯ ಹೊಂದಿದ್ದು ಸಾಮಾನ್ಯ ಮೂಲಭೂತ ಸೌಕರ್ಯಗಳಾದ ಸ್ಥಳ ವರ್ಗೀಕರಣ, ರಸ್ತೆ, ವಿದ್ಯುತ್, ನೀರು, ದೂರಸಂಪರ್ಕ, ಒಳಚರಂಡಿ, ಹೊಲಸು ನೀರು, ಹೊಲಸು ನೀರಿನ ಶುದ್ಧೀಕರಣ ಘಟಕ, ತ್ಯಾಜ್ಯ ನೀರಿನ ಶುದ್ಧೀಕರಣ ಘಟಕ,ಹೆಚ್ಚಿನ ಒತ್ತಡದ ನೀರಿನ ಕಾಲುವೆಗಳು, ಮಳೆ ನೀರಿನಿಂದ ಕೃಷಿ,ಅಗ್ನಿ ಶಾಮಕ ಇನ್ನೂ ಹಲವು, ಅಲ್ಲದೆ ವಿಶೇಷ ಮೂಲಭೂತ ಸೌಕರ್ಯಗಳಾದ ಹರಾಜು ಮಳಿಗೆ, ಶೀತಲೀಕರಣ ಕೇಂದ್ರಗಳು, ಸಂಪರ್ಕನಿಷೇದ ಅನುಕೂಲಗಳು, ಗುಣಮಟ್ಟ ಹತೋಟಿಗೆ ಸಂಶೋಧನಾಲಯಗಳು, ಗುಣಮಟ್ಟ ಪ್ರಮಾಣೀಕರಿಸುವ ಕೇಂದ್ರಗಳು, ಕಚ್ಚಾ ವಸ್ತು ಶೇಖರಣೆ, ಹತೋಟಿಯ ಮತ್ತು ರೂಪಾಂತರಿಸಿದ ನೈಸರ್ಗಿಕ ಶೇಖರಣೆ, ಪ್ರಮುಖ ಸಂಸ್ಕರಣ ಕೇಂದ್ರಗಳು, ಕೇಂದ್ರೀಕೃತ ಸಂಸ್ಕರಣ ಕೇಂದ್ರಗಳು ಇತ್ಯಾದಿ.

ಆ. ಸಮುಚ್ಚಯದ ಪ್ರಮುಖ ಸ್ಥಳಗಳಲ್ಲಿ ಮುಖ್ಯ ಸರಕುಗಳು ಮತ್ತು ಸಮರ್ಥವಾದ ಸ್ಥಳಗಳಲ್ಲಿ ಕೃಷಿ ವಾಣಿಜ್ಯ ಹೂಡಿಕೆ ವಲಯ ರೂಪಿಸಲಾಗುವುದು.ಆಧುನಿಕ ಸೌಲಭ್ಯಗಳು ಮತ್ತು ವಿಶೇಷ ಮೂಲಭೂತ ಸೌಕರ್ಯಗಳು ಈ ವಲಯಗಳಲ್ಲಿರಬೇಕಾಗುತ್ತದೆ

ಇ. ಕೃಷಿ ಚಿಕಿತ್ಸಾಲಯಗಳು

ಈ. ಕೃಷಿ ಕಟ್ಟಿದ ರೇವು / ಬಂದರು

ಉ. ರೈಲ್ವೇ ಇಲಾಖೆಯೊಂದಿಗೆ ಕೃಷಿ ಸರಕುಗಳ ನಿರ್ವಹಣೆ

ಊ. ಸಾಗಣಿಕಾ ಸಮುಚ್ಚಯ

ಋ. ಗುಣವುಳ್ಳ ಮತ್ತು ಶುದ್ಧ ಹಾಲಿನ ಉತ್ಪಾದನೆ ಹಾಗೂ ಮೌಲ್ಯ ವರ್ಧಿತ ಸಂಸ್ಕರಣಕ್ಕೆ ಮೂಲಭೂತ ಸೌಕರ್ಯ ಅಭಿವೃದ್ಧಿ

ಎ. ಕೇಂದ್ರ ಸರ್ಕಾರದ ರಫ್ತು ಪರಿವೀಕ್ಷಣಾ ಮಂಡಳಿಯ ಮಾರ್ಗಸೂಚಿಯನ್ನು ಅನುಸರಿಸಿ ಸಂದಿಗ್ಧ ನಿಯಂತ್ರಣ ನಿಯಮಗಳಿಗನುಸಾರವಾಗಿ ಆಧುನಿಕ ಮೀನುಗಾರಿಕೆ ಬಂದರುಗಳು ಅಭಿವೃದ್ಧಿಯ ಜೊತೆಗೆ ಆಧುನೀಕರಣ ಮತ್ತು ಇರುವ ಎಲ್ಲಾ ಬಂದರುಗಳ ಸುಸಜ್ಜೀಕರಣ ಹಾಗೂ ಅಡಚಣೆಗಳನ್ನು ವಿಶ್ಲೇಷಿಸುವುದು.

ಏ. ಪ್ರಮುಖ ಸ್ಥಳಗಳಲ್ಲಿ ಸುರಕ್ಷಿತ ಇಳಿಸುವಿಕೆ, ಔಟ್ ಫಿಟ್ಟಿಂಗ್ ಮತ್ತು ಸಾಂಪ್ರಂದಾಯಿಕ ಮತ್ತು ಚಿಕ್ಕ ಯಾಂತ್ರೀಕೃತ ಮೀನುಗಾರಿಕೆಯ ದೋಣಿ ಮತ್ತು ಫಿಷಿಂಗ್‌ಗೇರ್ ಇತ್ಯಾದಿಗಳ ರಿಪೇರಿ ಮಾಡಲು ಸೌಲಭ್ಯಗಳು, ಅಲ್ಲದೆ ಹರಾಜು ಹಾಲ್‌ಗಳು, ಬಲೆ ಸರಿಪಡಿಸುವ ಸ್ಥಳ, ಮಂಜುಗಡ್ಡೆ ಘಟಕ ಮತ್ತು ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಮೀನು ನಿರ್ವಹಣೆ ಸೌಲಭ್ಯಗಳು ಹಾಗೂ ಆರೋಗ್ಯಕರ ಗುಣಮಟ್ಟವಿರುವ ಮೀನು ಇಳಿಯುವ ಸೌಲಭ್ಯ ಕೇಂದ್ರಗಳ ಅಭಿವೃದ್ಧಿ

ಐ. ಸಮೂಹ ಕೈಗಾರಿಕಾ ಮತ್ತು ಪರಿಸರ ನಿಯಂತ್ರಣ ಪದ್ಧತಿಗೆ ಸಾಮಾನ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು., ಉದಾಹರಣೆಗೆ ಮಾಲಿನ್ಯ ನಿಯಂತ್ರಣ, ಉದ್ದಿಮೆಗಳು ಹೊರಸೂಸುವ ವಸ್ತುಗಳ ಉಪಚಾರ ಗ್ರಾಮೀಣ ಹಾಗೂ ನಗರ ಕಸಾಯಿ ಮನೆಗಳ ಆಧುನೀಕರಣ

13.3 ಕೃಷಿ-ತೋಟಗಾರಿಕೆ-ಪಶು ಸಂಗೋಪನೆ-ಮೀನುಗಾರಿಕೆ-ಅತ್ಯುನ್ನತ ತಾಂತ್ರಿಕತೆಯ ಆಹಾರ ಸಂಸ್ಕರಣ-ಶಿಕ್ಷಣ ಮತ್ತು ಜ್ಞಾನ ಸಮುಚ್ಚಯಗಳು

13.3.1 ಉನ್ನತ ಶಿಕ್ಷಣ, ಸಂಶೋಧನೆ ಮತ್ತು ಅಭಿವೃದ್ಧಿಯ ಹಾಗೂ ಜ್ಞಾನದ ಜೊತೆ ಕೆಳಕಂಡ ಕೇಂದ್ರಗಳ ರಚನೆ:

- ಅ. ಉತ್ಕೃಷ್ಟತೆಯ ಕೇಂದ್ರಗಳು
- ಆ. ಮಾರುಕಟ್ಟೆ ಮಾಹಿತಿ ಕೇಂದ್ರಗಳು
- ಇ. ಮಾಹಿತಿ ಪ್ರಸರಣ ಕೇಂದ್ರಗಳು
- ಈ. ಕೃಷಿ ಶಿಕ್ಷಣ ಸಮುಚ್ಚಯಗಳು
- ಉ. ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು
- ಊ. ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳು
- ಋ. ಸಾಮಾನ್ಯ ಸೇವಾ ಕೇಂದ್ರಗಳು

## 14 ಕೃಷಿ ಆಧಾರಿತ ಕೈಗಾರಿಕೆಗಳು

14.1 ಈ ನೀತಿಯ ಭಾಗವಾಗಿ ವಿವಿಧ ಕೃಷಿ ಕೈಗಾರಿಕಾ ಘಟಕಗಳನ್ನು ಹವಾಮಾನ ವೈವಿಧ್ಯತೆ ಇರುವ ಪರಿಸ್ಥಿತಿಗಳನ್ನು ಒಟ್ಟುಗೂಡಿಸಿ, ಕಚ್ಚಾ ವಸ್ತು ಸಂಪನ್ಮೂಲಗಳು, ಪ್ರಾಂತೀಯ ಮತ್ತು ದೇಶೀಯ ಕೌಶಲ್ಯಗಳು ಹಾಗೂ ರಫ್ತು ಮಾರುಕಟ್ಟೆ ಅವಕಾಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಆಲೋಚಿಸಲಾಗಿದೆ. ಕೈಗಾರಿಕಾ ಭಾಗಗಳನ್ನು ಕೃಷಿ ಪರಿಕರ ಮತ್ತು ನೀರಾವರೀಕೃತ, ನಿಯಂತ್ರಿತ ಹವಾಮಾನ ಪರಿಸ್ಥಿತಿಗಳಲ್ಲಿ ಉನ್ನತ ತಾಂತ್ರಿಕ ಬೇಸಾಯ, ತರಕಾರಿ ಮತ್ತು ಹಣ್ಣು ಸಂಸ್ಕರಣೆ, ಕೃಷಿ ಇಂಜಿನಿಯರಿಂಗ್, ತಾಂತ್ರಿಕತೆ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಕೃಷಿಗಾರಿಕೆ ಮತ್ತು ಸಂಶೋಧನೆ, ಆಹಾರ ಸಂಸ್ಕರಣೆ, ಧಾನ್ಯ ಸಂಸ್ಕರಣೆ, ಬೇಕರಿ ಮತ್ತು ತಿಂಡಿ ತಿನಿಸುಗಳು, ಮಸಾಲೆ ಪದಾರ್ಥಗಳು, ನೀರು ಮತ್ತು ಸಾಗರೋತ್ಪನ್ನಗಳು, ಜಾನುವಾರು ಉತ್ಪನ್ನಗಳು, ಕೋಳಿ ಉತ್ಪನ್ನಗಳು, ಪ್ರಾಣಿ ಉತ್ಪನ್ನಗಳು ಇತ್ಯಾದಿ. ಅಲ್ಲದೆ ಮೊದಲು ಹೇಳಿದ ಭಾಗಗಳ ಯೋಜನೆಗಳ ಅವಕಾಶಕ್ಕಾಗಿ ನಿರ್ದೇಶಿತ ಪಟ್ಟಿ ಕೆಳಕಂಡಂತಿದೆ. ಆದಾಗ್ಯೂ ನೀತಿಯಲ್ಲಿ ಯಾವ ಹೂಡಿಕೆಗಳ ಬಗ್ಗೆ ನಮೂದಿಸಿಲ್ಲವೋ, ಅವುಗಳನ್ನೂ ಸಹ ನೀತಿಯಡಿ ಸೇರಿಸಲಾಗಿದೆ.

14.2 ಕೃಷಿ ಆಧಾರಿತ ಕೈಗಾರಿಕೆ – ಕೃಷಿ ಪರಿಕರ ಮತ್ತು ನೀರಾವರಿ

- ಉತ್ತಮ ಗುಣ ಮಟ್ಟದ ಬೀಜ, ಸಂಕರಣ / ಸುಧಾರಿತ ತಳಿಗಳ ಉತ್ಪಾದನೆ ಮತ್ತು ಲಭ್ಯತೆ
- ಅಂಗಾಂಶ ಕೃಷಿ ಪ್ರಯೋಗಾಲಯಗಳು ಮತ್ತು ಪ್ರಾತ್ಯಕ್ಷಿಕೆ ಕ್ಷೇತ್ರಗಳು
- ಬೃಹತ್ ಪ್ರಮಾಣದ ಬೀಜೋತ್ಪಾದನ, ಸಂಸ್ಕರಣ ಮತ್ತು ಶೇಖರಣಾ ಕೇಂದ್ರಗಳ ಸ್ಥಾಪನೆ
- ಸಸ್ಯ ಸಂರಕ್ಷಣಾ ರಾಸಾಯನಿಕಗಳು ಮತ್ತು ಜೈವಿಕ ಕೀಟನಾಶಕಗಳು
- ಬೀಜ ಪ್ರಮಾಣೀಕರಣ ಕೇಂದ್ರಗಳು
- ಕೃತಕ ಗರ್ಭಧಾರಣಾ ಕೇಂದ್ರಗಳು
- ಪಶುಸಂಗೋಪನೆಗೆ ಕೀಟ ನಿರ್ವಹಣಾ ಘಟಕಗಳು
- ಪಶುಸಂಗೋಪನೆಗಾಗಿ ಜಾನುವಾರು ಆರೋಗ್ಯ ಕೇಂದ್ರ ಮತ್ತು ವಂಶ ವೃದ್ಧಿ ಸೌಲಭ್ಯಗಳು ಮತ್ತು ರೋಗ ನಿರ್ವಹಣಾ ಕೇಂದ್ರಗಳು

- ಕ್ಷೇತ್ರದಲ್ಲೇ ನೀರಾವರಿ ರಚನೆಗಳು
- ಪಶು ವೈದ್ಯಕೀಯ ಮತ್ತು ಪ್ರಾಣಿ ಔಷಧಗಳ ಉತ್ಪಾದನಾ ಸೌಲಭ್ಯಗಳು
- ಜಾನುವಾರು, ಕೋಳಿ ಸಾಕಣೆ, ಪ್ರಾಣಿ ಮೇವಿನ ಆಹಾರ ಮತ್ತು ಇತರ ಪಶುಸಂಗೋಪನೆಗಾಗಿ ಬಳಸುವ ಪರಿಕರಗಳ ಕೈಗಾರಿಕೆ
- ಹಸಿರುಮನೆ ರಚನೆಗಳು ಮತ್ತು ಉಪ ಪದ್ಧತಿಗಳು, ಬೆಳವಣಿಗೆಯ ಮಾಧ್ಯಮ ಇತ್ಯಾದಿ
- ಸಮಗ್ರ ನೀರಾವರಿ ಪದ್ಧತಿಗಳಾದ ಹನಿ ನೀರಾವರಿ, ತುಂತುರು ನೀರಾವರಿ, ರಸನೀರಾವರಿ, ಸೂಕ್ಷ್ಮ ನೀರಾವರಿ ಮತ್ತು ನೀರು ಕೊಯ್ಲಿನ ರಚನೆಗಳು
- ಆಹಾರ ಸಂಸ್ಕರಣ ಘಟಕಗಳು ಮತ್ತು ಉಪಕರಣಗಳು
- ನಗರ / ಪಟ್ಟಣಗಳಲ್ಲಿ ಲಭ್ಯವಾಗುವ ತ್ಯಾಜ್ಯಗಳನ್ನು ಬಳಸಿ ಜೈವಿಕ ಕಾಂಪೋಸ್ಟ್ ಘಟಕಗಳ ಸ್ಥಾಪನೆ
- ಗ್ರಾಮೀಣ ತಂತ್ರಜ್ಞಾನ ಮತ್ತು ನವೀಕರಿಸಬಲ್ಲ ಶಕ್ತಿ ಉತ್ಪಾದನಾ ಪದ್ಧತಿಗಳು
- ಕೃಷಿ ತಾಂತ್ರಿಕತೆ ಮತ್ತು ಕ್ಷೇತ್ರ ಯಾಂತ್ರೀಕರಣ ಕೈಗಾರಿಕೆಗಳು

14.3 ಕೃಷಿ ಆಧಾರಿತ ಕೈಗಾರಿಕೆ – ನಿಯಂತ್ರಿತ ವಾತಾವರಣದಡಿ ಉನ್ನತ ತಾಂತ್ರಿಕ ಬೇಸಾಯ

- ಪುಷ್ಪ ಕೃಷಿ, ತೋಟಗಾರಿಕೆ, ಬೀಜಾಬಿವೃದ್ಧಿ, ಪಶುಸಂಗೋಪನೆ, ಮೀನುಗಾರಿಕೆ, ಜಲಕೃಷಿ, ತರಕಾರಿ ಬೇಸಾಯ, ಹಣ್ಣು, ಅಣಬೆ ಬೇಸಾಯ ಮತ್ತು ಕೃಷಿ ಹಾಗೂ ಸಂಬಂಧಿತ ವಲಯಗಳ ಸೇವೆಗಳು
- ನಿಖರ ಕೃಷಿ ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ತೋಟಗಾರಿಕೆ
- ಜೀವಕೋಶ ಕೇಂದ್ರಕ ಕಾಂಡಗಳ ಅಭಿವೃದ್ಧಿ ಮತ್ತು ವೃದ್ದೀಕರಣ
- ಶುದ್ಧ ನೀರಿನ ಜಲ ಕೃಷಿ, ಶೀತಲ ಜಲ, ಸಮುದ್ರ ಕೃಷಿ
- ಜೇನುಗೂಡುಗಳು ಮತ್ತು ಉಪಕರಣಗಳು
- ತರಕಾರಿಗಳು, ಇತರೆ ತರಕಾರಿಗಳು, ಹಣ್ಣು, ಗಡ್ಡೆಗಳು, ಕಂದುಗಳು, ಬಿಡಿ ಹೂಗಳು, ಕುಂಡದಲ್ಲಿ ಬೆಳೆಯುವ ಗಿಡಗಳು, ಅಲಂಕಾರಿಕ ಸಸ್ಯಗಳ ಎಲೆ/ಕಾಂಡ/ಮೊಗ್ಗು, ಬೇರಿರುವ ಕಡ್ಡಿಗಳು, ಒಣ ಹೂಗಳು, ಎಲೆಗಳನ್ನು ನಿಯಂತ್ರಿತ ವಾತಾವರಣದಲ್ಲಿ ಅಂದರೆ ಹಸಿರುಮನೆ / ಪಾಲಿ ಮನೆಗಳಲ್ಲಿ ಬೆಳೆಯುವುದು
- ಮಾದರಿ ಸಸ್ಯಾಗಾರಗಳು ಮತ್ತು ಸಣ್ಣ ಸಸ್ಯಾಗಾರಗಳು
- ವರ್ಷವಿಡೀ ಗುಣಮಟ್ಟದ ಉತ್ಪಾದನೆಗಾಗಿ ಜಲಕೃಷಿ
- ಉತ್ಪಾದಿತ ಸಂಕರಣ / ಸುಧಾರಿತ ತಳಿಗಳ ಬೀಜ, ಸಸಿ, ತರಕಾರಿ ಬೀಜಗಳ ಉತ್ಪಾದನೆ, ಮೀನಿನ ಮರಿಗಳನ್ನು ಉನ್ನತ ತಾಂತ್ರಿಕ ಪದ್ದತಿಗಳನ್ನಾಧರಿಸಿ ಅಭಿವೃದ್ಧಿಗೊಳಿಸುವುದು

14.4 ಕೃಷಿ ಆಧಾರಿತ ಕೈಗಾರಿಕೆ-ತರಕಾರಿ ಮತ್ತು ಹಣ್ಣಿನ ಸಂಸ್ಕರಣೆ

- ಹುಳಿಯುವುದು (ಫರ್ಮೆಂಟೇಷನ್)
- ಹಣ್ಣಿನ ತಿರುಳು ಮತ್ತು ರಸಗಳು
- ಕ್ಯಾನ್ ಮಾಡಿದ ಹಣ್ಣುಗಳು ಮತ್ತು ತರಕಾರಿಗಳು

- ಜ್ಯಾಮ್
- ಹಣ್ಣಿನ ಗಟ್ಟಿ ರಸ (ಸ್ಕ್ವಾಷ್‌ಸ್)
- ಉಪ್ಪಿನಕಾಯಿ ಮತ್ತು ಚಟ್ನಿ
- ನಿರ್ಜಲೀಕರಣ
- ಅಸೆಪ್ಟಿಕ್ ಪಲ್ಪಿಂಗ್ - ಸೂಕ್ಷ್ಮ ಜೀವಿ ರಹಿತ ವಾತಾವರಣದಲ್ಲಿ ತಿರುಳು ತೆಗೆಯುವಿಕೆ
- ಶೀಘ್ರ ಘನೀಕರಣ ಪ್ರತ್ಯೇಕಗೊಳಿಸುವಿಕೆ
- ಅಡುಗೆಯ ಅಂತರ್ಮಾಧ್ಯಮಗಳು
- ತಿನ್ನುವುದಕ್ಕೆ ಸಿದ್ದವಾದ ಪದಾರ್ಥಗಳು
- ಸಾಂದ್ರೀಕೃತ ರಸ
- ಸಾರಗೊಳಿಸಿದ ಅಂಶ ಮತ್ತು ಪುಡಿಗಳು
- ಸಾವಯವ ಹಣ್ಣುಗಳು
- ಅಣಬೆಗಳು
- ಕರಿದ ಚಿಪ್ಸ್
- ಕೋಕೋ ಉತ್ಪನ್ನಗಳು
- ಮದ್ಯಸಾರ ಪಾನಕ – ವೈನ್, ವ್ಹಿಸ್ಕಿ, ಬ್ರ್ಯಾಂಡಿ, ರಮ್ ಇತರೆ
- ಸಾಫ್ಟ್ ಡ್ರಿಂಕ್ – ಪಾನೀಯಗಳು
- ಸಿದ್ದವಾದ ಪಾನಕಗಳು
- ತಿಂಡಿ ತಿನಿಸುಗಳು

14.5 ಕೃಷಿ ಆಧಾರಿತ ಕೈಗಾರಿಕೆ - ಆಹಾರ ಸಂಸ್ಕರಣೆ, ಬೇಕರಿ ಮತ್ತು ತಿಂಡಿ ತಿನಿಸುಗಳು

- ಆಧುನಿಕ ಅಕ್ಕಿ ಗಿರಣಿಗಳು
- ಫಲಹಾರದ ಧಾನ್ಯಗಳು
- ಗೋಧಿ ಹಿಟ್ಟಿನ ಗಿರಣಿಗಳು
- ತೌಡುಯುಕ್ತ ಗೋಧಿ ಹಿಟ್ಟು
- ಬಲವರ್ಧಿತ ಗೋಧಿ ಹಿಟ್ಟು
- ಅಕ್ಕಿ ಹಿಟ್ಟು
- ಇತರೆ ಧಾನ್ಯಗಳ ಹಿಟ್ಟು
- ಜೋಳದ ಹಿಟ್ಟು
- ಪ್ರತ್ಯೇಕ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಜೋಳದ ಎಣ್ಣೆ
- ಜೋಳದ ಸಂಸ್ಕರಣೆ

- ಒರಟು ಧಾನ್ಯಗಳು
- ಧಾನ್ಯಗಳ ಸಂಸ್ಕರಣೆ-ಒಣಗಿಸುವ ಯಂತ್ರಗಳು, ಬಣ್ಣ ಬೇರ್ಪಡಿಸುವಿಕೆ, ಪ್ಯಾಕೇಜಿಂಗ್ ಘಟಕಗಳು
- ಇತರೆ ಧಾನ್ಯಗಳ ಹಿಟ್ಟು
- ಮುಸುಕಿನ ಜೋಳದ ಹಿಟ್ಟು
- ಹೋಲ್ ವೀಟ್ ಮಫಿನ್ಸ್
- ತಿನ್ನಲು ಸಿದ್ದವಾದ ತಿಂಡಿಗಳು
- ಶರ್ಕರ ಪಿಷ್ಟ ಪದಾರ್ಥಗಳು
- ಬೇಕರಿ ಪದಾರ್ಥಗಳು – ಈಸ್ಟ್ ಬ್ರೆಡ್, ಜಿಂಜರ್ ಬ್ರೆಡ್
- ಶ್ರೆಡ್ಡೆಡ್ ಗೋಧಿ ಬಿಸ್ಕತ್ತುಗಳು, ಪಫ್ಡ್ ವೀಟ್ ಮತ್ತು ಪಫ್ಡ್ ರೈಸ್, ಫ್ಲೇಕ್ಡ್ ವೀಟ್ ಮತ್ತು ಫ್ಲೇಕ್ಡ್ ರೈಸ್
- ಚಾಕೋಲೇಟ್‌ಗಳು
- ಸೋಯಾಬೀನ್ ಉತ್ಪನ್ನಗಳು
- ಕಾಫಿ ಮತ್ತು ರಬ್ಬರ್ ಸಂಸ್ಕರಣೆ ಹಾಗೂ ಮಂಡಿಗಳ ನಿರ್ಮಾಣ
- ಕಸ್ಟರ್ಡ್ ಪೌಡರ್
- ಮ್ಯಕರೋನಿ ಮತ್ತು ಚೀಸ್
- ಬೆಲ್ಲ-ಕಬ್ಬು, ತಾಳೆ, ಕಚ್ಚಾ ಕಬ್ಬು
- ಚೂಯಿಂಗ್ ಗಮ್
- ನೆಲಗಡಲೆ ಸಂಸ್ಕರಣೆ
- ಪಾಸ್ತ
- ಹಪ್ಪಳ
- ತುಂಬಿಸಿದ ಕಣಕ -ಬೇಯಿಸಿದ ಮತ್ತು ಬೇಯಿಸದ

14.6 ಕೃಷಿ ಆಧಾರಿತ ಕೈಗಾರಿಕೆ - ಉನ್ನತ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಕೃಷಿ ಹಾಗೂ ಸಂಶೋಧನೆ

- ವಿವಿಧ ವಾತಾವರಣದಲ್ಲಿ ಬೆಳೆಯುವ ಹಣ್ಣು ಮತ್ತು ತರಕಾರಿಗಳ ನಿರೀಕ್ಷಿತ ವಂಶವಾಹಿ ಮತ್ತು ಪರ್ಯಾಯ ಗುಣ ವಂಶವಾಹಿ
- ಪೌಷ್ಠಿಕ ಕ್ರಿಯಾಶಕ್ತಿಯುತ ಮತ್ತು ಅಂತರಕ್ರಿಯೆ
- ತೋಟಗಾರಿಕೆ ಬೆಳೆಗಳ ಸುಧಾರಿತ ಉತ್ಪಾದಕತೆ ಮತ್ತು ಗುಣಮಟ್ಟವನ್ನು ಸುಧಾರಿಸಲು ಕೀಟ ಪರಾಗಸ್ಪರ್ಶವನ್ನು ಬಳಸುವುದು
- ಅಸಾಂಪ್ರದಾಯಿಕ ಪ್ರದೇಶಗಳಲ್ಲಿ ಬೆಳೆಯುವಂತಹ ತಳಿಗಳ ಅಭಿವೃದ್ಧಿ
- ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ವಾಯು ಮತ್ತು ಜಲ ಕೃಷಿ ತಾಂತ್ರಿಕತೆಯ ಪ್ರಮಾಣಬದ್ದಗೊಳಿಸುವುದು

- ಹಣ್ಣು ಮತ್ತು ತರಕಾರಿಗಳಲ್ಲಿರುವ ಪೌಷ್ಠಿಕ ಗುಣಮಟ್ಟ ಮತ್ತು ಪೌಷ್ಠಿಕಾಂಶ ಲಕ್ಷಣಗಳನ್ನು ಅಧ್ಯಯನ ಮಾಡುವುದು
- ತೋಟಗಾರಿಕೆ ಬೆಳೆಗಳಲ್ಲಿ ಕೊಯಿಲೋತ್ತರ ತಾಂತ್ರಿಕತೆ ಮತ್ತು ಮೌಲ್ಯವರ್ಧನೆ
- ಹಣ್ಣು ಮತ್ತು ತರಕಾರಿಗಳ ದೀರ್ಘ ಕಾಲ ಶೇಖರಣೆ ಮತ್ತು ಸಾಗಣೆಗಾಗಿ ಬದಲಾದ ವಾತಾವರಣದಲ್ಲಿ ಪ್ಯಾಕ್ ಮಾಡುವುದು
- ಹಸಿರು ಮನೆ ಬೇಸಾಯ
- ಪ್ರಸ್ತುತದಲ್ಲಿರುವ ಘಟಕಗಳ ಪುನಶ್ಚೇತನವನ್ನೊಳಗೊಂಡ ಅಂಗಾಂಶ ಕೃಷಿ
- ಅಜೈವಿಕ ಒತ್ತಡ ನಿರ್ವಹಣೆ (ಬರಗಾಲ, ಪ್ರವಾಹ, ಚೌಳುತನ, ಆಮ್ಲೀಯತೆ, ಕ್ಷಾರಯುತ, ಪೌಷ್ಠಿಕಾಂಶಗಳ ಅವ್ಯವಸ್ಥೆ ಇತರೆ)
- ವಾತಾವರಣಕ್ಕೆ ಹೊಂದಿಕೊಳ್ಳುವ ಕೃಷಿ
- ಸಾವಯವ ಬೇಸಾಯವನ್ನೊಳಗೊಂಡ ಕೃಷಿ ಸಂರಕ್ಷಣೆ
- ಮಲಿನವಾದ ಮಣ್ಣು ಮತ್ತು ನೀರಿಗೆ ಜೈವಿಕ ಚಿಕಿತ್ಸೆ
- ಜೈವಿಕ ಬಲವರ್ಧನೆ
- ಜೈವಿಕ ಇಂಧನ
- ಜೈವಿಕ ಕೈಗಾರಿಕಾ ಜಲಾಯನ ಪ್ರದೇಶಗಳು
- ನಿರ್ಣಯ ಪೂರಕ ಪದ್ಧತಿಗಳ ಅಭಿವೃದ್ಧಿಯನ್ನು ಸೂಕ್ಷ್ಮ ಮಟ್ಟದ ಭೂಮಿಯ ಯೋಜನೆ
- ಮೀನು ತಳಿ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
- ಕಡಲ ವಿಜ್ಞಾನ ಸಂಶೋಧನೆ
- ಹೊಸ ಪೀಳಿಗೆಯ ಹೊಸ ಮಾದರಿಯ, ಇಂಧನ ಸಾಮರ್ಥ್ಯವಿರುವ, ಬಹುಪಯೋಗಿ ಮೀನುಗಾರಿಕೆ ಉಪಕರಣಗಳ ಅಭಿವೃದ್ಧಿಗೊಳಿಸುವುದು
- ಆಳ ಮೀನುಗಾರಿಕೆಗೆ ಬೇಕಾಗಿರುವ ನೂತನ ಸಲಕರಣೆಯ ದೊಡ್ಡ ಅಳತೆಯ ಬಲೆಗಳ ಅಭಿವೃದ್ಧಿಗೊಳಿಸುವುದು
- ಹೊರವಲಯದಲ್ಲಿ ಅಲಂಕಾರಿಕ ಮೀನು ಮರಿ ಉತ್ಪಾದನಾ ತಾಂತ್ರಿಕತೆ
- ವಿವಿಧ ವಂಶವಾಹಿಗಳ ಸಸ್ಯೋತ್ಪಾದನೆ
- ಪರವಾಲಂಬಿ / ದಾಳಿಕಾರಕಗಳ ಸಮೂಹ ವೃದ್ಧೀಕರಣ
- ಜೈವಿಕ ಗೊಬ್ಬರ ತಯಾರಿಕೆಗಾಗಿ ಹುದುಗುವಿಕೆ ಘಟಕಗಳು
- ಕಾವುಕೊಡುವ ತಂತ್ರಜ್ಞಾನ (ಇನ್ಕ್ಯುಬೇಷನ್)
- ತಳಿ ಹೊಂದಾಣಿಕೆ
- ತದ್ರೂಪ ಸೃಷ್ಠಿ
- ತಳಿ ತಂತ್ರಜ್ಞಾನ
- ಬದಲಾಯಿಸಿದ ತಳಿಗಳ ಜೀವಧಾರಿ ರಚನೆ

- ಪ್ರಾಣಿ ವಿಜ್ಞಾನದಲ್ಲಿ ಜೈವಿಕ ತಂತ್ರಜ್ಞಾನ ಮತ್ತು ಅಣುಜೀವ ಶಾಸ್ತ್ರ
- ಪಶುವೈದ್ಯಕೀಯ ವಿಜ್ಞಾನದಲ್ಲಿ ಸಂಶೋಧನೆ
- ಪ್ರಾಣಿ ವಿಜ್ಞಾನ ಸಂಶೋಧನೆ
- ಹೈನು ವಿಜ್ಞಾನ ಸಂಶೋಧನೆ
- ಪ್ರಾಣಿಗಳ ಆರೋಗ್ಯಕ್ಕೆ ಮತ್ತು ಸಂರಕ್ಷಣೆಗಾಗಿ ಸ್ಟೆಮ್ ಸೆಲ್ ಸಂಶೋಧನೆ
- ಪ್ರಾಣಿ ಜೈವಿಕ-ತಳಿ ಪ್ರಾಯೋಗಿಕತೆ
- ಜೈವಿಕ ನಿಯಂತ್ರಣ (ಬಯೋ ಕಂಟ್ರೋಲ್) ಸಂಶೋಧನಾಲಯಗಳು
- ಅಂತರ್‍ರಾಷ್ಟ್ರೀಯ ಮಟ್ಟದ ಮೀನುಗಾರಿಕೆ ಪರಿಕರಗಳು ಮತ್ತು ಅಂತರ್ಮಧ್ಯಮ ಉತ್ಪತ್ತಿಗಳಿಗಾಗಿ ಉತ್ತಮ ಸಂಸ್ಕರಣಾ ತಾಂತ್ರಿಕತೆ
- ಜೈವಿಕ ಕ್ರಿಯಾತ್ಮಕತೆ ಮತ್ತು ಔಷಧ ಶಾಸ್ತ್ರಕ್ಕೆ ಸಂಬಂಧಿಸಿದ ಮುಖ್ಯವಾದ ಉತ್ಪನ್ನಗಳನ್ನು ಜಲಜೀವ ಸಂಪನ್ಮೂಲಗಳಿಂದ ಅಭಿವೃದ್ಧಿಪಡಿಸುವುದು
- ಮೀನುಗಾರಿಕೆ ತ್ಯಾಜ್ಯ ಬಳಕೆ
- ಜೀವ ರಾಸಾಯನಿಕ ಮತ್ತು ಪೌಷ್ಠಿಕತೆ
- ಹುದುಗು ತಾಂತ್ರಿಕತೆ ಮತ್ತು ಜೀವ ತಾಂತ್ರಿಕತೆ
- ಆಹಾರ ತಾಂತ್ರಿಕತೆ
- ಆಹಾರ ಸೂಕ್ಷ್ಮಜೀವಿಶಾಸ್ತ್ರ
- ಆಹಾರ ಪ್ಯಾಕೇಜಿಂಗ್ ತಾಂತ್ರಿಕತೆ
- ಆಹಾರ ಕಾಪಾಡುವಿಕೆ ಮತ್ತು ಪೀಡೆಗಳ ನಿಯಂತ್ರಣ
- ಆಹಾರ ಸುರಕ್ಷತೆ ಮತ್ತು ವಿಶ್ಲೇಷಣಾತ್ಮಕ ಗುಣ ನಿಯಂತ್ರಣ

14.7 ಕೃಷಿ ಆಧಾರಿತ ಕೈಗಾರಿಕೆ – ಸಾಂಬಾರು ಉತ್ಪನ್ನಗಳು

- ಸಾಂಬಾರು ಮಿಶ್ರಣಗಳು
- ಒಣಗಿಸಿದ ಸಾಂಬಾರು ಪದಾರ್ಥ ಮಿಶ್ರಣಗಳು
- ಘನೀಕರಿಸಿದ ಒಣ ಸಾಂಬಾರು ಪದಾರ್ಥಗಳು
- ಲವಣ ಜಲದಲ್ಲಿ ಸಾಂಬಾರು ಪದಾರ್ಥಗಳು
- ಇತರ ಮೌಲ್ಯವರ್ಧಿತ ಉತ್ಪನ್ನಗಳು
- ಸಾಂಬಾರು ಪದಾರ್ಥ ಎಣ್ಣೆ ಮತ್ತು ಓಲಿಯೋರಿಸಿನ್ಸ್
- ಅಗತ್ಯ ಎಣ್ಣೆಗಳು
- ಗಿಡಮೂಲಿಕೆಗಳ ಸಾರ ಸಂಗ್ರಹ
- ಗಿಡಮೂಲಿಕೆಗಳಿಂದ ಸಿದ್ಧಪಡಿಸಿದ ಸೌಂದರ್ಯ ವರ್ಧಕಗಳು

- ಪುಷ್ಪಗಳು, ಬಣ್ಣಗಳು, ವರ್ಣದ್ರವ್ಯಗಳು, ದುರ್ಗಂಧಹಾರಕಗಳು, ಸುಗಂಧ ದ್ರವ್ಯ, ಒಣ ಹೂಗಳು ಇತ್ಯಾದಿಯಿಂದ ಔಷಧ ಸಾರಸಂಗ್ರಹ
- ಗಿಡಮೂಲಿಕೆಗಳಿಂದ ತಯಾರಿಸಲಾದ ಔಷಧಗಳು
- ಸುಗಂಧ ದ್ರವ್ಯಗಳು
- ಟ್ಯಾನಿನ್
- ಪೆಕ್ಟಿನ್
- ತರಕಾರಿ ಎಣ್ಣೆ

14.8 ಕೃಷಿ ಆಧಾರಿತ ಕೈಗಾರಿಕೆ – ಜಲ ಕೃಷಿ ಮತ್ತು ಸಾಗರೋತ್ಪನ್ನಗಳು

- ಸೀಗಡಿ, ಮಣ್ಣಿನ ಏಡಿ, ಇಂಡಿಯನ್ ಮ್ಯಾಕರೆಲ್, ಸಿಯರ್ ಮೀನುಗಳು, ಸಮುದ್ರದ ಏಡಿ, ಬಿಳಿ ಸೀಗಡಿ, ಪುಷ್ಪ ಸೀಗಡಿ, ಕಂದು ಸೀಗಡಿ, ರಾಜ ಸೀಗಡಿ, ಸಮುದ್ರದ ಸೀಗಡಿ, ಕಟಲ್ ಮೀನು, ಬ್ಲಾಕ್ ಟಿಪ್ ಶಾರ್ಕ್, ಸಮುದ್ರ ಮೀನು
- ಮೀನು ಕಣಕದ ಪದಾರ್ಥಗಳು – ಫಿಷ್ ಸಾಸೇಜ್, ಕೇಕ್, ಕಟ್‌ಲೆಟ್, ಪೇಸ್ಟ್, ಮೀನಿನ ಕಣಕ, ವಿವಿಧ ಆಕೃತಿಯ ಪದಾರ್ಥಗಳು, ಒಣ ಮೀನು
- ಔಷಧೀಯ ಉತ್ಪನ್ನಗಳು, ಸ್ಪೈರುಲಿನ, ಕೋಲೋರಲ್ಲಾ, ಆಲ್ಗೈ, ಸೆನೆಡೆಸ್ಮಸ್, ಶಂಕು ಚಿಪ್ಪುಗಳಿಂದ ನೈಸರ್ಗಿಕ ಸುಣ್ಣ, ಮೀನಿನ ಎಣ್ಣೆ
- ಘನೀಕೃತ ಸಮುದ್ರೋತ್ಪನ್ನಗಳು
- ಇಂಡಿವಿಜ್ಯುವಲಿ ಕ್ವಿಕ್ ಫ್ರೋಜನ್ ಸಮುದ್ರೋತ್ಪನ್ನಗಳು
- ಡಬ್ಬೀಕರಿಸಿದ ಸೀಗಡಿ ಮತ್ತು ಪ್ರಾನ್‌ಗಳು
- ಲೋಬ್‌ಸ್ಟರ್ ಮತ್ತು ಬೊಂಡಾಸ್
- ಬೊಂಡಾಸ್
- ಘನೀಕೃತ ಮೀನುಗಳು
- ಡಬ್ಬೀಕರಿಸಿದ ಮೀನು
- ಒಣ ಮೀನು
- ಅಲಂಕಾರಿಕ ಮೀನುಗಳು
- ತಾಟೆ ಮೀನಿನ ರೆಕ್ಕೆಗಳು
- ಒಣಗಿದ ಬೊಂಡಾಸ್ ಮೂಳೆ
- ಒಣ ಮೀನಿನ ಹುಡಿ
- ಸಂಸ್ಕರಿಸಿದ ಮೀನಿನ ಹುಡಿ
- ಸೀಗಡಿ ಚಕ್ಕೆ
- ಕೈಟಿನ್

- ಸಮುದ್ರ ಸೌತೆ
- ಒಣಗಿದ ಬೊಂಡಾಸ್
- ಜೆಲ್ಲಿ ಮೀನು
- ಒಣಗಿದ ಕೇದಾರ ಮೀನಿನ ಪುಡಿ
- ಅರ್ಧ ಶುದ್ಧೀಕೃತ ಹಾಗೂ ಶುದ್ಧೀಕೃತ ಪದಾರ್ಥಗಳು

14.9 ಕೃಷಿ ಆಧಾರಿತ ಕೈಗಾರಿಕೆ - ಪ್ರಾಣಿ, ಹೈನು ಮತ್ತು ಕೋಳಿ ಉತ್ಪನ್ನಗಳು

- ಮೌಲ್ಯವರ್ಧಿತ ಹಾಲು ಉತ್ಪನ್ನಗಳು - ಹಾಲು ಮತ್ತು ಕೆನೆಹಾಲು ಪುಡಿ, ಪ್ಯಾಕೇಜ್ಡ್ ಹಾಲು, ಬೆಣ್ಣೆ, ತುಪ್ಪ, ಹಾಲು ಗಡ್ಡೆ (ಚೀಸ್), ಕುಡಿಯಲು ಸಿದ್ಧವಿರುವ ಹಾಲು ಉತ್ಪನ್ನಗಳು, ಮೊಸರು, ಹಸುಮಕ್ಕಳಿಗೆ ಹಾಲು, ಕೆನೆತೆಗೆದ ಹಾಲು ಪುಡಿ, ಇತರೆ ಹಾಲು ಪುಡಿಗಳು.
- ಮಾಲ್ಟ್ ಮಾಡಿದ ಹಾಲು ಆಹಾರ
- ಔಷಧ ಸಸ್ಯಗಳನ್ನು ಒಳಗೊಂಡ ಬಲವರ್ಧಿತ ಕಡಿಮೆ ಕೊಬ್ಬಿನಾಂಶವಿರುವ ತುಪ್ಪ
- ಸಾವಯವ ಪದ್ಧತಿಯಿಂದ ಉತ್ಪಾದಿಸಿದ ಆಹಾರ ತಿಂದ ಕೋಳಿಗಳಿಂದಾದ ಉತ್ಪನ್ನಗಳು
- ಮೊಟ್ಟೆ ಉತ್ಪನ್ನಗಳು – ಒಣಗಿದ/ಬೇಯಿಸಿದ/ಘನೀಕರಿಸಿದ/ಶೇಖರಿಸಿದ
- ಪ್ರಾಣಿ ಕೇಸಿಂಗ್ – ಹಸು, ಕುರಿ, ಇತರೆ ಪ್ರಾಣಿಗಳ ಕೇಸಿಂಗ್‌ಗಳು, ಪ್ರಾಣಿಗಳ ಉಬ್ಬಿದ ತೆಳು ಚೀಲ /ಪಿತ್ತ ಚೀಲ, ಹೊಟ್ಟೆ
- ಶೇಖರಿಸಿದ ಮಾಂಸ
- ಮಾಂಸದ ಸಾರ ಮತ್ತು ಮಾಂಸದ ರಸಗಳು
- ಕುರಿ / ಮೇಕೆ ಮಾಂಸ - ತಾಜಾ / ಘನೀಕೃತ
- ಸಾಸೇಜ್‌ಗಳು ಮತ್ತು ಕ್ಯಾನ್ಡ್ ಮಾಂಸ
- ಸಮಮಿಶ್ರಿತ ಮಾಂಸದ ತಿಂಡಿ ತಿನಿಸುಗಳು
- ಕುರಿಮರಿ ಮತ್ತು ಕುರಿಯ ಮಾಂಸ – ತಾಜಾ / ಘನೀಕೃತ
- ಮೂಳೆ ಸಹಿತ ಕುರಿ ಮಾಂಸ – ತಾಜಾ / ಘನೀಕೃತ
- ಮೂಳೆ ರಹಿತ ಕುರಿ ಮಾಂಸ – ತಾಜಾ / ಘನೀಕೃತ
- ಪ್ರಾಕೃತಿಕ ಜೇನು

14.10 ಕೃಷಿ ಆಧಾರಿತ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ - ಸೇವಾ ವಲಯಗಳು

- ಸಂಶೋಧನೆ ಮತ್ತು ಅಭಿವೃದ್ಧಿ, ಕೃಷಿ ಶಿಕ್ಷಣ ಮತ್ತು ತರಬೇತಿ
- ಜ್ಞಾನಾಧಾರಿತ ಕೃಷಿ ಪರಿಹಾರಗಳು
- ಎಲೆ / ಅಂಗಾಂಶ ವಿಶ್ಲೇಷಣಾ ಪ್ರಯೋಗಾಲಯಗಳು - ಸಸ್ಯ ಆರೋಗ್ಯ ತಪಾಸಣಾ ಕ್ಲಿನಿಕ್‌ಗಳು
- ಕೃಷಿಗಾರಿಕೆ ವಿಸ್ತರಣಾ ಸೇವೆಗಳು
- ರಫ್ತು ಪರೀಕ್ಷೆಗಾಗಿ ಪ್ರಯೋಗಶಾಲೆಗಳನ್ನು ಗುರುತಿಸುವಿಕೆ ಹಾಗೂ ಉನ್ನತೀಕರಣ

- ಕೃಷಿ ವ್ಯವಹಾರ ಸಲಹಾ ಕೇಂದ್ರ
- ನೀರು, ಮಣ್ಣಿನಲ್ಲಿ ಉಳಿದುಳಿದ ಔಷಧಿಗಳು, ಪಶುವೈದ್ಯಕೀಯ ಔಷಧಗಳು, ಚೋಧಕಗಳು ಹಾಗೂ ಮತ್ತು ವಿಷ ಪದಾರ್ಥಗಳ ಪರೀಕ್ಷೆ
- ಉತ್ಪನ್ನಾಧಾರಿತ ಮಾಹಿತಿ ಸಂಗ್ರಹಣೆ, ಮೂಲಭೂತ ಸೌಕರ್ಯ, ಮಾರುಕಟ್ಟೆ ಮತ್ತು ಸಾಧ್ಯಾಸಾಧ್ಯತೆಗಳ ಸಮೀಕ್ಷೆ
- ಸಾಮರ್ಥ್ಯ ಬಲವರ್ಧನೆ ಮತ್ತು ತರಬೇತಿ
- ಪ್ಯಾಕೇಜಿಂಗ್ ಗುಣಮಟ್ಟ ಮಾನದಂಡಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಗುಣಮಟ್ಟ ನಕಾಶೆ ಗುಣಮಟ್ಟ ನಿರ್ವಹಣೆ, ಗುಣಮಟ್ಟ ದೃಢತೆ ಮತ್ತು ಗುಣ ನಿಯಂತ್ರಣ ಪದ್ಧತಿಗಳಾದ ISO ಸರಣಿ, HACCP, TQM ಇತ್ಯಾದಿಗಳ ಅಭಿವೃದ್ಧಿ
- ಗುಣಮಟ್ಟ ಅಭಿವೃದ್ಧಿ ಮತ್ತು ಪ್ರಮಾಣೀಕರಣ, ಗುಣಮಟ್ಟ ಮಾನದಂಡ ಗುಣಮಟ್ಟ ನಿಯಂತ್ರಣ
- ದೂರಸಂವೇದಿನಿ ಹಾಗೂ ಮಾಹಿತಿ ನಿರ್ವಹಣೆ
- ಮಾನವ ಸಂಪನ್ಮೂಲ ಅಭಿವೃದ್ಧಿ

14.11 ಕೃಷಿ ಆಧಾರಿತ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ – ಇತರ ವಲಯಗಳು

- ನೈಸರ್ಗಿಕ ಸಂಪನ್ಮೂಲ ನಿರ್ವಹಣೆ - ಭೂ ಸಂಪನ್ಮೂಲ ನಿರ್ವಹಣೆ, ಜಲ ನಿರ್ವಹಣೆ, ಮಣ್ಣಿನ ಆರೋಗ್ಯ ಮತ್ತು ಪೋಷಕಾಂಶ ನಿರ್ವಹಣೆ, ತೊಂದರೆ ಇರುವ ಮಣ್ಣಿನ ನಿರ್ವಹಣೆ, ಮಣ್ಣು ಮತ್ತು ನೀರು ಸಂರಕ್ಷಣೆ, ಬೆಳೆ ವೈವಿಧ್ಯತೆ, ಮಳೆ ಆಧಾರಿತ ಮತ್ತು ಒಣಭೂಮಿ ಕೃಷಿ, ಕೃಷಿ ಅರಣ್ಯ ನಿರ್ವಹಣೆ, ಕಳೆ ನಿರ್ವಹಣೆ
- ಕೃಷಿ ಮತ್ತು ಗ್ರಾಮೀಣ ಕ್ಷೇತ್ರಕ್ಕೆ ಆರ್ಥಿಕ ಸಹಾಯ
- ಕೃಷಿ-ಗ್ರಾಮೀಣ ಬೆಳೆ/ಪ್ರಾಣಿ/ಪಶುಸಂಗೋಪನೆಗೆ ವಿಮಾ ಸೌಲಭ್ಯ
- ಖನಿಜ ನೀರು
- ಪ್ಯಾಕೇಜಿಂಗ್ ಕೈಗಾರಿಕೆ ಮತ್ತು ಬ್ರಾಂಡಿಂಗ್
- ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳನ್ನು ಉತ್ತಮಗೊಳಿಸಿದ ಪ್ಯಾಕೇಜಿಂಗ್, ಸಲಕರಣೆಗಳು, ಪ್ಲಾಸ್ಟಿಕ್ಸ್, ರಟ್ಟಿನ ಪೆಟ್ಟಿಗೆಗಳ ಕೈಗಾರಿಕೆಯ ಅಭಿವೃದ್ಧಿ
- ಕೃಷಿ ತಾಂತ್ರಿಕ ಕೈಗಾರಿಕೆಗಳು, ಬೇಸಾಯ ಸಲಕರಣೆಗಳು ಮತ್ತು ಉಪಕರಣೆಗಳಾದ ಉಕ್ಕೆ ಸಲಕರಣೆಗಳು, ಬಿತ್ತನೆಯ ಸಲಕರಣೆಗಳು, ಕಳೆ ತೆಗೆಯುವ ಮತ್ತು ಅಂತರಬೇಸಾಯ ಸಲಕರಣೆಗಳು, ಸಸ್ಯ ಸಂರಕ್ಷಣ ಸಲಕರಣೆಗಳು, ಕೊಯ್ಲು ಸಲಕರಣೆಗಳು, ಸಂಸ್ಕರಣ ಉಪಕರಣಗಳಾದ ಒಕ್ಕಣೆ, ಸ್ವಚ್ಛಗೊಳಿಸುವ ಮತ್ತು ಶ್ರೇಣೀಕರಣ, ಒಣಗಿಸುವುದು, ಹಿಟ್ಟು ಮಾಡುವುದು ಮತ್ತು ಸಾರ ಹಿಂಡುವುದು, ಬೇಸಾಯ ಉತ್ಪನ್ನಗಳ ಸುಧಾರಿತ ಯಂತ್ರಗಳು ಇತ್ಯಾದಿ.
- ಒಣಬೇಸಾಯಕ್ಕೆ ಪ್ರಿಸಿಷನ್ ಯಂತ್ರೋಪಕರಣಗಳು ಮತ್ತು ಗುಡ್ಡಗಾಡುಗಳಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಉತ್ಪತ್ತಿಗಳು
- ಕೃಷಿ ಉತ್ಪಾದನೆಗೆ ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ಉಪ-ಉತ್ಪನ್ನಗಳ ಬಳಕೆ
- ಕೃಷಿ ಯಂತ್ರೋಪಕರಣಗಳ ತಯಾರಿಕೆ ಮತ್ತು ಅದರಲ್ಲಿ ಬರುವ ಲೋಪ ದೋಷಗಳ ನಿರ್ವಹಣೆ

- ಕೃಷಿ ಆಧಾರಿತ ಕೀಟ ನಿವಾರಕ, ಪೀಡೆ ನಿವಾರಕ ಮತ್ತು ಸಮಗ್ರ ಕೀಟಭಾದೆ ನಿರ್ವಹಣೆ
- ಗ್ರಾಮೀಣ ಕೃಷಿ ತಂತ್ರಜ್ಞಾನ ಮತ್ತು ಮೂಲಭೂತ ಸೌಕರ್ಯಗಳು
- ಲಭ್ಯವಿರುವ ಅಪಾರ ಕೃಷಿ ತ್ಯಾಜ್ಯದಿಂದ ಡೀಸೆಂಟ್ರಲೈಸ್ಡ್ ಶಕ್ತಿ ಉತ್ಪಾದನೆ
- ಆಹಾರ ಸಂಸ್ಕರಣಾ ತಂತ್ರಜ್ಞಾನ ಮತ್ತು ಉಪಕರಣೆಗಳ ತಯಾರಿಕೆ
- ಆಹಾರ ಪ್ಯಾಕೇಜಿಂಗ್ ತಂತ್ರಜ್ಞಾನ (ಪ್ಯಾಕೇಜಿಂಗ್ ಪದಾರ್ಥಗಳು, ಗುರುತಿಗಾಗಿ ಹಚ್ಚುವ ವಿವರಗಳ ಚೀಟಿ)
- ಸ್ವಯಂ ಚಾಲನೆ ಮತ್ತು ಮಾಹಿತಿ ಸಂಸ್ಕರಣೆ (ಡಾಟಾ ಪ್ರೋಸೆಸಿಂಗ್)
- ಆಹಾರ ಭದ್ರತೆ, ಗುಣಮಟ್ಟದ ನಿರ್ವಹಣೆ
- ಶೀತಲೀಕರಣ ಮತ್ತು ಕೃಷಿ ಹಾಗೂ ಆಹಾರ ಸಂಸ್ಕರಣಾ ಘಟಕಗಳಿಗೆ ಹವಾನಿಯಂತ್ರಣ
- ತಿಳಿಸುವುದು, ಸಾಗಾಣಿಕೆ ಮತ್ತು ಶೇಖರಣೆ ಸೌಲಭ್ಯಗಳು
- ಹಡಗುಗಳಲ್ಲಿನ ಹಾಗೂ ತೀರಪ್ರದೇಶಗಳಲ್ಲಿ ಮೀನು ಹಿಡಿಯಲು ಬಳಸುವ ಸಲಕರಣೆಗಳು ಮತ್ತು ಮೀನು ಸಂಸ್ಕರಣೆ
- ಜೈವಿಕ ಇಂಧನ
- ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ CSR ನೇತ್ರತ್ವ

## 15 ತಂತ್ರಜ್ಞಾನವನ್ನು ನೀಡುವ ಕೇಂದ್ರ

15.1 ಕರ್ನಾಟಕದಲ್ಲಿ ಕೃಷಿ ಉದ್ದಿಮೆಯನ್ನು ಹಾಗೂ ಕೃಷಿ ವಲಯಗಳಲ್ಲಿ ತಂತ್ರಜ್ಞಾನ ಮತ್ತು ಮಾಹಿತಿಗಳನ್ನು ಸುಗಮಗೊಳಿಸಲು, ಉತ್ಪನ್ನಗಳ ಬಗ್ಗೆ ಮಾಹಿತಿ, ಕೃಷಿ ತಂತ್ರಜ್ಞಾನ ನೀಡುವ ಕೇಂದ್ರವನ್ನು ಪ್ರಾರಂಭಿಸಲಾಗುತ್ತದೆ. ಬಳಕೆದಾರರ ಸಹಾಯಕ ಮತ್ತು ಹೊಸದಾದ ಪದ್ಧತಿಗಳಾದ ಕೃಷಿ ಪೋರ್ಟಲ್, ಅಂತರ್ಜಾಲ ಆಧಾರಿತ ಪದ್ಧತಿಗಳು, ವೈಯ್ಯಕ್ತಿಕ ಮಟ್ಟದಲ್ಲಿ ಪರಸ್ಪರ ವಿಚಾರ ವಿನಿಮಯ, ಕೃಷಿ ಇರುವಲ್ಲಿಯೇ ಸೇವಾಸೌಲಭ್ಯವು, ಕ್ಷೇತ್ರಕ್ಕೇ ಹೋಗುವುದನ್ನು ಹೆಚ್ಚಿನ ಪ್ರಸರಣಕ್ಕಾಗಿ ಅಳವಡಿಸಿಕೊಳ್ಳಲಾಗುವುದು, ಹಬ್ ಮತ್ತು ಸ್ಪೋಕ್ ಮಾದರಿಯನ್ನು ಇತರೆ ವಿಶ್ವವಿದ್ಯಾಲಗಳು ಮತ್ತು ಸಂಶೋಧನಾ ಕೇಂದ್ರಗಳ ಸಹಭಾಗಿತ್ವದಲ್ಲಿ ಅಳವಡಿಸಿಕೊಂಡು ಕೇಂದ್ರ ಕಾರ್ಯ ನಿರ್ವಹಿಸುತ್ತದೆ

15.2 ಜ್ಞಾನ ಸಹಾಯ ಕೋಶ ಕೃಷಿ ಪೋರ್ಟಲ್ ರಚನೆ, ವಿಶ್ವವಿದ್ಯಾಲಯ ಮತ್ತು ರೈತರ ಪರಸ್ಪರ ವಿಚಾರ ವಿನಿಮಯ, ಕಾರ್ಪೊರೇಟ್ ಜ್ಞಾನ ಮತ್ತು ರೈತರು ಆಗಾಗ ಕೇಳುವ ಪ್ರಶ್ನೆಗಳು, ಸಲಹೆ ಮತ್ತು ಪರಿಹಾರ ಸಹಾಯ, ಜ್ಞಾನ ಪ್ರಸರಣೆ, ತಂತ್ರಜ್ಞಾನ,ರಾಜ್ಯ ಹಾಗೂ ಕೇಂದ್ರಗಳ ಯೋಜನೆ ಮತ್ತು ಸೇವೆಗಳು, ಮುಖ್ಯ ಘಟನೆಗಳು, ವಿದ್ಯುನ್ಮಾನ ಪ್ರಸರಣ, ಉತ್ತಮ ಹಾಗೂ ನವೀನ ಆವಿಷ್ಕಾರಗಳು, ಹವಾಮಾನದ ವಿಚಾರಗಳನ್ನು ಕಾಲಕಾಲಕ್ಕೆ ತಿಳಿಸುವುದು, ಮತ್ತು ಸಲಹೆ ಮತ್ತು ರೋಗ ಪರೀಕ್ಷಣ ಸೇವೆಗಳು, ಲಿಂಗ ನಿರ್ಧರಿತ ತಾಂತ್ರಿಕತೆಯ ಅಭಿವೃದ್ಧಿ, ರೈತರ ನಡುವೆ ಸುಧಾರಿತ ಕೃಷಿ ತಾಂತ್ರಿಕತೆಯ ಬಗ್ಗೆ ಅರಿವು ಮೂಡಿಸುವುದು,ಕೃಷಿಯಲ್ಲಿ ಮಾಹಿತಿ ತಂತ್ರಜ್ಞಾನವನ್ನು ಪ್ರೋತ್ಸಾಹಿಸುವುದು, ಉನ್ನತ ತಂತ್ರಜ್ಞಾನದ ಕೃಷಿಗೆ ಮಾರ್ಗದರ್ಶನ ಮತ್ತು ನಿಖರ ಬೇಸಾಯ, ಕೃಷಿ ತಂತ್ರಜ್ಞಾನವನ್ನು ಹೆಚ್ಚು ಉತ್ಪಾದನೆಗಾಗಿ ಪ್ರಸರಿಸುವುದು, ರೈತ ಕೃಷಿ ಶಾಲೆಗಳು, ಸ್ಥಿರವಾಗಿರುವಂತಹ ತಂತ್ರಜ್ಞಾನವನ್ನು ಶುದ್ಧ ನೀರಿಗಾಗಿ ಅಭಿವೃದ್ಧಿಪಡಿಸುವುದು, ಚೌಳು ನೀರು, ಜಲಕೃಷಿ ಮತ್ತು ಶೀತಲನೀರಿನಲ್ಲಿ ಮತ್ಸ್ಯಗಾರಿಕೆ, ಆರೋಗ್ಯ ವಿಜ್ಞಾನ ಮತ್ತು ಆರೋಗ್ಯ ರಕ್ಷಣೆ ಹಾಗೂ ಮೀನುಗಾರಿಕೆಗಾಗಿ ಗುಣ ನಿಯಂತ್ರಣ ಪದ್ಧತಿಗಳು, ಮೀನುಗಾರಿಕೆಗಾಗಿ ಬಯೋ ಇನ್‌ಫರ್ಮಾಟಿಕ್ಸ್

ಮತ್ತು ಮಾಹಿತಿ ತಂತ್ರಜ್ಞಾನ ಆಧಾರಿತ ಪರಿಹಾರಗಳು, ಜಲಕೃಷಿ ಮಾಡುವ ಕೊಳಗಳಲ್ಲಿನ ಸೋರಿಕೆ ನಿಯಂತ್ರಿಸಲು ತಂತ್ರಜ್ಞಾನದ ಅಭಿವೃದ್ಧಿ, ಪಾಚಿ ಮತ್ತು ಸಡಿಲ ಮಣ್ಣಿನಲ್ಲಿ ಮೀನು ಕೃಷಿ ನಿರ್ಮಾಣಕ್ಕಾಗಿ ತಂತ್ರಜ್ಞಾನದ ಅಭಿವೃದ್ಧಿ, ಪಶುಸಂಗೋಪನೆ ಮತ್ತು ಕೋಳಿ ಕೃಷಿ ವಲಯದಲ್ಲಿ ಉತ್ಪತ್ತಿ ಹೆಚ್ಚಿಸಲು ಸೂಚಿಸುವ ಕುರಿತು ಮಾಹಿತಿ, ನಿರ್ಧರಿತ ಮತ್ತು ಸಂಭವನೀಯ ಉತ್ಪತ್ತಿಯಲ್ಲಿರುವ ಅಂತರವನ್ನು ಕಡಿಮೆಮಾಡುವುದು, ಸಂತಾನೋತ್ಪತ್ತಿ ಸಾಮರ್ಥ್ಯ ಮತ್ತು ರೋಗ ನಿಯಂತ್ರಣೆಯನ್ನು ಅಭಿವೃದ್ಧಿಪಡಿಸುವುದು, ಮೌಲ್ಯವರ್ಧನೆಗೆ ಸುಧಾರಿತ ತಂತ್ರಜ್ಞಾನದ ಅಭಿವೃದ್ಧಿ,ಪಶುಸಂಗೋಪನೆ, ಕೋಳಿ ಉತ್ಪನ್ನಗಳು ಮತ್ತು ಆಹಾರ ಸಂಸ್ಕರಣ ತಂತ್ರಜ್ಞಾನಗಳು ಇತ್ಯಾದಿಗಳ ಸಂಗ್ರಹಣಾ ಗುಣಮಟ್ಟದ ಸುಧಾರಣೆಗೆ ಬೆಂಬಲ ನೀಡುತ್ತದೆ.

## 16 ಮಾರುಕಟ್ಟೆ ತಿಳಿವು / ಜ್ಞಾನ ಕೋಶ

16.1 ಉತ್ಪನ್ನ ಸರಣಿ ಮತ್ತು ಕ್ಷೇತ್ರಗಳ ದೇಶೀ ಮತ್ತು ಜಾಗತಿಕ ಪ್ರಕ್ರಿಯೆಗಳ ಮಾಹಿತಿಯ ಡೇಟಾ ಬ್ಯಾಂಕ್ ಹೊಂದಿರುವ ಸಮಗ್ರ ಮಾರುಕಟ್ಟೆ ತಿಳಿವಿನ ಕೋಶದ ಸ್ಥಾಪನೆಯನ್ನು ಕಾರ್ಯನೀತಿಯು ಬಯಸುತ್ತದೆ. ಈ ಕೋಶವು ಮಾರುಕಟ್ಟೆ ಆಗಮನಗಳ ಬಗ್ಗೆ, ಪ್ರಮುಖ ಉದ್ದಿಮೆದಾರರ ವಿವರಸಂಗ್ರಹ, ಬೆಲೆ ವರ್ತನೆಗಳು, ಮಾರುಕಟ್ಟೆಯ ವಿಶ್ಲೇಷಣೆಗಳು, ಬೆಳೆ ವಿಮೆ, ಜಾಗತಿಕ ಮತ್ತು ನಾಡಿನ ಉತ್ಪತ್ತಿ ಪ್ರದೇಶಗಳಿಗೆ ಸಂಬಂಧಿಸಿದ ಕೃಷಿ ಉತ್ಪತ್ತಿ,  ಸರಬರಾಜು ಮುನ್ಸೂಚನೆ, ಬೆಲೆ ಮುನ್ಸೂಚನೆ, ಶೇಖರಣೆ ಮತ್ತು ಮಾರುಕಟ್ಟೆಯ, ಉತ್ಪನ್ನ ಪರಿಚಯ, ಒಪ್ಪಂದ ಬೇಸಾಯ, ವ್ಯವಸ್ಥಿತ ಚಿಲ್ಲರೆ ವ್ಯಾಪಾರ, ಸರಬರಾಜು ಸರಣಿ ಒದಗಿಸುವವರು ಇತ್ಯಾದಿಗಳ ಮಾಹಿತಿ ನೀಡುತ್ತದೆ. ಮಾರುಕಟ್ಟೆ ಜ್ಞಾನ ಕೋಶ, ಸಂದಿಗ್ಧ ಮಾಹಿತಿ ಮತ್ತು ಸಂಶೋಧನಾ ಸಹಾಯವನ್ನು ಕೃಷಿ ಶಿಕ್ಷಣ ಕೇಂದ್ರಗಳು ಮತ್ತು ಉತ್ಕೃಷ್ಟ ಕೃಷಿ ಕೇಂದ್ರಗಳಿಂದ ಪಡೆಯಬಹುದು.

## 17 ವಿಶೇಷ ಕೃಷಿ ಪ್ರವಾಸೋದ್ಯಮ ಬಂಡವಾಳ ವಲಯಗಳು

17.1 ವಿಶೇಷಿತ ಪ್ರವಾಸೋದ್ಯಮ ವಲಯಗಳು ಕೃಷಿ ಪ್ರವಾಸೋದ್ಯಮವನ್ನು ರಾಜ್ಯದ ಗ್ರಾಮೀಣ ಸಮುದಾಯಕ್ಕೆ ಉದ್ಯೋಗ ಆರ್ಥಿಕ ಸ್ಥಿರತೆ ಕೊಡುವ ಉದ್ದೇಶ ಹೊಂದಿವೆ. ಕೃಷಿ ಪ್ರವಾಸೋದ್ಯಮವೆಂದರೆ, ಕಾರ್ಯಾಚರಣೆಯಲ್ಲಿರುವ ಕೃಷಿಪ್ರದೇಶ ಅಥವಾ ಇನ್ನಾವುದೇ ಕೃಷಿ, ತೋಟಗಾರಿಕೆ, ಅಥವಾ ಕೃಷಿ ವಾಣಿಜ್ಯ ಉದ್ದೇಶಿತ ಕಾರ್ಯಾಚರಣೆಗಳನ್ನು    ಮಾಹಿತಿ, ಮನರಂಜನೆ, ಶಿಕ್ಷಣಕ್ಕಾಗಿ ಅಥವಾ ಕೃಷಿ ಚಟುವಟಿಕೆ ಅಥವಾ ಕಾರ್ಯಾಚರಣೆಗಳಲ್ಲಿ ಚುರುಕಾಗಿ ತೊಡಗಿಸಿಕೊಳ್ಳಲು ಭೇಟಿ ನೀಡುವ ರಜೆಯ ಕಲ್ಪನೆ. ಕ್ಷೇತ್ರದಲ್ಲಿಯೇ ಮಾರಾಟ ಮಾಡುವ ಕೃಷಿ ಉತ್ಪನ್ನಗಳ ಸಂಸ್ಕರಿತ ಆಹಾರ, ಸಾವಯವ ಆಹಾರ, ನಗರ ಪ್ರದೇಶದ ಪ್ರವಾಸಿಗರನ್ನು ಆಕರ್ಷಿಸಬಹುದು. ಹಳ್ಳಿಗಳು ಮನರಂಜನೆಯ ಅವಕಾಶಗಳನ್ನು ಎಲ್ಲಾ ವಯೋಮಿತಿಯವರಿಗೆ ಅಂದರೆ ಮಕ್ಕಳು, ಮಧ್ಯವಯಸ್ಕರು ಮತ್ತು ಹಿರಿಯರು, ಗಂಡು, ಹೆಣ್ಣು, ಒಟ್ಟಾರೆಯಾಗಿ ಹೇಳಬೇಕೆಂದರೆ ಇಡೀ ಕುಟುಂಬಕ್ಕೆ ಭರಿಸಬಹುದಾದ ಬೆಲೆಯಲ್ಲಿ ಒದಗಿಸುತ್ತವೆ.  ಗ್ರಾಮೀಣ ಆಟಗಳು, ಹಬ್ಬಗಳು, ಆಹಾರ, ಬಟ್ಟೆ ಮತ್ತು ಅಲ್ಲಿನ ಪ್ರಕೃತಿ ವಿವಿಧ ಮನರಂಜನೆಯನ್ನು ಇಡೀ ಕುಟುಂಬಕ್ಕೆ ಒದಗಿಸುತ್ತವೆ. ಗುರುತಿಸಿದ ಈ ವಲಯಗಳ ಚಟುವಟಿಕೆಯ ಪ್ರಸ್ತುತ ಶ್ರೇಣಿಯನ್ನು ರೈತರು ಮತ್ತು ಗ್ರಾಮೀಣ ಜನತೆ ನಗರ ಪ್ರದೇಶದ ಪ್ರವಾಸಿಗರನ್ನು ಆಕರ್ಷಿಸಲು ಸೇವೆ ಮತ್ತು ಸೌಕರ್ಯಗಳನ್ನು ಒದಗಿಸುತ್ತಾರೆ. ಆ ಮೂಲಕ ನಗರದ ಜನರಿಗೆ ತಮ್ಮ ಬೇರುಗಳಿಗೆ ಮರಳಲು ಒಂದು ಅವಕಾಶವನ್ನು ಕೊಡುತ್ತಾರೆ. ಈ ವಲಯಗಳು ಕೃಷಿ ಪ್ರವಾಸೋದ್ಯಮದ ಉತ್ಪನ್ನಗಳಾದ ಕೃಷಿ ಕ್ಷೇತ್ರದಲ್ಲಿ ವಾಸ, ಪ್ರಾಣಿಗಳಿಗೆ ಆಹಾರ ಕೊಡುವುದು, ಹಣ್ಣು / ತರಕಾರಿಗಳನ್ನು ಕೀಳುವುದು, ಕ್ಯಾಂಪ್ ಹಾಕುವುದು, ಗ್ರಾಮೀಣ ಆಟಗಳು, ವಿಷಯಾಧಾರಿತ ವಿಶೇಷ ಘಟನೆಗಳು ಮತ್ತು ಹಬ್ಬಗಳು, ಹಳ್ಳಿ ಜಾತ್ರೆಗಳು, ರೈತರ ಮಾರುಕಟ್ಟೆಗಳು, ರಸ್ತೆ ಬದಿ ಉತ್ಪನ್ನಗಳ ಮಳಿಗೆಗಳು, ಕೃಷಿ ಉತ್ಪನ್ನಗಳ ಖರೀದಿ, ಅಡುಗೆ ವಸ್ತುಗಳ ಖರೀದಿ, ಹಾಸಿಗೆ ಮತ್ತು

ಫಲಹಾರ, ಎತ್ತಿನಗಾಡಿ ಸವಾರಿ, ದೋಣಿ ವಿಹಾರ, ಮೀನು ಹಿಡಿಯುವುದು, ಮೂಲಿಕೆ ಅರಸುವುದು ಮತ್ತು ಆರೋಗ್ಯ (ಆಯುರ್ವೇದ ಮತ್ತು ನೈಸರ್ಗಿಕ ಉಪಚಾರ - ನ್ಯಾಚುರೋಪತಿ / ಭಾರತದ ಸಾಂಪ್ರದಾಯಿಕ ಔಷಧಗಳು) ಪ್ರವಾಸ, ಇವುಗಳನ್ನು ಒದಗಿಸುತ್ತದೆ. ಕೃಷಿ ಪ್ರವಾಸೋದ್ಯಮದಲ್ಲಿನ ವಿಷಯಗಳು ಅಗಾಧವಾಗಿದ್ದು ಕೃಷಿ ನಿರ್ವಾಹಕರು ತಮ್ಮದೇ ಪರಿಕಲ್ಪನೆಗಳನ್ನು ಒದಗಿಸಬಹುದು.

**18 ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವುದು**

18.1 ಕರ್ನಾಟಕ ರಾಜ್ಯವು ಬಂಡವಾಳ ಹೂಡಿಕೆಯ ಘಟನೆಗಳಾದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ (GIM), ಜೈವಿಕ ತಂತ್ರಜ್ಞಾನ ಸಮಾವೇಶ ಇತ್ಯಾದಿಯನ್ನು ರಾಜ್ಯದಲ್ಲಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ನಿಯತವಾಗಿ ಆಯೋಜಿಸುತ್ತಿದೆ. ಇದೇ ರೀತಿಯಲ್ಲಿ ಬಹು ಜಾಗತಿಕ ಕೃಷಿ ವಾಣಿಜ್ಯ ಬಂಡವಾಳ ಹೂಡಿಕೆದಾರರ ಸಮಾವೇಶ (GABIM) ರೋಡ್ ಶೋಗಳು, ವ್ಯಾಪಾರದಿಂದ ವ್ಯಾಪಾರಕ್ಕೆ ಮೇಳಗಳು ಇತ್ಯಾದಿಯನ್ನು ಆಯೋಜಿಸಲಾಗುತ್ತದೆ. ಅಲ್ಲದೆ ಈ ಕಾರ್ಯನೀತಿ, ಆಧುನಿಕತೆ ಮತ್ತು ತಾಂತ್ರಿಕತೆ ಹೊಂದಿರುವ, ಅತ್ಯುನ್ನತ ಪದ್ಧತಿಗಳ ಸಂಸ್ಕರಣ ತಾಂತ್ರಿಕತೆ, ಸಂಭವನೀಯ ರಫ್ತು ಮಾರುಕಟ್ಟೆ ಇತ್ಯಾದಿಗಳನ್ನು ಹೊಂದಿರುವ ರಾಷ್ಟ್ರಗಳ ಜೊತೆ ಸಹಭಾಗಿತ್ವವನ್ನು ಇಂಥ ಜಾಗತಿಕ ಮೇಳಗಳು ಸಾಧ್ಯವಾಗಿಸುತ್ತವೆ. ತಂತ್ರಜ್ಞಾನದ ಲಭ್ಯತೆ ಮತ್ತು ಆಧುನಿಕತೆ, ಉತ್ತಮ ಅಭ್ಯಾಸಗಳು, ಮಾರ್ಕೆಟಿಂಗ್ ಸಹಾಯ ಮತ್ತು ಇತರ ಉಪಾಯಗಳನ್ನು ಕೃಷಿ ವಾಣಿಜ್ಯ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಬಂಡವಾಳ ಹರಿದುಬರುವುದನ್ನು ಸುಲಭಮಾಡುತ್ತದೆ. ಈ ಕಾರ್ಯನೀತಿಯು ಕರ್ನಾಟಕ ರಾಜ್ಯ ಸರ್ಕಾರ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮುಂದಿರುವ ಸಂಸ್ಥೆಗಳು / ವಿಶ್ವವಿದ್ಯಾಲಯಗಳು / ಆರ್ಥಿಕ ಸಂಸ್ಥೆಗಳು ಇನ್ನಿತರ ಏಜೆನ್ಸಿಗಳ ಜೊತೆಯಲ್ಲಿ ಒಪ್ಪಂದದ ದಸ್ತಾವೇಜನ್ನು ಮಾಡಿಕೊಳ್ಳಲು ಅನುವುಮಾಡಿಕೊಡುತ್ತದೆ. ಈ ದಸ್ತಾವೇಜುಗಳು ಬಂಡವಾಳವನ್ನು ಸಹಭಾಗಿತ್ವ ಮಾದರಿಯಲ್ಲಿ ವಿವಿಧ ಭಾರತೀಯ ಮತ್ತು ಅಂತರ್ರಾಷ್ಟ್ರೀಯ ಸಂಸ್ಥೆಗಳಿಂದ ನಿಶ್ಚಯವಾಗಿ ಬರುವಂತೆ ಮಾಡುತ್ತವೆ. ನೀತಿಯಲ್ಲಿನ ದೃಷ್ಟಿಕೋನವನ್ನು ಸಾಕಾರಗೊಳಿಸಲು ಮತ್ತು ಬಂಡವಾಳವನ್ನು ಆಕರ್ಷಿಸಲು ವಿವಿಧ ಪ್ರೋತ್ಸಾಹಗಳು ಮತ್ತು ತಿದ್ದುಪಡಿಗಳನ್ನು ನಿಬಂಧನೆಯಲ್ಲಿ ಅನುಮೋದಿಸಲಾಗಿದೆ.

**19 ಆರ್ಥಿಕ ಪ್ರೋತ್ಸಾಹಗಳು ಮತ್ತು ಸೌಲಭ್ಯಗಳು**

**19.1 ರೈತರಿಗೆ ವಿಶೇಷ ಪ್ರೋತ್ಸಾಹಗಳು**

- ಯಾವ ರೈತರು ತಮ್ಮ ಭೂಮಿಯನ್ನು ಕೃಷಿ ಆಧಾರಿತ ಕಾರ್ಖಾನೆಗಾಗಿ ಕಳೆದುಕೊಳ್ಳುತ್ತಾರೋ ಅಂಥವರು ಕೃಷಿಗೆ ಸಂಬಂಧಿತ ಚಟುವಟಿಕೆಗಳಗಾಗಿ ಜಾಗವನ್ನು ಖರೀದಿಸಿದ್ದಲ್ಲಿ ನೋಂದಣಿ ಖರ್ಚನ್ನು ಮನ್ನ ಮಾಡಲಾಗುವುದು.
- ತಮ್ಮ ಜಾಗವನ್ನು ಯಾವುದೇ ಶುಲ್ಕವಿಲ್ಲದೆ ರೈತರು ಕೃಷಿವಾಣಿಜ್ಯದ ಉದ್ದೇಶಕ್ಕಾಗಿ ಸ್ವಘೋಷಣೆಯಿಂದ ಬದಲಾಯಿಸಬಹುದು. ಘೋಷಿತ ಚಟುವಟಿಕೆ ಒಂದು ವರ್ಷದಲ್ಲಿ ಕಾರ್ಯರೂಪಕ್ಕೆ ಬರದಿದ್ದಲ್ಲಿ, ಬದಲಾವಣೆಯನ್ನು ರದ್ದುಗೊಳಿಸಲಾಗುವುದು.
- ಪ್ರವರ್ಧನೆಯನ್ನು ಬಲಪಡಿಸಲು ಸಣ್ಣ ಹಿಡುವಳಿದಾರ ರೈತರಿಗೆ, ಉತ್ತಮ ಇಳುವರಿ ಮತ್ತು ಹೆಚ್ಚು ಬೆಲೆ ಸಾಧಿಸುವ ಸಲುವಾಗಿ ಕೃಷಿ ಯಾಂತ್ರಿಕೃತೆಯನ್ನು ಅಳವಡಿಸಲು ಅನುಕೂಲ ಮಾಡಿಕೊಡಲಾಗುವುದು.

19.2 ಏ.ಪಿ.ಎಂ.ಸಿ (ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿ) ಕಾಯಿದೆಗೆ ತಿದ್ದುಪಡಿ

19.2.1 ಕಡೆಯ ಮಾರುಕಟ್ಟೆಗಳಲ್ಲಿನ ಆರ್ಥಿಕ ವಾಣಿಜ್ಯದ ಬೆಂಬಲವನ್ನು ಪ್ರವರ್ಧಿಸಿ ರೈತರಿಗೆ ಮತ್ತಿತರ ಸ್ಟೇಕ್ ಹೋಲ್ಡರ್‌ಗಳಿಗೆ ಅನುಕೂಲವಾಗಲೆಂದು ಏ.ಪಿ.ಎಂ.ಸಿ ಕಾಯಿದೆಯಲ್ಲಿ ಕೆಲಸವನ್ನು ನಿರ್ಣಯಿಸಬೇಕಾಗುತ್ತದೆ. ಸಾರಂಶವನ್ನು ಕೆಳಕಂಡಂತಿವೆ:

- ಸರಕು ವಹಿವಾಟಿಗೆ ಯಾವುದೇ ರೀತಿಯ ಏ.ಪಿ.ಎಂ.ಸಿ ಶುಲ್ಕವನ್ನು ಕಟ್ಟಬೇಕಾಗಿಲ್ಲ. ಆದರೆ ಆ ಕುರಿತು ಮಾಹಿತಿಯನ್ನು ಕೃಷಿ ಮಾರ್ಕೆಟಿಂಗ್ ವಿಭಾಗಕ್ಕೆ ತಿಳಿಸತಕ್ಕದ್ದು.
- ಸರಕು ವಹಿವಾಟಿಗೆ ಯಾವುದೇ ರೀತಿಯ ಏ.ಪಿ.ಎಂ.ಸಿ ಶುಲ್ಕವನ್ನು ಕಟ್ಟಬೇಕಾಗಿಲ್ಲ. ಆದರೆ ಆ ಕುರಿತು ಮಾಹಿತಿಯನ್ನು ಕೃಷಿ ಮಾರ್ಕೆಟಿಂಗ್ ವಿಭಾಗಕ್ಕೆ ತಿಳಿಸತಕ್ಕದ್ದು.
- ನೇರ ಕ್ರಯಕ್ಕೆ ಬೇಕಾದ ಠೇವಣಿ ಹಣವನ್ನು ರೂಪಾಯಿ ಐವತ್ತು ಲಕ್ಷದಿಂದ ರೂಪಾಯಿ ಐದು ಲಕ್ಷಕ್ಕೆ ಇಳಿಸಲಾಗುವುದು.
- ಬೆಂಗಳೂರು ನಗರದ 25 ಕಿಲೋಮೀಟರ್ ಪರಿಧಿಯನ್ನು ಹೊರತುಪಡಿಸಿ ವಲಯ ನಿಯಮಗಳನ್ನು ತೆಗೆದು ಖಾಸಗಿ ವಲಯದಲ್ಲಿ ಮಾರುಕಟ್ಟೆ ನಿರ್ಮಿಸಲು ಯಾವ ನಿರ್ಬಂಧವನ್ನು ಹೇರುವುದಿಲ್ಲ.
- ಹತ್ತು ವರ್ಷಗಳ ಅವಧಿಗೆ ಸಂಸ್ಕರಣೆ ಮತ್ತು ರಫ್ತಿಗೆ ಮಾರುಕಟ್ಟೆಯ ಶುಲ್ಕ ಇರುವುದಿಲ್ಲ.
- ಕೃಷಿ ಉತ್ಪಾದನೆ ಮಾರುಕಟ್ಟೆ ಭೂಮಿಯನ್ನು ಕೃಷಿ ಸೇವಾ ವಲಯವೆಂದು ವರ್ಗೀಕರಿಸಲಾಗುವುದು.
- ಖಾಸಗಿ ಮಾರುಕಟ್ಟೆಗಳನ್ನೂ ಕಡಿಮೆ ಬೆಂಬಲ ಬೆಲೆಯಲ್ಲಿ ಕೊಳ್ಳುವ ಸ್ಥಳಗಳಾಗಿ ಪರಿಗಣಿಸಲಾಗುವುದು.
- ಅಂತರ್ಜಾಲ ವಾಣಿಜ್ಯಕ್ಕೆ (ಈ-ಟ್ರೇಡಿಂಗ್) ಎಲ್ಲಾ ಮಾರುಕಟ್ಟೆಗಳಲ್ಲಿ ಅವಕಾಶ ಕಲ್ಪಿಸಲಾಗುವುದು.

## 20 ಕೃಷಿ ಆಧಾರಿತ ಕಾರ್ಖಾನೆಗಳಿಗೆ ಕೃಷಿಯ ಮೂಲಭೂತ ಸೌಕರ್ಯಗಳಿಗಾಗಿ ಭೂಮಿ

20.1 ಕರ್ನಾಟಕ ರಾಜ್ಯ ಸರ್ಕಾರ ಭೂಮಿ ಬ್ಯಾಂಕ್‌ಗಳನ್ನು ಪ್ರಗತಿಶೀಲ ಹೆಜ್ಜೆಗಳನ್ನು, ಬೆಂಬಲವಾಗಿರುವ ಕೈಗಾರಿಕೀಕರಣದ ಅಭಿವೃದ್ಧಿಯ ಉದ್ದೇಶಕ್ಕಾಗಿ ಗುರುತಿಸುವಲ್ಲಿ ಯಶಸ್ವಿಯಾಗಿದೆ. ಹೂಡಿಕೆದಾರರನ್ನು ಪ್ರೋತ್ಸಹಿಸಿ ಅವರ ಪ್ರದೇಶಗಳನ್ನು ಮತ್ತು ಮೂಲಭೂತ ಸೌಕರ್ಯಗಳನ್ನು ಈಗಾಗಲೆ ಗುರುತಿಸಲ್ಪಟ್ಟಿರುವ ಕೈಗಾರಿಕಾ ಪಾರ್ಕುಗಳಲ್ಲಿ, ವಿಶೇಷ ಆರ್ಥಿಕ ವಲಯಗಳಲ್ಲಿ ಅಥವಾ ಕೈಗಾರಿಕಾ ಪ್ರದೇಶಗಳಲ್ಲಿ ಗುರುತಿಸಿಕೊಳ್ಳಲು ಅವಕಾಶವನ್ನು ಕೊಡುವುದರ ಮೂಲಕ ಸಮೂಹ ಸೌಕರ್ಯಗಳನ್ನು ಒದಗಿಸುತ್ತಿದೆ.

20.2 ಪರ್ಯಾಯವಾಗಿ ಹೂಡಿಕೆದಾರರು ಪಾರದರ್ಶಕತೆಯ ಆಧಾರದ ಮೇಲೆ ಒಣ ಭೂಮಿಯನ್ನು ಪಡೆದುಕೊಂಡು ಕಾನೂನಿನ ಅನುಸಾರ ಸ್ಥಾಪಿಸಿದ ಪರಿಸರಕ್ಕೆ ಪೂರಕವಾದ ಮಾರ್ಗದರ್ಶಕಗಳನ್ನು ಮತ್ತು ಪುನರ್ವಸತಿ ಯೋಜನೆಗಳನ್ನು ಚಾಚೂ ತಪ್ಪದೆ ಪಾಲಿಸಿದಲ್ಲಿ ತಮ್ಮ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು. ಮುಂದುವರೆದಂತೆ ಭೂಮಾಲಿಕರನ್ನು ಯೋಜನೆಯ ಪಾಲುದಾರರನ್ನಾಗಿ ಪರಿಗಣಿಸಿ ಶೇರು ಬಂಡವಾಳ ಹೊಂದಲು / ಹೂಡಿಕೆಗೆ ಅವಕಾಶ ಕಲ್ಪಿಸಬಹುದು. ಕೃಷಿ ವಲಯ ಯತೇಚ್ಛವಾಗಿ ಅವಕಾಶಗಳನ್ನು ಕೊಡುವುದರಿಂದ ಬೇರಾವುದೇ ಹೊಸದಾದ ವ್ಯಾವಹಾರಿಕ ಮಾದರಿಗಳನ್ನು ರೂಪಿಸಿ ಪಾಲುದಾರಿಕೆ ಮಾಡಬಹುದು ಆದರೆ ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನಂತರ ಅದನ್ನು ಅನುಸರಿಸಲಾಗುವುದು.

20.3 ಇದಲ್ಲದೆ, ಕೃಷಿ ಆಧಾರಿತ ಕೈಗಾರಿಕೆಗಳಿಗೆ ಶೇಕಡ 25ರಷ್ಟು ತಮ್ಮ ಜಾಗವನ್ನು ತಮಗೆ ಬೇಕಾದ ಕಚ್ಚಾ ವಸ್ತುಗಳ ಉತ್ಪತ್ತಿಗಾಗಿ ಓಪನ್ ಫಾರ್ಮಿಂಗ್‌ಗೆ ಬಳಸಿಕೊಳ್ಳಲು ಅನುಮತಿ ನೀಡಲಾಗುವುದು. ಅಷ್ಟೆ ಅಲ್ಲದೆ ಭೂ ಭಾಗದ

ಶೇಕಡ ನೂರರಷ್ಟನ್ನು (ಯೂನಿಟ್‌ಗೆ ಹಿನ್ನೆಡೆಯಾದಾಗ ಬದಲಾವಣೆಗೆ ಸ್ಥಳ ಕಾಯ್ದಿರಿಸಿದ ನಂತರ) ಪುಷ್ಪಕೃಷಿ, ತೋಟಗಾರಿಕೆ, ಬೀಜ ಅಭಿವೃದ್ಧಿಗೆ, ಪಶು ಸಂಗೋಪನೆಗೆ, ಮೀನುಸಾಕಣಿಕೆ, ಜಲಕೃಷಿ, ತರಕಾರಿ, ಹಣ್ಣು, ಅಣಬೆಯನ್ನು ಕೃತಕ ಪರಿಸರದಲ್ಲಿ ಬೆಳೆಯಬಹುದು ಮತ್ತು ಕೃಷಿ ಹಾಗೂ ಕೃಷಿವಲಯಗಳ ಸೇವೆಗಳನ್ನು ಒದಗಿಸಬಹುದು.

20.4 ಕೃಷಿ ಭೂಮಿಯನ್ನೂ ಅನ್ಯಮಾರ್ಗವಿಲ್ಲದೆ ಯಾವುದಾದರೊಂದು ಕೃಷಿಗೆ ಸಂಬಂಧಿಸಿದ ಮೂಲಭೂತ ಸೌಕರ್ಯ ಮಾಡುವುದಕ್ಕಾಗಿ ಅಥವಾ ಕೃಷಿ ಆಧಾರಿತ ಉತ್ಪನ್ನಗಳ ತಯಾರಿಕೆಯ ಘಟಕ ನಿರ್ಮಿಸುವುದಕ್ಕಾಗಿ ಪಡೆಯಬೇಕಾದಲ್ಲಿ ಎಲ್ಲಾ ವಿಧಿಗಳಿಂದಲೂ ಅದರ ಸೂಕ್ತತೆಯನ್ನು ಪರಿಗಣಿಸಿ ಅದರಿಂದ ಕೃಷಿ ಚಟುವಟಿಕೆಗಳಿಗೆ ಉಂಟಾಗಬಹುದಾದ ಸುಸ್ಪಷ್ಟ ಲಾಭಗಳನ್ನು ಅರಿತು, ಬಡತನದ ರೇಖೆಗಿಂತ ಕೆಳಮಟ್ಟದಲ್ಲಿರುವ ಕುಟುಂಬಗಳಿಗೆ ಉದ್ಯೋಗಾವಕಾಶಗಳಿವೆ ಎಂದು ಗಮನಿಸಿ, ಸುಧಾರಿತ ಕೃಷಿ ತಂತ್ರಜ್ಞಾನ ಮತ್ತು ಸಂಸ್ಕರಣ ಕೌಶಲ್ಯವನ್ನು ಸ್ಥಳೀಯರಿಗೆ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿ, ಕಚ್ಚಾವಸ್ತುಗಳನ್ನು ಸ್ಥಳೀಯರಿಂದಲೇ ಕೊಂಡುಕೊಳ್ಳಬಹುದಾದ ಸಾಧ್ಯತೆಗಳೆಡೆ ಗಮನ ಹರಿಸಿ ಉದ್ದೇಶಿತ ಯೋಜನೆಗೆ ಅನುಮತಿ ನೀಡಲಾಗುವುದು. ಅಕಸ್ಮಾತ್ತಾಗಿ ಉದ್ದೇಶಿತ ಯೋಜನೆಗೆ ಅನುಮತಿಯನ್ನು ಪಡೆದುಕೊಂಡ ಮೇಲೆ ಅದರಿಂದ ಒದಗಬಹುದಾದ ಆಗುಹೋಗುಗಳನ್ನು ಮತ್ತು ಸ್ಥಳೀಯರ ಒಪ್ಪಿಗೆ ಪಡೆದುಕೊಂಡ ನಂತರದಲ್ಲಿ ಹೂಡಿಕೆದಾರರು, ಪಾರದರ್ಶಕ ನೀತಿಯಿಂದ ಕೃಷಿ ಭೂಮಿಯನ್ನು ಯೋಜಿತ ಕೈಗಾರಿಕೆಗಾಗಿ ಕಾನೂನು ಸಿದ್ಧಪಡಿಸಿದ ಕಾಯ್ದೆಯನ್ನು, ಪರಿಸರಕ್ಕೆ ಪೂರಕವಾದ ಮಾರ್ಗಸೂಚಿಗಳನ್ನು ಮತ್ತು ಪುನರ್ವಸತಿ ಯೋಜನೆಗಳನ್ನು ಪಾಲಿಸಬೇಕಾಗುತ್ತದೆ. ಹೂಡಿಕೆದಾರರು ಭೂಮಾಲಿಕರನ್ನು ಯೋಜನೆಯ ಪಾಲುದಾರರನ್ನಾಗಿ ಪರಿಗಣಿಸಿ ಶೇರು ಬಂಡವಾಳ ಹೂಡಿಕೆಗೆ/ಕಂದಾಯದಲ್ಲಿ ಪಾಲು/ವ್ಯಾಪಾರದಲ್ಲಿ ಸಹಭಾಗಿತ್ವ ಹೊಂದಲು ಅವಕಾಶ ಕಲ್ಪಿಸಬಹುದು. ಕೃಷಿ ವಲಯ ಯತೇಚ್ಚವಾಗಿ ಅವಕಾಶಗಳನ್ನು ಕೊಡುವುದರಿಂದ ಬೇರಾವುದೇ ವಿನೂತನ ವ್ಯವಹಾರಿಕ ಮಾದರಿಗಳನ್ನು ರೂಪಿಸಿ ಪಾಲುದಾರಿಕೆ ಹೊಂದಬಹುದು ಆದರೆ ಅದನ್ನು ಸೂಕ್ಷಮವಾಗಿ ಪರೀಕ್ಷಿಸಿ ನಂತರ ಅದನ್ನು ಅನುಸರಿಸಲಾಗುವುದು.

20.5 ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕೃಷಿ ಸಂಬಂಧಿತ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು, ಖಾಸಗಿ ಕೃಷಿ ಭೂಮಿಯನ್ನು ಕೃಷಿ ಸಂಬಂಧಿತ ಚಟುವಟಿಕೆಗಳಿಗಾಗಿ ದೀರ್ಗಾವಧಿಗೆ ಭೋಗ್ಯಕ್ಕೆ ಪಡೆದುಕೊಳ್ಳಬಹುದು.

20.6 ಸರ್ಕಾರಿ ಸ್ವಾಮ್ಯದ ಕೃಷಿ ಭೂಮಿಯನ್ನೂ ಕಡಿಮೆ ಬೆಲೆ ನಿಗಧಿಪಡಿಸಿ ದೀರ್ಘಾವಧಿ ಭೋಗ್ಯಕ್ಕೆ ಕೃಷಿ ಆಧಾರಿತ ಕೈಗಾರಿಕೆ ಮತ್ತು ಸಂಬಂಧಿತ ಸೌಕರ್ಯಗಳನ್ನು ನಿರ್ಮಿಸುವ ಉದ್ದೇಶಗಳಿಗೆ ಕೊಡಲಾಗುವುದು.

## 21 ಕೃಷಿ ಆಧಾರಿತ ಕೃಗಾರಿಕೆಗಳಿಗೆ ಮತ್ತು ಕೃಷಿ ಸಂಬಂಧಿತ ಮೂಲಭೂತ ಸೌಕರ್ಯಗಳಿಗೆ ಹಣ ಹೂಡಿಕೆ

21.1 2009-14ರ ಕರ್ನಾಟಕ ಕೈಗಾರಿಕಾ ನೀತಿಯು ರಾಜ್ಯದ ತಾಲ್ಲೂಕುಗಳನ್ನು, ಅವುಗಳಲ್ಲಿನ ಹಿನ್ನೆಡೆಯ ಆಧಾರದ ಮೇಲೆ ಹಾಗೂ ಡಾ॥ ಡಿ ಎಮ್ ನಂಜುಂಡಪ್ಪ ಕಮಿಟಿಯ ವರದಿಯ ವಿಶಾಲವಾದ ಮಾರ್ಗಸೂಚಿಗಳನ್ನು ಆಧರಿಸಿ ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಆದಾಗ್ಯೂ ಕೃಷಿ ಹಾಗೂ ಕೃಷಿ ಸಂಬಂಧಿತ ವಲಯಗಳನ್ನು ತ್ವರಿತಗತಿಯಲ್ಲಿ ಅಭಿವೃದ್ಧಿಪಡಿಸಲು, ಈ ನೀತಿ ರಾಜ್ಯದೆಲ್ಲೆಡೆ ಕೆಳಗೆ ನಮೂದಿಸಿರುವಂತಹ ಉತ್ತೇಜನವನ್ನು ನೀಡುತ್ತಿದೆ.

21.1.1 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲಭೂತ ಸೌಕರ್ಯಗಳಿಗೆ ಸ್ಟ್ಯಾಂಪ್ ಶುಲ್ಕ ಮನ್ನ:

ಸ್ಟ್ಯಾಂಪ್ ಶುಲ್ಕವನ್ನು ಪಾವತಿಸಬೇಕಾಗಿರುವುದು:-

- ಸಾಲ ಒಡಂಬಡಿಕೆಗಳ ಮೇಲೆ, ಸಾಲಪತ್ರಗಳ ಮೇಲೆ, ರಾಜ್ಯ ಸರ್ಕಾರ ಅಥವಾ ರಾಜ್ಯ ಆರ್ಥಿಕ ಸಂಸ್ಥೆಗಳಿಂದ, ಇಂಡಸ್ಟ್ರಿಯಲ್ ಡೆವೆಲಪ್ಮೆಂಟ್ ಕಾರ್ಪೊರೇಷನ್‌ನಿಂದ, ರಾಷ್ಟ್ರ ಮಟ್ಟದ ಆರ್ಥಿಕ

ಸಂಸ್ಥೆಗಳಿಂದ, ಕಮರ್ಷಿಯಲ್ ಬ್ಯಾಂಕ್‌ಗಳಿಂದ, ರೀಜನಲ್ ರೂರಲ್ ಬ್ಯಾಂಕ್‌ಗಳಿಂದ, ಸಹಕಾರಿ ಬ್ಯಾಂಕ್‌ಗಳಿಂದ ಕರ್ನಾಟಕ ಖಾದಿ ಮತ್ತು ಗ್ರಾಮೀಣ ಸಂಸ್ಥೆ (ಕೆವಿಐಬಿ) / ಖಾದಿ ಎಂಡ್ ವಿಲೇಜ್ ಇಂಡಸ್ಟ್ರೀಸ್ ಕಮಿಷನ್, (ಕೆವಿಐಸಿ), ಕರ್ನಾಟಕ ರಾಜ್ಯ ಎಸ್.ಸಿ/ ಎಸ್.ಟಿ ಡೆವೆಲಪ್ಮೆಂಟ್ ಕಾರ್ಪೊರೇಷನ್, ಕರ್ನಾಟಕ ಸ್ಟೇಟ್ ಮೈನಾರಿಟಿ ಡೆವೆಲಪ್ಮೆಂಟ್ ಕಾರ್ಪೋರೇಷನ್ ಮತ್ತು ಕಾಲಾನುಕಾಲಕ್ಕೆ ಪ್ರತಿ ಐದು ವರ್ಷಗಳಿಗೆ ಸರ್ಕಾರದಿಂದ ಗುರುತಿಸಿಕೊಂಡು ಮಾನ್ಯತೆ ಹೊಂದಿರುವ ಇತರ ಸಂಸ್ಥೆಗಳಿಂದ ಅಡಮಾನ ಪ್ರಕ್ರಿಯೆಯಿಂದ ದೀರ್ಘಾವಧಿ ಸಾಲ ಪಡೆದುಕೊಂಡಲ್ಲಿ ಮತ್ತು,

- ಕೈಗಾರಿಕಾ ಸಂಸ್ಥೆಗಳು ಕೈಗಾರಿಕೆಗೆ ಗುರುತಿಸುವ ಜಾಗಗಳು, ಶೆಡ್ಡುಗಳು, KIADB, KSIIDC, KSSIDCಯಿಂದ ಕೈಗಾರಿಕೆಗಾಗಿ ಬಾಡಿಗೆಗೆ ಪಡೆದುಕೊಳ್ಳುವ, ಕೈಗಾರಿಕಾ ಎಸ್ಟೇಟುಗಳಿಗಾಗಿ ಮಾಡಿಕೊಳ್ಳುವ ಭೋಗ್ಯ ಪತ್ರಗಳು, ಭೋಗ್ಯ- ಕ್ರಯಪತ್ರಗಳು (ಲೀಸ್ ಕಮ್ ಸೇಲ್), ಮತ್ತು ಕ್ರಯ ಪತ್ರಗಳ ಮೇಲೆ ಶೇಕಡ ಐವತ್ತರಷ್ಟು ಮನ್ನ ಮಾಡಲಾಗುವುದು.

21.1.2 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲಭೂತ ಸೌಕರ್ಯಗಳ ಸಂಸ್ಥೆಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ

- ಎಲ್ಲಾ ಸಾಲ ಪತ್ರಗಳ ಮೇಲೆ ಮತ್ತು ಮೇಲ್ಕಾಣಿಸಿರುವ (ii)ರಲ್ಲಿ ನಮೂದಿಸಿರುವಂತೆ, ನೋಂದಣಿ ಶುಲ್ಕವನ್ನು ರಿಯಾಯಿತಿ ದರದಲ್ಲಿ ಅಂದರೆ ಸಾವಿರ ರೂಪಾಯಿಗೆ ಒಂದು ರೂಪಾಯಿಯಂತೆ ಕಟ್ಟಿಸಿಕೊಳ್ಳಲಾಗುವುದು.
- ಸ್ಟ್ಯಾಂಪ್ ಶುಲ್ಕ ಮನ್ನ ಮತ್ತು ನೋಂದಣಿ ಶುಲ್ಕದಲ್ಲಿನ ರಿಯಾಯಿತಿಯನ್ನು ಕರ್ನಾಟಕ ಲ್ಯಾಂಡ್ ರಿಫಾರ್ಮರ್ಸ್ ಆ್ಯಕ್ಟ್‌ನ ಸೆಕ್ಷನ್ ೧೯೪ರಡಿಯಲ್ಲಿ ಮತ್ತು ಕೈಗಾರಿಕೆಗೆ ಪರಿವರ್ತಿಸಿರುವ ಭೂಮಿಯನ್ನು SHLCC/ SLSWCC/ DLSWCCWಗಳು ಅಂಗೀಕರಿಸಿರುವ ಉದ್ದಿಮೆ ಸ್ಥಾಪಿಸುವುದಕ್ಕಾಗಿ ನೇರವಾಗಿ ಕೊಂಡಲ್ಲಿ ಅದಕ್ಕೂ ಅನ್ವಯಿಸುತ್ತದೆ. ಉತ್ತೇಜನ ಭತ್ಯೆ KIADBಯಿಂದ ಭೂಮಾಲೀಕರಿಗೆ ಹಸ್ತಾಂತರಿಸಿದ ಜಾಗವನ್ನು ಪರಿಹಾರವಾಗಿ ಪಡೆದುಕೊಂಡ ಜಾಗಕ್ಕೆ ಬದಲಾಗಿ ಕೊಡಲಾಗುತ್ತದೆ.
- ಸ್ಟ್ಯಾಂಪ್ ಶುಲ್ಕ ಮನ್ನ ಮತ್ತು ನೋಂದಣಿ ಶುಲ್ಕದಲ್ಲಿನ ರಿಯಾಯಿತಿಯನ್ನು ಕೈಗಾರಿಕಾ ಸಂಸ್ಥೆಗಳು ಕೈಗಾರಿಕೆಗೆ ಗುರುತಿಸುವ ಜಾಗಗಳು, ಶೆಡ್ಡುಗಳು, ಪ್ಲಾಟುಗಳು ಭೋಗ್ಯಕ್ಕೆ ನಿಗದಿತ ಶುಲ್ಕ ನೀಡಿ ಒಂದು ಅವಧಿಗೆ ಭೋಗ್ಯ-ಕ್ರಯ ಪತ್ರ ಮಾಡಿ ನೋಂದಣಿ ಮಾಡಿಕೊಳ್ಳುವುದಕ್ಕೂ ವಿಸ್ತರಿಸಲಾಗುತ್ತದೆ.

21.1.3 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲಭೂತ ಸೌಕರ್ಯಗಳ ಸಂಸ್ಥೆಗಳಿಗೆ ಪ್ರವೇಶ ಶುಲ್ಕ ಮನ್ನಾ

- ಕಾರ್ಖಾನೆ ಮತ್ತು ಯಂತ್ರ ಮತ್ತು ಬಂಡವಾಳ ವಸ್ತುಗಳ ಮೇಲೆ ಉದ್ದೇಶಿತ ಉದ್ದಿಮೆಯ ಸ್ಥಾಪನೆಯಾದ ದಿನದಿಂದ ಮೂರು ವರ್ಷದ ತನಕ ಪ್ರವೇಶ ಶುಲ್ಕದಲ್ಲಿ ಶೇಕಡ ನೂರರಷ್ಟು ವಿನಾಯಿತಿ. ಈ ಉದ್ದೇಶಕ್ಕಾಗಿಯೇ ಕಾರ್ಖಾನೆ ಮತ್ತು ಯಂತ್ರ ಮತ್ತು ಬಂಡವಾಳ ವಸ್ತುಗಳು ಎಂದು ಸಂಭೋದಿಸಿದಾಗ ಕೈಗಾರಿಕೆ ಮತ್ತದರಲ್ಲಿನ ಯಂತ್ರೋಪಕರಣಗಳು ಇತ್ಯಾದಿ, ವಿದ್ಯುತ್ ಉತ್ಪಾದನೆಗೆ ಬಳಸುವ ಯಂತ್ರಗಳು, ಸಂಸ್ಕರಣೆ ಮತ್ತು ಕಚ್ಚಾ ವಸ್ತುಗಳು, ಪರಿಕರಗಳು ಇತರೆ ಅಗತ್ಯ ವಸ್ತುಗಳ ಬಳಕೆ ವಸ್ತುಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು

21.1.4 ರಫ್ತುದಾರಿಕೆಯಲ್ಲಿ ತೊಡಗಿರುವ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಉತ್ತೇಜನೆ

- ಶೇಕಡ ನೂರರಷ್ಟು ರಫ್ತುದಾರಿಕೆಯಲ್ಲೇ ತೊಡಗಿರುವ ಸಂಸ್ಥೆಗಳ ಕಾರ್ಖಾನೆ ಮತ್ತು ಯಂತ್ರ ಮತ್ತು ಬಂಡವಾಳ ವಸ್ತುಗಳ ಮೇಲೆ ಆರಂಭದಿಂದ ಐದು ವರ್ಷಗಳ ತನಕ ಶೇಕಡ ನೂರರಷ್ಟು ಪ್ರವೇಶ ಶುಲ್ಕದಲ್ಲಿ ವಿನಾಯಿತಿ ಕೊಡಲಾಗುವುದು. ಈ ಉದ್ದೇಶಕ್ಕಾಗಿಯೇ ಕಾರ್ಖಾನೆ ಮತ್ತು ಯಂತ್ರ ಮತ್ತು ಬಂಡವಾಳ ವಸ್ತುಗಳು ಎಂದು ಸಂಭೋದಿಸಿದಾಗ ಕೈಗಾರಿಕೆ ಮತ್ತದರಲ್ಲಿನ ಯಂತ್ರೋಪಕರಣಗಳು ಮತ್ತು ಇತ್ಯಾದಿ, ಅಲ್ಲದೆ ವಿದ್ಯುತ್ ಉತ್ಪಾದನೆಗೆ ಬಳಸುವ ಯಂತ್ರಗಳು, ಸಂಸ್ಕರಣೆ ಇವುಗಳನ್ನೊಳಗೊಳ್ಳುತ್ತದೆ. ಕಚ್ಚಾ ವಸ್ತುಗಳು, ಬಿಡಿ ಭಾಗಗಳು ಇತರೆ ಅಗತ್ಯ ವಸ್ತುಗಳ, ಬಳಕೆ ವಸ್ತುಗಳ (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) ಮೇಲೆ ಶೇಕಡ ನೂರರಷ್ಟು ಪ್ರವೇಶ ಶುಲ್ಕವನ್ನು ವಾಣಿಜ್ಯ ರೀತ್ಯಾ ಉತ್ಪಾದನೆ ಆರಂಭಿಸಿದ ದಿನದಿಂದ ಐದು ವರ್ಷಗಳವರೆಗೆ ವಿನಾಯಿತಿ ನೀಡಲಾಗುವುದು.

21.1.5 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲಗಳ ಸಂಸ್ಥೆಗಳಿಗೆ APMC ಕರ ಮನ್ನ

- APMC ಶುಲ್ಕಕ್ಕೆ ಸಂಬಂಧಿಸಿದಂತೆ ಕೃಷಿ ಉತ್ಪನ್ನಗಳು ಷೆಡ್ಯೂಲ್‌ನಲ್ಲಿ ನಿಗದಿಪಡಿಸಿದಂತೆ (1980ರ ಕಾಯ್ದೆ ಸಂಖ್ಯೆ 17, ದಿ 30-6-1979 ರಿಂದ ಅನ್ವಯವಾಗುವಂತೆ) ಕ್ರ.ಸಂಖ್ಯೆ ii, iii, iv, vi, vii, ix, x ಕರ್ನಾಟಕ APMC (ಶಾಸನ ಮತ್ತು ಅಭಿವೃದ್ಧಿ) ಕಾಯ್ದೆ ೧೯೬೬ರ ಪ್ರಕಾರ ರೈತರಿಂದ ನೇರವಾಗಿ ಕೃಷಿ ಉತ್ಪನ್ನಗಳನ್ನು ಸಂಸ್ಕರಣೆ ಮಾಡಲು ಖರೀದಿಸಿದ ಹೊಸ ಮತ್ತು ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕೈಗಾರಿಕೆಗಳ ಮೇಲೆ APMC ಕರವನ್ನು ಐದು ವರ್ಷಗಳವರೆಗೆ ಶೇಕಡ ಇಪ್ಪತ್ತೈದರವರೆಗೆ ಕಡಿಮೆಗೊಳಿಸಲಾಗುವುದು.

21.1.6 MSME - ಅತಿಸಣ್ಣ, ಸಣ್ಣ ಮತ್ತು ಮಧ್ಯಮ ದರ್ಜೆಯ, ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಮೂಲ ಸೌಕರ್ಯಗಳ ಸಂಸ್ಥೆಗಳು ETP ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಲು ಸಿಗುವ ಸಹಾಯ ಧನ

- ಒಂದು ಬಾರಿ ಶೇಕಡ ಐವತ್ತರಷ್ಟು ಸಹಾಯಧನವನ್ನು ತ್ಯಾಜ್ಯ ಸಂಸ್ಕರಣಾ ಘಟಕದ ಬಂಡವಾಳದ ವೆಚ್ಚದ ಮೇಲೆ ಗರಿಷ್ಠ ಮಿತಿ ನೂರು ಲಕ್ಷ ರೂಗಳಷ್ಟು ಗರಿಷ್ಠ ಐನೂರು ಲಕ್ಷ ರೂಗಳವರೆಗೆ ಕೃಷಿ ಸೌಕರ್ಯಗಳಿಗೆಂದು ಮಾಡಿದ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ನೀಡಲಾಗುವುದು.

21.1.7 ದೊಡ್ಡ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮೌಲ್ಯ ವರ್ಧಿತ ತೆರಿಗೆಯ ಮೇಲೆ ಬಡ್ಡಿ ರಹಿತ ಸಾಲ

- ಎಲ್ಲಾ ಹೊಸ ಮತ್ತು ಬೃಹತ್ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮೌಲ್ಯ ವರ್ಧಿತ ತೆರಿಗೆ ಮೇಲೆ ಬಡ್ಡಿ ರಹಿತ ಸಾಲವನ್ನು ಕೆಳಕಂಡಂತೆ ನೀಡಲಾಗುವುದು.

| ಸ್ಥಿರ ಸ್ವತ್ತು ಮತ್ತು ಯಂತ್ರೋಪಕರಣಗಳ ಮೇಲೆ ಬಂಡವಾಳ ಹೂಡಿಕೆಯ ಶ್ರೇಣಿ (ರೂಪಾಯಿ ಕೋಟಿಗಳಲ್ಲಿ) | ಕನಿಷ್ಠ ನೇರ ಉದ್ಯೋಗಾವಕಾಶ (ಸಂಖ್ಯೆಗಳಲ್ಲಿ) | ಬಡ್ಡಿ ರಹಿತ ಸಾಲದ ಮೊತ್ತ |
|---|---|---|
| 10 – 50 | ಕನಿಷ್ಠ ನೂರು ಪ್ರತಿ ಹತ್ತು ಕೋಟಿ ರೂಪಾಯಿಗಳ ಹೂಡಿಕೆಗೆ ಇಪ್ಪತ್ತು ರೂಗಳಂತೆ | ಐದು ವರ್ಷಗಳಿಗೆ ಲೆಕ್ಕ ಹಾಕಲಾದ ಒಟ್ಟು ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಐವತ್ತರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ನೂರರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಐದು ವರ್ಷಗಳ ನಂತರ ಮೂರು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |
| 51-250 | ಕನಿಷ್ಠ ಇನ್ನೂರು ಮತ್ತು ಪ್ರತಿ ಐವತ್ತು ಕೋಟಿ ರೂಪಾಯಿಗಳ ಹೂಡಿಕೆಗೆ ಇಪ್ಪತ್ತು ರೂಗಳಂತೆ | ಆರು ವರ್ಷಗಳಿಗೆ ಲೆಕ್ಕ ಹಾಕಲಾದ ಒಟ್ಟು ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಎಪ್ಪತ್ತೈದ್ದರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ಎಪ್ಪತ್ತೈದರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಆರು ವರ್ಷಗಳ ನಂತರ ಮೂರು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |
| 251-1000 | ಮುನ್ನೂರು ಕೋಟಿ ರೂಗಳವರೆಗೆ ಕನಿಷ್ಠ ನಾನ್ನೂರು ಉದ್ಯೋಗಾವಕಾಶ ಮತ್ತು ಪ್ರತಿ ನೂರು ಕೋಟಿ ರೂಗಳ ಹೂಡಿಕೆಗೆ ಐವತ್ತು ರೂಗಳಂತೆ | ಏಳು ವರ್ಷಗಳಿಗೆ ಲೆಕ್ಕ ಹಾಕಲಾದ ಒಟ್ಟು ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಇಪ್ಪತ್ತೈದ್ದರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ಐವತ್ತರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಏಳು ವರ್ಷಗಳ ನಂತರ ನಾಲ್ಕು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |
| 1001-3000 | ಸಾವಿರ ಕೋಟಿ ರೂಗಳವರೆಗೆ ಕನಿಷ್ಠ ಏಳು ನೂರೈವತ್ತು ಉದ್ಯೋಗಾವಕಾಶ ಮತ್ತು ಪ್ರತಿ ನೂರು ಕೋಟಿ ರೂಗಳ ಹೂಡಿಕೆಗೆ ಇಪ್ಪತ್ತೈದು ರೂಗಳಂತೆ | ಹತ್ತು ವರ್ಷಗಳಿಗೆ ಲೆಕ್ಕ ಹಾಕಲಾದ ಒಟ್ಟು ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಇಪ್ಪತ್ತೈದರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ ನೂರರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಹತ್ತು ವರ್ಷಗಳ ನಂತರ ನಾಲ್ಕು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |
| 3000ಕ್ಕೆ ಮೇಲ್ಪಟ್ಟು | ಒಂದು ಸಾವಿರದ ಇನ್ನೂರೈವತ್ತು | ಹನ್ನೆರಡು ವರ್ಷಗಳಿಗೆ ಲೆಕ್ಕ ಹಾಕಲಾದ ಗ್ರಾಸ್ ವ್ಯಾಟ್ ತೆರಿಗೆಯ ಮೊತ್ತದ ಶೇಕಡ ಇಪ್ಪತ್ತೈದರಷ್ಟು. ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇಕಡ |

| | | |
|---|---|---|
| | | ಐವತ್ತರಷ್ಟು ಮಿತಿಗೆ ಒಳಪಟ್ಟು. ಈ ಸಾಲವನ್ನು ಹನ್ನೆರಡು ವರ್ಷಗಳ ನಂತರ ಐದು ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು |

- ಹೂಡಿಕೆ ವ್ಯಾಪ್ತಿ ಮತ್ತು ಅದಕ್ಕೆ ಸಮರ್ಪಕವಾದ ನೇರ ಉದ್ಯೋಗಾವಕಾಶಗಳ ಮಧ್ಯೆ ಘರ್ಷಣೆಯುಂಟಾದಲ್ಲಿ; ಹೂಡಿಕೆಯ ಅಥವಾ ಕನಿಷ್ಠ ನೇರ ಉದ್ಯೋಗಾವಕಾಶ ಆಧಾರದ ಮೇಲೆ ಕನಿಷ್ಠ ಲಾಭಾಂಶವೇ ಅನ್ವಯಿಸುವ ಹಂತವಾಗಿರುತ್ತದೆ.

21.1.8 ಕೃಷಿ ಆಧಾರಿತ ಕೈಗಾರಿಕೆಗಳಿಗೆ ಮತ್ತು ಕೃಷಿ ಸಂಬಂಧ ಮೂಲಸೌಕರ್ಯಕ್ಕೆ ವಿದ್ಯುತ್ ತೆರಿಗೆಯಿಂದ ವಿನಾಯಿತಿ

- ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕೃಷಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಘಟಕಗಳಿಗೆ 5 ವರ್ಷಗಳು / 4 ವರ್ಷಗಳು / 3 ವರ್ಷಗಳ ಕಾಲ ಶೇಖಡ ನೂರರಷ್ಟು ವಿದ್ಯುತ್ ಸುಂಕ / ತೆರಿಗೆಯನ್ನು ಅನುಕ್ರಮವಾಗಿ ವಲಯ 1 / ವಲಯ 2 ಮತ್ತು ವಲಯ 3 ರಲ್ಲಿ ಮನ್ನಾ ಮಾಡಲಾಗುವುದು.

21.1.9 ಆಯ್ದ ವಲಯಗಳಲ್ಲಿ ವಿಶೇಷ ಪ್ರೋತ್ಸಾಹಗಳು

21.1.9.1 ಕೃಷಿ ಆಧಾರಿತ ಕೈಗಾರಿಕೆ - ಆಂಕರ್ ಘಟಕ ಸಹಾಯಧನ

- ಕೃಷಿ ಆಧಾರಿತ ಕೈಗಾರಿಕೆ ವಲಯ 1, 2 ಮತ್ತು 3ರ ಪ್ರತಿ ತಾಲೂಕಿನಲ್ಲಿ ಕನಿಷ್ಠ ನೂರು ಜನರಿಗೆ ಉದ್ಯೋಗ ನೀಡುವ ಕನಿಷ್ಠ ಐವತ್ತು ಕೋಟಿ ರೂಪಾಯಿಗಳ ಬಂಡವಾಳ ಹೂಡಿರುವ ಆಂಕರ್ ಘಟಕಗಳಿಗೆ ಸಹಾಯಧನ ನೀಡಲಾಗುವುದು. ಈ ಸಹಾಯಧನವು ಐವತ್ತು ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯುಳ್ಳ ಕೈಗಾರಿಕಾ ಉದ್ಯಮಗಳು ಪ್ರಸಕ್ತ ಇಲ್ಲದಿರುವ ತಾಲೂಕುಗಳಿಗೆ ಮಾತ್ರ ಅನ್ವಯವಾಗುತ್ತದೆ.

21.1.9.2 ಎಚ್ ಡಿ ಐ ಜಿಲ್ಲೆಗಳಲ್ಲಿ ಪ್ರಸ್ತಾವಿತ ಕೃಷಿ ಆಧಾರಿತ ಕೈಗಾರಿಕೆಗಳಿಗೆ ವಿಶೇಷ ಭತ್ಯೆಗಳು. ಬೃಹತ್ ಮತ್ತು ಮೆಗಾ ಯೋಜನೆಗಳಿಗೆ ಮಾತ್ರ ಅನ್ವಯಿಸುತ್ತದೆ

- ಮಾನವ ಅಭಿವೃದ್ಧಿ ಸೂಚ್ಯಂಕ ಕೆಳಮಟ್ಟದಲ್ಲಿರುವ ಆರು ಜಿಲ್ಲೆಗಳಲ್ಲಿ (ಬಾಗಲಕೋಟೆ, ಬಿಜಾಪುರ, ಕೊಪ್ಪಳ, ಚಾಮರಾಜನಗರ, ಗುಲ್ಬರ್ಗ ಮತ್ತು ರಾಯಚೂರು) ಪ್ರಸ್ತಾಪಿತ ಬೃಹತ್ ಮತ್ತು ಮೆಗಾಯೋಜನೆಗಳಿಗೆ ಮತ್ತು ಡಾ|| ಸರೋಜಿನಿ ಮಹಿಷಿ ಶಿಫಾರಸಿನನ್ವಯ ಕನಿಷ್ಠ ಶೇಕಡ ಎಪ್ಪತ್ತೈದರಷ್ಟು ಸ್ಥಳೀಯರಿಗೆ ಉದ್ಯೋಗ ನೀಡುವ ಉದ್ಯಮಕ್ಕೆ ವಿಶೇಷ ಉತ್ತೇಜನ ನೀಡಲಾಗುವುದು. ಇದರನ್ವಯ ಉದ್ಯೋಗಿಗಳ ಭವಿಷ್ಯನಿಧಿ ಮತ್ತು ಕಾರ್ಮಿಕ ವಿಮಾ ಯೋಜನೆ ಪ್ರಕಾರ ಉದ್ಯೋಗದಾರರು ಮೊದಲ ಐದು ವರ್ಷಗಳಲ್ಲಿ ನೀಡಬೇಕಾಗಿರುವ ವಂತಿಗೆ ಹಣದ ಶೇಕಡ ಎಪ್ಪತ್ತೈದರಷ್ಟನ್ನು ಹಿಂಪಾವತಿ ಮಾಡಲಾಗುವುದು.
- ಈ ಸೌಲಭ್ಯವು ಪ್ರಾರಂಭದ ಐದು ವರ್ಷಗಳವರೆಗೆ ಇದ್ದು, ಈ ರೀತಿ ಹಿಂಪಾವತಿ ಮಾಡುವ ಒಟ್ಟು ಮೊತ್ತವು ಸ್ಥಿರ ಸ್ವತ್ತುಗಳಲ್ಲಿ ಹೂಡಿದ ಬಂಡವಾಳದ ಶೇಕಡ ಇಪ್ಪತ್ತೈದಕ್ಕೆ

ಸೀಮಿತವಾಗಿರುವುದು. ವಾರ್ಷಿಕವಾಗಿ ಹಿಂಪಾವತಿ ಮಾಡುವ ಮೊತ್ತವು ಕಾನೂನು ಪ್ರಕಾರ ಕನಿಷ್ಠ ವಂತಿಗೆಗೆ ಸಮನಾಗಿದ್ದು, ಉದ್ಯೋಗದಾತರು ತಮ್ಮ ಪಾಲಿನ ವಂತಿಗೆಯನ್ನು ಕ್ಲಿಪ್ತ ಕಾಲಕ್ಕೆ ESI ಮತ್ತು EPFಗೆ ಪಾವತಿ ಮಾಡಿದ ಸಂದರ್ಭದಲ್ಲಿ ಮಾತ್ರ ಲಭ್ಯವಿರುವುದು.

21.1.9.3 ಅತಿ ಸಣ್ಣ ಘಟಕಗಗಳಡಿಯಲ್ಲಿ ಬರುವ ಕೃಷಿ ಆಧಾರಿತ ಕೈಗಾರಿಕೆಗೆ ಬಡ್ಡಿ ಸಹಾಯಧನ

- ಅವಧಿ ಸಾಲದ ಶೇಕಡ ಐದರಷ್ಟು ಬಡ್ಡಿ ಸಹಾಯಧನವನ್ನು ಅತಿ ಸಣ್ಣ ಘಟಕಗಳಡಿಯಲ್ಲಿ ಬರುವ ಕೃಷಿ ಆಧಾರಿತ ಕೈಗಾರಿಕೆಗೆ ನೀಡಲಾಗುವುದು. ಹಣಕಾಸು ಸಂಸ್ಥೆಗಳಿಗೆ ನೀಡುವ ಬಡ್ಡಿ ಸಹಾಯ ಧನ ನಿಜವಾಗಿಯೂ ಪಾವತಿ ಮಾಡಿದ ಬಡ್ಡಿಯ ಮೇಲೆಯೇ ಹೊರತು ಸುಸ್ತಿಯಾದ ಅಸಲು ಅಥವಾ ಬಡ್ಡಿಯ ಮೇಲೆ ಅನ್ವಯವಾಗುವುದಿಲ್ಲ. ಬಡ್ಡಿ ಸಹಾಯಧನವು ಪರಿಣಾಮಕಾರಿ ಬಡ್ಡಿದರ, ಯಾವುದೇ ಸಂಸ್ಥೆಯಿಂದ ಬರತಕ್ಕ / ಕೇಂದ್ರ ಸರಕಾರದ ಯಾವುದೇ ಯೋಜನೆಯನ್ವಯ ಅಥವಾ ಶೇಕಡ ಐದರಷ್ಟು, ಇದರಲ್ಲಿ ಯಾವುದು ಕಡಿಮೆಯೋ ಅದು ಐದು ವರ್ಷಕ್ಕೆ ಬಡ್ಡಿ ಸಹಾಯಧನವಾಗುವುದು.

21.1.10 ಸಣ್ಣ ಮತ್ತು ಅತಿ ಸಣ್ಣ ಉತ್ಪಾದನಾ ಕೃಷಿ ಆಧಾರಿತ ಉದ್ಯಮಗಳ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಲು, ಗುಣ ಮಟ್ಟ ಪ್ರಮಾಣ ಪತ್ರ ಹಾಗೂ ಪೇಟೆಂಟ್ ನೋಂದಾಯಿಸಲು ಉತ್ತೇಜನ

- ತಂತ್ರಜ್ಞಾನ ಮೇಲ್ದರ್ಜೀಕರಿಸುವ ಸಾಲಕ್ಕೆ ಬಡ್ಡಿ ಸಹಾಯಧನ: ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಲು KSFC, KSIIDC ಮತ್ತು ಷೆಡ್ಯೂಲ್ ಬ್ಯಾಂಕುಗಳಿಂದ ಪಡೆದ, ಆದರೆ ಕೇಂದ್ರ ಸರಕಾರದ CLCSSಗೆ ಒಳಗಾಗದ ಅವಧಿ ಸಾಲದ ಮೇಲೆ ಶೇಕಡ ಐದರಷ್ಟು ಸಹಾಯಧನ.
- ಬಿಐಎಸ್ ಪ್ರಮಾಣ ಪತ್ರ: ಬಿಐಎಸ್‌ಗೆ ನೀಡಲಾದ ಶುಲ್ಕದ ಶೇಕಡ ಐವತ್ತರಷ್ಟು (ಗರಿಷ್ಠ ಇಪ್ಪತ್ತು ಸಾವಿರ ರೂಪಾಯಿಗಳ) ಮತ್ತು ಬಿಐಎಸ್‌ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿಗಾಗಿ ಮಾಡಿದ ವೆಚ್ಚದ ಶೇಕಡ ಇಪ್ಪತ್ತೈದರಷ್ಟು (ಗರಿಷ್ಠ ಐವತ್ತು ಸಾವಿರ ರೂಪಾಯಿಗಳು)
- ಅತಿ ಸಣ್ಣ ಕೃಷಿ ಘಟಕಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಐದು ಲಕ್ಷ ರೂಪಾಯಿಗಳ ಮಿತಿ ಇದ್ದಲ್ಲಿ ಆರ್ಥಿಕ ಸಹಾಯ ಧನ ಶೇಕಡ ಐವತ್ತರಷ್ಟನ್ನು ಸಣ್ಣ ಮತ್ತು ಚಿಕ್ಕ ಪ್ರಮಾಣದ ಘಟಕಗಳಿಗೆ ಕೊಡಲಾಗುವುದು. ಆ ಘಟಕಗಳ ಉತ್ಪಾದನೆಯು ವಿಶ್ವಾದ್ಯಂತ ಅಂಗೀಕರಿಸುವ ಗುಣ ಮಟ್ಟವನ್ನು ಕಾಯ್ದುಕೊಳ್ಳಲು ಹೆಚ್ ಎ ಸಿ ಸಿ ಪಿ ಯಿಂದ ಪ್ರಮಾಣೀಕರಿಸಿಬೇಕು ಅಥವಾ ಆಮದು ಮಾಡುವ ದೇಶಗಳು ಜಾಗತಿಕ ಮಟ್ಟದಲ್ಲಿ ರೂಪಿಸಿರುವ ಅಂಥದೇ ಸಂಸ್ಥೆಯಿಂದ ಪ್ರಮಾಣೀಕರಿಸುವುದರಿಂದ ರಫ್ತುಗಾರಿಕೆಗೆ ಪ್ರೋತ್ಸಾಹ ನೀಡುತ್ತದೆ.
- ಪೇಟೆಂಟ್ ನೋಂದಣಿ: ಪೇಟೆಂಟ್ ಕಚೇರಿಗೆ ನೀಡಬೇಕಾದ ಶುಲ್ಕದ ಶೇಕಡ ಎಪ್ಪತ್ತೈದರಷ್ಟು (ಗರಿಷ್ಠ ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು) ಮತ್ತು ವಕಾಲತು ಶುಲ್ಕದ ಶೇಕಡ ಐವತ್ತರಷ್ಟು (ಗರಿಷ್ಠ ಎಪ್ಪತ್ತೈದು ಸಾವಿರ ರೂಪಾಯಿಗಳು)

- ತಂತ್ರಜ್ಞಾನ ಅಳವಡಿಕೆ: ಅಧಿಕೃತ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರಜ್ಞಾನವನ್ನು ಅಳವಡಿಸುವ ವೆಚ್ಚದ ಶೇಕಡ ಇಪ್ಪತ್ತೈದರಷ್ಟು (ಗರಿಷ್ಠ ಐವತ್ತು ಸಾವಿರ ರೂಪಾಯಿಗಳು)
- ಟೆಕ್ನಾಲೆಜಿ ಬಿಸಿನೆಸ್ ಇಂಕ್ಯುಬೇಷನ್ ಸೆಂಟರ್: ಯೋಜನಾ ವೆಚ್ಚದ ಶೇಕಡ ಇಪ್ಪತ್ತೈದರಷ್ಟು (ಗರಿಷ್ಠ ಐವತ್ತು ಲಕ್ಷ ರೂಪಾಯಿಗಳು)
- ಹಿಂದುಳಿದ ಮತ್ತು ವಿಶೇಷ ವಲಯಗಳಲ್ಲಿ ಮೊದಲು ಹೇಳಿದ ಉತ್ತೇಜನಾ ಭತ್ಯೆಗಿಂತ ಹೆಚ್ಚು ಕೊಡಬಹುದೆಂದು ಅನುಮೋದಿಸಲಾಗಿದೆ. ವಿಶೇಷ ವಲಯಗಳಲ್ಲಿ ಮತ್ತು ಹಿಂದುಳಿದ ವಲಯಗಳ ನಡುವಿನ ಸ್ಪರ್ಧಾತ್ಮಕ ಘರ್ಷಣೆಯಿಂದಾಗಿ ಸಹಾಯ ಧನ / ಭತ್ಯಗಳ ನೀತಿಯಲ್ಲಿ ಇನ್ನೂ ಹೆಚ್ಚಿಸಲಾಗುವುದು.

21.1.11 ಇತರ ಭತ್ಯೆಗಳು ಹಾಗೂ ರಿಯಾಯಿತಿಗಳು

- ಐದು ಲಕ್ಷ ರೂಪಾಯಿಯಷ್ಟು ಯೋಜನಾ ವೆಚ್ಚದ ಮಿತಿ ಇದ್ದಲ್ಲಿ ಯೋಜನಾ ವರದಿ ತಯಾರಿಸಲು ಕರ್ಚಾಗುವ ಶೇಕಡ ಐವತ್ತರಷ್ಟನ್ನು ಮರುಪಾವತಿ ಮಾಡಲಾಗುವುದು.
- ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಕೃಷಿ ಆಧಾರಿತ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು. ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳಲ್ಲಿ ನೆಡೆಸುವ ಪ್ರಾಯೋಜಿತ ಸಂಶೋಧನಾ ಚಟುವಟಿಕೆಗಳ ಶೇಕಡ ಐವತ್ತರಷ್ಟನ್ನು ಇಪ್ಪತ್ತು ಲಕ್ಷ ರೂಪಾಯಿಗಳ ಮಿತಿ ಇದ್ದಲ್ಲಿ ಪ್ರಾಯೋಜಿಸಲಾಗುವುದು.
- ರೂಪಾಯಿ ಐದು ಕೋಟಿ ಮಿತಿ ಇದ್ದಲ್ಲಿ ಸೆಂಟರ್ ಫಾರ್ ಎಕ್ಸೆಲೆನ್ಸ್ /ಬೆಳೆ ಅಭಿವೃದ್ಧಿ ಸಂಸ್ಥೆಗಳಿಗೆ ಭೂಮಿಯನ್ನು ಕಡಿಮೆ ಬೆಲೆಯಲ್ಲಿ ಒದಗಿಸಲಾಗುವುದು ಮತ್ತು ಪ್ರಾರಂಭಿಕ ಸೀಡ್ ಕ್ಯಾಪಿಟಲ್ ಮ್ಯಾಚಿಂಗ್‌ಗೆ ಶೇಕಡ ಐವತ್ತರಷ್ಟು ಪ್ರೋತ್ಸಾಹವನ್ನು ಕೃಷಿ ಆಧಾರಿತ ಕೈಗಾರಿಕೆಗೆ ನೀಡಲಾಗುವುದು.
- ಇತರೆ ವಲಯಗಳ ನಿರ್ದಿಷ್ಟ ಭತ್ಯೆ/ಗ್ರಾಂಟ್/ರಿಯಾಯಿತಿ/ಸಾಲ (ಸಾಫ್ಟ್ ಲೋನ್) ಮತ್ತು ಇನ್ನಿತರ ಯೋಜನೆಗಳಿಗೆ ಅನ್ವಯವಾಗುವ ಸೌಲಭ್ಯಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಲಾಗುವ ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕೃಷಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಘಟಕಗಳಿಗೆ ಕೊಡಲಾಗುವುದು. ಹೂಡಿಕೆದಾರರಿಗೆ ಹೆಚ್ಚಿನ ಸೌಲಭ್ಯ ಹಾಗೂ ಭತ್ಯೆ ಸಿಗಬೇಕಾದಲ್ಲಿ ನೀತಿಯಲ್ಲಿನ ಅವಕಾಶಗಳು ಮತ್ತು ನೀತಿಯಲ್ಲಿನ ಯೋಜನೆಗಳಲ್ಲಿ ಕಾನ್‌ಫ್ಲಿಕ್ಟ್ (ಘರ್ಷಣೆ) ಇರಬೇಕು.

21.1.12 ಕೃಷಿ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಬಡ್ಡಿಯಲ್ಲಿ ರಿಯಾಯಿತಿ

ರಾಜ್ಯ ಸರ್ಕಾರ ಈ ಕೆಳಗೆ ನಮೂದಿಸಲಾಗಿರುವ ಉತ್ತೇಜನಾ ಭತ್ಯಗಳನ್ನು/ಧನ ಸಹಾಯವನ್ನು ಕೃಷಿ ಉತ್ಪನ್ನ ಸ್ಥಳಗಳಿಂದ ಮಾರುಕಟ್ಟೆಗೆ ಸಾಗಿಸಲು ಪೂರಕವಾಗಿರುವ ಸಾರ್ವಜನಿಕ ಮೂಲಭೂತ ಸೌಕರ್ಯಗಳ ಯೋಜನೆಗಳಿಗೆ ನೀಡುತ್ತದೆ. ಬ್ಯಾಕ್ ಎಂಡೆಡ್ ಬಡ್ಡಿ ರಿಯಾಯಿತಿಗಳು ಹೀಗಿವೆ :-

- ಶೇಕಡ ಆರರಷ್ಟು ಬ್ಯಾಕ್ ಎಂಡೆಡ್ ಬಡ್ಡಿ ರಿಯಾಯಿತಿಯು ಕಾರ್ಯಾರಂಭದ ಮೊದಲ ಐದು ವರ್ಷಗಳವರೆಗೆ ಕೊಡಲಾಗುವುದು
- ಒಟ್ಟು ಬಡ್ಡಿ ರಿಯಾಯಿತಿಯು ನಾನ್ನೂರು ಲಕ್ಷ ರೂಪಾಯಿಗಳನ್ನು ಮೀರುವುದಿಲ್ಲ. ಮೂಲ ಬಂಡವಾಳಕ್ಕೆಂದು ದೇಶೀಯ ಆರ್ಥಿಕ ಸಂಸ್ಥೆಗಳಿಂದ/ಬ್ಯಾಂಕುಗಳಿಂದ ಹಣ ಪಡೆದಿದ್ದಲ್ಲಿ ಮಾತ್ರ ಬಡ್ಡಿ

- ಅರ್ಹ ಘಟಕಗಳು ಕಾಲಾನುಕಾಲಕ್ಕೆ ಸಾಲ ಮರುಪಾವತಿ ಮಾಡುತ್ತಿದ್ದಲ್ಲಿ ಮಾತ್ರ ಬಡ್ಡಿ ರಿಯಾಯಿತಿಯನ್ನು ಕೊಡಲಾಗುತ್ತದೆ.

## 22 ಜಾರಿತರುವ ದಿನಾಂಕ ಮತ್ತು ವಾಯಿದೆ (ಎಫೆಕ್ಟೀವ್ ಡೇಟ್ ಎಂಡ್ ವ್ಯಾಲಿಡಿಟಿ)

22.1 ಈ ನೀತಿಯು ದಿನಾಂಕ 22-02-2011 ರಿಂದ ಮುಂದಿನ ಸೂಚನೆ ಬರುವ ತನಕ ಜಾರಿಯಲ್ಲಿರುತ್ತದೆ.

## 23 ಉಪ-ವಲಯಗಳ ನೀತಿಗಳು

ಕರ್ನಾಟಕ ರಾಜ್ಯ ಸರ್ಕಾರ ಅನೇಕ ವಿಧವಾದ ಉಪ-ವಲಯ ನೀತಿಗಳನ್ನು ಈ ವಿಷಯ ಕುರಿತು ರೂಪಿಸಿದೆ. ಭತ್ಯೆಗಳು / ಇತರ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದಿದ್ದಲ್ಲಿ ಈ ಸಮಗ್ರ ನೀತಿಯನ್ನು ಕೆಳಗೆ ನಮೂದಿಸಿರುವ ನೀತಿಗಳ ಜೊತೆಯಲ್ಲಿ ಓದಿಕೊಳ್ಳಬೇಕಾಗುತ್ತದೆ.

- ಕರ್ನಾಟಕ ಕೃಷಿ ಕಾರ್ಯನೀತಿ 2006
- ಕರ್ನಾಟಕ ಕೈಗಾರಿಕಾ ಕಾರ್ಯನೀತಿ 2009-14
- ಕರ್ನಾಟಕ ರಾಜ್ಯ ಮೂಲಭೂತ ಸೌಕರ್ಯಗಳ ಕಾರ್ಯನೀತಿ 2007
- ಕರ್ನಾಟಕ ರಾಜ್ಯ ಸಾವಯವ ಕೃಷಿ ಕಾರ್ಯನೀತಿ 2004
- ಕರ್ನಾಟಕ ದ್ರಾಕ್ಷಿ ಸಂಸ್ಕರಣೆ ಮತ್ತು ವೈನ್ (ದ್ರಾಕ್ಷಾ ರಸ) ಕಾರ್ಯನೀತಿ, 2007
- ಕರ್ನಾಟಕ ಜಾನುವಾರು ಅಭಿವೃದ್ಧಿ ಕಾರ್ಯನೀತಿ 2010 (ಕರಡು)
- ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧಿನಿಯಮ

## 24 ಇತರ ಸಂಬಂಧಿತ ನೀತಿಗಳು

24.1 ಕರ್ನಾಟಕ ರಾಜ್ಯ ಸರ್ಕಾರ ಹಲವು ಬಗೆಯ ನೀತಿಗಳನ್ನು ಮಾಡಿ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುವು ಮಾಡಿಕೊಡುವುದು. ಇದಲ್ಲದೇ ಕೃಷಿ ಮಂತ್ರಾಲಯ APEDA, MPEDA, ರಾಷ್ಟ್ರೀಯ ತೋಟಗಾರಿಕಾ ಮಂಡಳಿ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮುಂತಾದ ಸಂಸ್ಥೆಗಳಿಂದ ಸಹಾಯಧನ / ಅನುಧಾನ ಹಾಗೂ ಹಲವಾರು ಯೋಜನೆಗಳು ಲಭ್ಯವಿವೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿತ ದಾಖಲೆಗಳನ್ನೇ ಪರಾಮರ್ಷಿಸಲು ಶಿಫಾರಸ್ಸು ಮಾಡಲಾಗಿದೆ.